ಸಂಪುಟ 15
ಸಂಚಿಕೆ 23

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

13 ಜೂನ್ 1993
ರೂ. 2.00

ಕಾಂಗ್ರೆ-ಬಿಜೆಪಿ ಕೂಟದ ವಿರುದ್ಧ

ಎಡರಂಗಕ್ಕೆ ಭಾರಿ ವಿಜಯ

ಕಾಂಗ್ರೆಸ್ ತನ್ನೆಲ್ಲಾವನ್ನೂ ಕಳೆದುಕೊಳ್ಳುತ್ತಿದೆ

--ಸುರ್ಜಿತ್

ಪಂಚಾಯತಿ ಚುನಾವಣೆಗಳಲ್ಲಿ ಪಶ್ಚಿಮಬಂಗಾಳದ ಜನತೆ ಸಿಪಿಐ(ಎಂ) ಹಾಗೂ ಎಡರಂಗಕ್ಕೆ ಮತ್ತೊಮ್ಮೆ ಭಾರಿ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಭಾರೀ ಕಾಂಗ್ರೆಸ್(ಐ) ಹಾಗೂ ಬಿಜೆಪಿ ಹಲವೆಡೆ ಬಹಿರಂಗ ಕೈಮಿಲಾಯಿಸಿರುವ ಹಾಗೂ ಎಡರಂಗ ಹಲವು ರಂಗಗಳಲ್ಲಿ ವಿಫಲವಾಗಿದೆ ಎಂಬ ಆ ಪಕ್ಷಗಳ ಬೃಹತ್ ಅಪಪ್ರಚಾರದ ಹಿನ್ನೆಲೆಯಲ್ಲಿ ಈ ಭಾರೀ ಬೆಂಬಲ ನೀಡಿರುವ ಪಶ್ಚಿಮಬಂಗಾಳದ ಜನತೆಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಹಾರ್ದಿಕವಾಗಿ ಅಭಿನಂದಿಸಿದ್ದಾರೆ.

ಪಶ್ಚಿಮಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಪಂಚಾಯತಿ ವ್ಯವಸ್ಥೆ ಲಕ್ಷಗಟ್ಟಲೆ ರೈತರ ಜೀವನದಲ್ಲೇ ಭಾರೀ ಪರಿವರ್ತನೆ ತಂದ ತೀವ್ರಗಾಮಿ ಕ್ರಮಗಳನ್ನು ಬದಲಿಸಲು ಕಾಂಗ್ರೆ ಹಾಗೂ ಬಿಜೆಪಿ ಕೈಮಿಲಾಯಿಸಿವೆ. "ಆದರೆ ಪಶ್ಚಿಮಬಂಗಾಳದ ಜನ ಅವರಿಗೆ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. ಭೂಸುಧಾರಣೆಗಳ ಮೂಲಕ ರೈತರ ಅತ್ಯಂತ ಶೋಷಿತ ದಲಿತ ವಿಭಾಗಗಳಿಗೆ ಪ್ರಯೋಜನ ದೊರೆತಿದೆ. ಪಂಚಾಯತಿಗಳಿಗೆ, ಬ್ಲಾಕ್ ಸಮಿತಿಗಳಿಗೆ, ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರದ ವಿಕೇಂದ್ರೀಕರಣದಿಂದಾಗಿ ಆಡಳಿತದಲ್ಲಿ ಮಾತ್ರವಲ್ಲ, ಅಭಿವೃದ್ಧಿ ಚಟುವಟಿಕೆಗಳಲ್ಲೂ ತಾವು ಪಾಲ್ಗೊಳ್ಳುವಂತಾಗಿದೆ. ಇದು ಎಡರಂಗದ ಕೊಡುಗೆ ಎಂಬುದನ್ನು ಈ ಮೂಲಕ ಪೂರ್ಣವಾಗಿ ಗುರುತಿಸಿದ್ದಾರೆ" ಎಂದು ಸುರ್ಜಿತ್ ನವದೆಹಲಿಯಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಾ ಹೇಳಿದ್ದಾರೆ.

"ಅವರೆಲ್ಲಾ, ವಿಶೇಷವಾಗಿ ಶೋಷಿತ ದಲಿತ ಜನ ಸಿಪಿಐ(ಎಂ) ಹಾಗೂ ಎಡರಂಗ ಸುತ್ತ ದೃಢವಾಗಿ ಅಣಿನೆರೆದಿದ್ದಾರೆ ಎಂಬುದು ಸುಸ್ಪಷ್ಟ. ಯಾವುದೇ ಸಮಯಸಾಧಕ ಕೂಟವೂ ಇದನ್ನು ಅಲುಗಾಡಿಸಲು ಸಾಧ್ಯವಿಲ್ಲ" ಎಂದು ಮುಂದುವರೆದು ಸುರ್ಜಿತ್ ನುಡಿದರು.

ಕಾಂಗ್ರೆಸ್ಸಿಗೇ ನಷ್ಟ

"ಈ ಚುನಾವಣೆಯಲ್ಲಿ ಯಾರಿಗಾದರೂ ನಷ್ಟವಾಗಿದ್ದರೆ ಅದು ಕಾಂಗ್ರೆಸ್ಸಿಗೇ.



ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಮಹಿಳಾ ಕಾರ್ಯಕರ್ತರು

> ಕೋಮುವಾದದ ವಿರುದ ಹೋರಾಟ ನಡೆಸುವ ಬದಲು ಕಾಂಗ್ರೆಸ್(ಐ) ಸೋಮಯಜ್ಞಗಳನ್ನು ನಡೆಸುವುದರಲ್ಲೇ ಹೆಚ್ಚು ಆಸಕ್ತಿ ತೋರುತ್ತಿದೆ. ಬಿಜೆಪಿಗಿಂತ ಹೆಚ್ಚು ಸಾಧುಗಳು ತಮ್ಮ ಬಳಿಯಿದ್ದಾರೆ ಎಂದು ತೋರಿಸ ಬಯಸುತ್ತಾರೆ. ಇದು ಅವರು ಕೋಮುವಾದವನ್ನು ಎದುರಿಸುವ ರೀತಿ

ಎಡಪಕ್ಷಗಳ ವಿರುದ್ಧ ಯಾವುದೇ ಸಮಯಸಾಧಕ ಮೈತ್ರಿ ಸಾಧಿಸಲು ಅದು ಯಾವ ಹೀನ ಮಟ್ಟಕ್ಕೂ ಹೋಗಲು ಸಿದ್ಧವಿದೆ ಎಂದು ತೋರಿಸಿ ಕೊಂಡಿದೆ. ಕೇರಳದಲ್ಲೂ ಅವರು ಅದನ್ನೇ ಮಾಡುತ್ತಿದ್ದಾರೆ. ಈ ಧೋರಣೆ ನೋಡಿದರೆ ಕಾಂಗ್ರೆಸ್(ಐ) ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವ ಕಾತುರ ಹೊಂದಿದೆ ಎಂಬ ವಿಶ್ವಾಸ ಯಾರಲ್ಲೂ ಮೂಡುವುದಿಲ್ಲ" ಎಂದು ಸುರ್ಜಿತ್ ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಬೆಳವಣಿಗೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದಾಗ ಸುರ್ಜಿತ್ ಎರಡು ಅಂಶಗಳು ಮೂಡಿ ಬಂದಿವೆ ಎಂದರು. ಮೊದಲನೆಯದಾಗಿ, ಕಾಂಗ್ರೆಸ್ ತನ್ನೆಲ್ಲವನ್ನೂ ಕಳೆಕೊಳ್ಳುತ್ತದೆ, ಏಕೆಂದರೆ ಅದು ತನ್ನ ಸಾಮೂಹಿಕ ನೆಲೆಯನ್ನು ಬಿಜೆಪಿಗೆ ಒಪ್ಪಿಸುತ್ತಿದೆ. ಎರಡನೆಯದಾಗಿ, ಗಡಿ ಪ್ರದೇಶಗಳಲ್ಲಿ ಬಿಜೆಪಿ ಬಾಂಗ್ಲಾ ದೇಶೀ ವಲಸೆಯ ಪ್ರಶ್ನೆಯನ್ನು ದುರುಪಯೋಗಪಡಿಸಿಕೊಂಡು ಜನಗಳನ್ನು 'ನಿಮ್ಮ ಭವಿಷ್ಯ ಅಪಾಯದಲ್ಲಿದೆ' ಎಂದು ಹೇಳುತ್ತಾ ತಪ್ಪುದಾರಿಗೆಳೆಯುತ್ತಿದೆ.

ಬಿಜೆಪಿಯಂತೆ ಅಮಾನುಷ ವರ್ತನೆ ಸಾಧ್ಯವಿಲ್ಲ

ಗಡಿ ಪ್ರದೇಶಗಳಲ್ಲಿ ಬಿಜೆಪಿ ಬೆಳವಣಿಗೆ ತಡೆಯಲು ಸಿಪಿಐ(ಎಂ) ಕಾರ್ಯತಂತ್ರ ರೂಪಿಸುವುದೇ ಎಂದು ಕೇಳಿದಾಗ ಖಂಡಿತವಾಗಿಯೂ ಸಿಪಿಐ(ಎಂ) ಚುನಾವಣಾ ಫಲಿತಾಂಶಗಳ ಪೂರ್ಣ ವಿಶ್ಲೇಷಣೆ ಮಾಡಿ ಕಾರ್ಯತಂತ್ರ ರೂಪಿಸುವುದು ಎಂದ ಸುರ್ಜಿತ್ "ಆದರೆ ನಾವು ಅಮಾನುಷವಾಗಿ ವರ್ತಿಸಲು

ಪುಟ 7ನೋಡಿ

ಕಾಂಗ್ರೆ, ಬಿಜೆಪಿಗಳು ಉತ್ತರ ನೀಡಲಿ

ಹತಾಶ ಪಕ್ಷಗಳಿಂದ ಹಿಂಸಾಚಾರ

ಪುಟ 7ನೋಡಿ

ಆರೆಸ್ಸೆಸ್ ನಿರ್ಬಂಧ ರದ್ದು

ಕಾಂಗ್ರೆ ಸರ್ಕಾರದ ವಿಫಲತೆ

-ಸುರ್ಜಿತ್

ನರಸಿಂಹರಾವ್ ಸರಕಾರಕ್ಕೆ ಕೋಮುವಾದದ ಅಪಾಯವನ್ನು ಎದುರಿಸುವಲ್ಲಿ ಏನೇನೂ ಆಸಕ್ತಿಯಿಲ್ಲ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ. ಆರ್.ಎಸ್.ಎಸ್., ಭಜರಂಗದಳ ಹಾಗೂ ವಿ.ಹೆಚ್.ಪಿ.ಯ ಮೇಲೆ ನಿರ್ಬಂಧ ಹಾಕಿದ ಬಗ್ಗೆ ಪರಿಶೀಲಿಸಲು ನೇಮಿಸಿದ್ದ ನ್ಯಾಯಮಂಡಳಿ ವಿ.ಹೆಚ್.ಪಿ.ಯ ಮೇಲಿನ ನಿರ್ಬಂಧವನ್ನು ಎತ್ತಿ ಹಿಡಿದು, ಉಳಿದೆರೆಡು ಸಂಘಟನೆಗಳ ಮೇಲೆ ನಿರ್ಬಂಧವನ್ನು ಸಮರ್ಥಿಸಲು ಸಾಕಷ್ಟು ಆಧಾರಗಳನ್ನು ಕೇಂದ್ರ ಸರಕಾರ ನೀಡಿಲ್ಲ ಎಂದು ಹೇಳಿ ಅವುಗಳ ಮೇಲಿನ ನಿರ್ಬಂಧವನ್ನು ರದ್ದುಪಡಿಸಿರುವುದು ಕೋಮುವಾದದ ವಿರುದ್ಧ ಹೋರಾಟದಲ್ಲಿ ಸತತವಾಗಿ ಕಾಂಗ್ರೆಸ್(ಐ) ಮುಖಂಡತ್ವ ತೋರುತ್ತಾ ಬಂದಿರುವ ಎಡವಟ್ಟುತನಕ್ಕೆ ಮತ್ತೊಂದು ಉದಾಹರಣೆಯಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಇಲ್ಲವಾದರೆ ಬಾಬ್ರಿ ಮಸೀದಿ ಧ್ವಂಸ ಹಾಗೂ ನಂತರದ ಹಿಂಸಾಚಾರಗಳಲ್ಲಿ ವಿ. ಹೆಚ್.ಪಿ. ಪಾತ್ರವನ್ನು ಎತ್ತಿ ಹಿಡಿದ ನ್ಯಾಯಮಂಡಳಿ ಅದಕ್ಕೆ ಪ್ರೋತ್ಸಾಹ, ಕುಮ್ಮಕ್ಕು ನೀಡಿ ಭಾಗವಹಿಸಿದ್ದ ಈ ಎರಡು ಸಂಘಟನೆಗಳ ಮೇಲೆ ನಿರ್ಬಂಧಗೊಳಿಸುವಂತಾಗುವುದು ಹೇಗೆ ಸಾಧ್ಯ? ನಿರ್ಬಂಧ ರದ್ದನ್ನು ಸ್ವಾಗತಿಸಿದ ಆರ್.ಎಸ್.ಎಸ್. ಮುಖಂಡರೇ ಸ್ವತಃ ವಿ.ಹೆಚ್.ಪಿ. ನಿರ್ಬಂಧವನ್ನು ಊರ್ಜಿತಗೊಳಿಸುವುದಕ್ಕೆ ಖೇದ ವ್ಯಕ್ತಪಡಿಸಿರುವುದು, ಅದನ್ನು ರದ್ದುಪಡಿಸಲು ಹೋರಾಡುವುದಾಗಿ ಹೇಳಿರುವುದೇ ಈ ಮೂರು ಸಂಘಟನೆಗಳಲ್ಲಿ ಪರಸ್ಪರ ಸಂಬಂಧಗಳನ್ನು ಎತ್ತಿ ತೋರಿಸುವುದಿಲ್ಲವೇ?

ಟ್ರಿಬ್ಯೂನಲ್‌ನ ತೀರ್ಪಿಗೆ ಕಾಂಗ್ರೆ ಮುಖಂಡತ್ವ ಹೊಣೆ ಎಂದು ಸುರ್ಜಿತ್‌ರವರು ಹೇಳಿದರು. ಸರಕಾರಕ್ಕೆ ಈ ನಿರ್ಬಂಧ ಹೇರಲು ಆಸಕ್ತಿಯೇ ಇರಲಿಲ್ಲ. ಘಟನೆಗಳು ನಡೆದು ನಾಲ್ಕು ದಿನಗಳ ನಂತರ ಮೀನಮೇಷ ಎಣಿಸಿ ಹಾಕಿದ ನಿರ್ಬಂಧವನ್ನೂ ಅದು ಎಂದು ಆಸಕ್ತಿಯಿಂದ ಜಾರಿ ಮಾಡಲಿಲ್ಲ. ನಿರ್ಬಂಧಿತ ಸಂಘಟನೆಗಳ ಮುಖಂಡರು ಬಹಿರಂಗವಾಗಿಯೇ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಕೋಮುವಾದದ ವಿರುದ್ಧ ಹೋರಾಟದಲ್ಲಿ ಕಾಂಗ್ರೆ ಸರಕಾರಕ್ಕೆ ಆಸಕ್ತಿಯಿಲ್ಲ ಎಂಬುದು ಇದರಿಂದ ದೃಢಪಟ್ಟಿದೆ ಎಂದು ಸುರ್ಜಿತ್ ಹೇಳಿದ್ದಾರೆ.

●

ಹೀಗೂ ಉಂಟೇ, ನಮ್ಮ ದೇಶದಲ್ಲಿ

ಸಚಿವರ-ಶಾಸಕರ ಪಗಾರಕ್ಕೆ ಕತ್ತರಿ. ಎಲ್ಲಿ? ತ್ರಿಪುರಾದಲ್ಲಿ

ತ್ರಿಪುರಾದ ಸಚಿವರು ಮತ್ತು ಶಾಸಕರ ವೇತನ, ಭತ್ಯೆ ಮತ್ತು ಪಿಂಚಣಿ ಕಡಿಮೆಯಾಗಲಿದೆ. ಐದು ವರ್ಷಗಳ ನಂತರ ಮತ್ತೆ ಅಧಿಕಾರಕ್ಕೆ ಬಂದಿರುವ ಎಡರಂಗ ಸರಕಾರ ಈ ಸಂಬಂಧದಲ್ಲಿ ವಿಧಾನಸಭೆಯಲ್ಲಿ ಎರಡು ಮಸೂದೆಗಳನ್ನು ಮಂಡಿಸಿದೆ. ಹೊಸ ವಿಧಾನಸಭೆಯ ಇತ್ತೀಚೆಗಷ್ಟೇ ಮುಕ್ತಾಯವಾದ ಮೊದಲ ಅಧಿವೇಶನದಲ್ಲಿ ಈ ಮಸೂದೆಗಳನ್ನು ಮಂಡಿಸಲಾಯಿತು.

ಹಿಂದಿನ ಕಾಂಗ್ರೆಸ್(ಐ)-ಟಿಯುಜೆಎಸ್ ಮೈತ್ರಿಕೂಟದ ಸರಕಾರ ಆಡಳಿತದಲ್ಲಿದ್ದಾಗ ಸಚಿವರ ವೇತನ ಮತ್ತು ಭತ್ಯೆಗಳಲ್ಲಿ ತುಂಬಾ ಏರಿಕೆಯಾಗಿದ್ದವು. ಅಲ್ಲದೆ ಅಸೆಂಬ್ಲಿ ಸದಸ್ಯರ ಭತ್ಯೆಗಳು ಮತ್ತು ನಿವೃತ್ತಿ ವೇತನ(ಪಿಂಚಣಿ)ದಲ್ಲೂ ಗಣನೀಯ ಏರಿಕೆಯಾಗಿದ್ದವು. ಇದಲ್ಲದೆ ಸಚಿವರು ಕುಟುಂಬ ಸದಸ್ಯರೊಡನೆ ದೇಶದ ಯಾವುದೇ ಭಾಗಕ್ಕೂ ಸರಕಾರಿ ವೆಚ್ಚದಲ್ಲಿ ಪ್ರವಾಸ ಹೋಗಲು ಅವಕಾಶ ಕಲ್ಪಿಸಲಾಗಿತ್ತು. ಅತ್ತೆ- ಮಾವಂದಿರನ್ನೂ ಸಚಿವರ ಕುಟುಂಬದ ವ್ಯಾಪ್ತಿಗೆ ತಂದಿದ್ದು ಇನ್ನೂ ಆಶ್ಚರ್ಯದ ಸಂಗತಿಯಾಗಿತ್ತು.

ವೇತನ 1500ರೂ ಪಿಂಚಣಿ 2500ರೂ!

ಶಾಸಕರ ವೇತನ 1500ರೂ ಎಂದು ನಿಗದಿಯಾಗಿತ್ತು. ಆದರೆ ಅವರು ಮಾಜಿಯಾದಾಗ ನಿವೃತ್ತಿ ವೇತನ ಮಾಸಿಕ 2500 ರೂ. ಎಂದು ನಿಗದಿಪಡಿಸಲಾಗಿತ್ತು. ಇದು ಪಿಂಚಣಿ ಯೋಜನೆಗೇ ವಿರೋಧವಾದ ಕಲ್ಪನೆಯಾಗಿದೆ. ಇವೆಲ್ಲಕ್ಕೂ ಮೇಲಾಗಿ ಮಾಜಿ ಶಾಸಕರಿಗೂ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು.

ಜನಪ್ರತಿನಿಧಿಗಳೆಂಬ ನೆಪದಲ್ಲಿ ಈ ರೀತಿ ಸರಕಾರಿ ಖಜಾನೆ ಲೂಟಿಯಾಗುವ ಪರಿಪಾಠಕ್ಕೆ ತೆರೆ ಎಳೆಯಬೇಕು. ವೇತನ, ಭತ್ಯೆ ಪಿಂಚಣಿ ಮೊತ್ತವನ್ನು ಕಡಿಮೆ ಮಾಡಬೇಕು ಹಾಗೂ ಇತರ ಸೌಲಭ್ಯಗಳನ್ನು ರದ್ದುಪಡಿಸಬೇಕು ಎಂದು ಮೇ 2 ಮತ್ತು 3ರಂದು ಸಭೆ ಸೇರಿದ್ದ ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಸಚಿವ ಸಂಪುಟಕ್ಕೆ ನಿರ್ದೇಶನ ನೀಡಿತ್ತು. ಸಿಪಿಐ(ಎಂ) ಈಶಾನ್ಯದ ಈ ಪುಟ್ಟ ರಾಜ್ಯದ ಆಳುವ ಕೂಟದ ಪ್ರಮುಖ ಅಂಗಪಕ್ಷವಾಗಿದೆ. ಸ್ವತಃ ಅದೊಂದೇ ಮೂರನೇ ಎರಡರಷ್ಟು ಬಹುಮತವನ್ನು ಹೊಂದಿದೆ.

ಈ ನಿರ್ದೇಶನಕ್ಕೆ ಅನುಸಾರವಾಗಿ ಮುಖ್ಯಮಂತ್ರಿ ದಶರಥದೇಬ್ ಎರಡು ಮಸೂದೆಗಳನ್ನು ಮಂಡಿಸಿದರು. ಮುಖ್ಯಮಂತ್ರಿ, ಸಚಿವರು ಮತ್ತು ಸಹಾಯಕ ಸಚಿವರ ವೇತನದಲ್ಲಿ ಮಾಸಿಕ 500 ರೂ

ಪುಟ 8ನೋಡಿ

ಒಳಪುಟಗಳಲ್ಲಿ

ಪ.ಬಂಗಾಳದ ಜೀವನಾಡಿ - ಪಂಚಾಯತ್ ವ್ಯವಸ್ಥೆ

- ಸಿ.ಆರ್. ಭಟ್

ಪ.ಬಂಗಾಳದ ಪಂಚಾಯತ್ ಚುನಾವಣೆಯು ದೇಶದ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಒಂದು ಮಹತ್ವದ ವಿದ್ಯಮಾನವಾಗಿದೆ. ಇದರ ಫಲಿತಾಂಶವನ್ನು ಅತ್ಯಂತ ಆಸಕ್ತಿಯಿಂದ ದೇಶವಿದೇಶಗಳಲ್ಲಿ ವೀಕ್ಷಿಸಲಾಗುತ್ತಿದೆ. ಈ ಚುನಾವಣೆಯಲ್ಲಿ ರಾಜ್ಯದ ಒಟ್ಟು ಮತದಾರರಲ್ಲಿ ಶೇ. 72ರಷ್ಟು, ಮೂರುಕೋಟಿಗಳಿಗೂ ಹೆಚ್ಚು ಗ್ರಾಮೀಣ ಮತದಾರರು ಭಾಗವಹಿಸಿದ್ದಾರೆ. ಮೂರು ಹಂತಗಳಿಗೆ ಚುನಾವಣೆಗಳು ನಡೆದಿದ್ದು, ಗ್ರಾಮ ಪಂಚಾಯತ್‌ಗಳಿಗೆ 61,010 ಸ್ಥಾನಗಳಿಗೆ, ಮಧ್ಯಂತರದ 500 ಪಂಚಾಯತ್‌ನ ಸಮಿತಿಗಳಿಗೆ 9453 ಸ್ಥಾನಗಳಿಗೆ ಮತ್ತು ಮೇಲ್ಮಟ್ಟದಲ್ಲಿ 17 ಜಿಲ್ಲಾ ಪರಿಷತ್‌ಗಳ 656 ಸ್ಥಾನಗಳಿಗೆ -ಒಟ್ಟು 71,000 ಕ್ಕಿಂತಲೂ ಹೆಚ್ಚು ಸ್ಥಾನಗಳಿಗೆ ತೀವ್ರ ಸ್ಪರ್ಧೆ ನಡೆದಿದೆ. ಈ ಸಲದ ವೈಶಿಷ್ಟ್ಯವೆಂದರೆ, ಶೇ. 30ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಕಾದಿರಿಸಲಾಗಿದ್ದು, 24895 ಸ್ಥಾನಗಳಿಗೆ 64235 ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಆಯಾಯ ಕ್ಷೇತ್ರಗಳಲ್ಲಿ ಅವರವರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ಮೀಸಲಿಡಲಾಗಿದೆ. ಎಡರಂಗದ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್‌ಬ್ಲಾಕ್, ಆರ್‌ಎಸ್‌ಪಿ, ಅಭ್ಯರ್ಥಿಗಳಲ್ಲಿ ಒಟ್ಟು 71000 ಸ್ಥಾನಗಳಲ್ಲಿ 64000 ಸ್ಥಾನಗಳಿಗೆ ಸರಿಯಾದ ಹೊಂದಾಣಿಕೆ ನಡೆದಿದೆ. ಕಾಂಗ್ರೆ ಕಡೆಯಿಂದ 51000 ಅಭ್ಯರ್ಥಿಗಳೂ, ಬಿಜೆಪಿಯಿಂದ 37000 ಅಭ್ಯರ್ಥಿಗಳೂ ಚುನಾವಣಾ ಕಣದಲ್ಲಿದ್ದಾರೆ. ಬಿಜೆಪಿಯ 'ರಾಮ', 'ಹಿಂದುತ್ವ'ದ ಆಧಾರದಲ್ಲಿ ಈ ರಾಜ್ಯದಲ್ಲಿ ಚುನಾವಣಾ ಪ್ರಚಾರ ಮಾಡುವುದನ್ನು ಜನರೇ ಸಹಿಸಲಾರರು ಎಂದು ಮನಗಂಡು, ಬಾಂಗ್ಲಾ ದೇಶದಿಂದ ಮುಸ್ಲಿಮರು ವಲಸೆ ಬರುವ ವಿರುದ್ಧ ಪ್ರಚಾರ ಆರಂಭಿಸಿದೆ. ಕಾಂಗ್ರೆಯಲ್ಲಿ ಬೃಹತ್ ಪ್ರಮಾಣದಲ್ಲಿ ಆಂತರಿಕ ಗುಂಪು ಘರ್ಷಣೆಗಳು ನಡೆಯುತ್ತಿವೆ ಮತ್ತು ಈ ಪಕ್ಷವು ಬಿಜೆಪಿಯ ಜೊತೆ ಸೇರಿರುವವರ ವಿರೋಧವಾಗಿ ತೀವ್ರ ಭಿನ್ನಾಭಿಪ್ರಾಯಗಳು ತಲೆದೋರಿದೆ. ಎಡರಂಗವು ತನ್ನ ಇದುವರೆಗಿನ ಸಾಧನೆಗಳ ಆಧಾರದಲ್ಲಿ ಮತ್ತು ಕಾಂಗ್ರೆಯ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಹಾಗೂ ಬಿಜೆಪಿಯ ಕೋಮುವಾದಿ ರಾಜಕೀಯದ ವಿರುದ್ಧ ಚುನಾವಣೆ ಹೋರಾಟದಲ್ಲಿ ಭಾಗವಹಿಸಿದೆ.

ಈಗಾಗಲೇ ರಾಜ್ಯಾಂದ್ಯಂತ ಬಿರುಸಿನ ಚುನಾವಣಾ ಪ್ರಚಾರ ಪ್ರಕ್ಷೋಭೆಗಳು ನಡೆಯುತ್ತಿವೆ. ಅಸಂಖ್ಯಾತ ಕರಪತ್ರಗಳು ಭಿತ್ತಿಪತ್ರಗಳು ಗೋಡೆಬರಹಗಳು, ಸಾರ್ವಜನಿಕ ಸಭೆಗಳು ನಡೆದಿವೆ. ಕಾನೂನು ಶಿಸ್ತು ಕಾಪಾಡಲು ಬಿಗಿ ಪೋಲೀಸ್ ಬಂದೋಬಸ್ತು, ಸಮಾಜಘಾತುಕ ಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲು ಪೋಲೀಸು ಪಡೆಗಳಿಗೆ ಕಟ್ಟುನಿಟ್ಟಿನ ಆದೇಶ, ಇನ್ನೊಂದೆಡೆ 37000 ಮತಗಟ್ಟೆಗಳು ಮತ್ತು ಗಣಿಕಾ ಕೇಂದ್ರಗಳು ಕಾರ್ಯನಿರತವಾಗಿವೆ. ಪಂಚಾಯತ್ ವ್ಯವಸ್ಥೆಯ ಮೂರು ಹಂತಗಳಿಗೆ ಚುನಾವಣೆಗಾಗಿ ಮೂರು ಬಣ್ಣಗಳ ಮತದಾನ ಪತ್ರ ಬಳಸಲಾಗುತ್ತದೆ. ಮುಖ್ಯಮಂತ್ರಿ ಜ್ಯೋತಿ ಬಸು ಎಡರಂಗದ ಪರವಾಗಿ ಪ್ರಚಾರ ಕಾರ್ಯಗಳಲ್ಲಿ ಭಾಗವಹಿಸುತ್ತಾ ಚುನಾವಣೆಯು ಸುವ್ಯವಸ್ಥಿತವಾಗಿ ನಡೆಯುವಂತೆ ಬಿಗಿ ಆಡಳಿತವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಚುನಾವಣಾ ಘರ್ಷಣೆಯಲ್ಲಿ ಸಿಪಿಐ(ಎಂ)ನ ಸಲವತ್ತು ಜನ ಕಾರ್ಯಕರ್ತರು ಜಾರ್ಖಂಡ್ ವಾದಿ- ಕಾಂಗ್ರೆ ಪ್ರಚೋದಕರಿಂದ ಕೊಲ್ಲಲ್ಪಟ್ಟಿದ್ದಾರೆ ಎಂದು ವರದಿಯಾಗಿದೆ. ಆದರೂ ಧೃತಿಗೆಡದೆ ಎಡರಂಗದ ಯಶಸ್ಸಿಗಾಗಿ ಅಸಂಖ್ಯಾತ ಮಹಿಳೆಯರು, ಪರಿಶಿಷ್ಟರ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರು, ಗ್ರಾಮೀಣ ಬಡವರು ಅತಿ ಉತ್ಸಾಹದಿಂದ ಜೀವದ ಹಂಗು ತೊರೆದು ಈ ಚುನಾವಣಾ ಪ್ರಚಾರ- ಪ್ರಕ್ಷೋಭೆಗಳಲ್ಲಿ ಶ್ರಮಿಸುತ್ತಿದ್ದಾರೆ. ಕಾರಣ ಪಂಚಾಯತ್ ಮೂಲಕ ಎಡರಂಗ ಸರಕಾರವು ಈ ರಾಜ್ಯದಲ್ಲಿ ಭೂ ಸುಧಾರಣೆ ಯಶಸ್ವಿಯಾಗಿ ಜಾರಿಗೊಳಿಸಿ, ಹಿಂದಿನ ಭೂರಹಿತ ರೈತರು ಇಂದು ಪಂಚಾಯತ್ ವ್ಯವಸ್ಥೆಯ ಆಧಾರವಾಗಿದ್ದಾರೆ.

ಭೂಸುಧಾರಣೆ ಪಂಚಾಯತ್ ರಾಜ್ಯದ ಆಧಾರ

30-6-92ರವರೆಗೆ, 9,36,508 ಎಕರೆ ಭೂಮಿಯನ್ನು 20,43,700 ರೈತರಿಗೆ ಪಂಚಾಯತ್‌ಗಳ ಮೂರ ಎಡರಂಗ ಸರಕಾರವು ಮರು ವಿತರಣೆ ಮಾಡಿದೆ. ದೇಶದಲ್ಲಿ ಇದುವರೆಗಿನ ಹೆಚ್ಚುವರಿ ಭೂಮಿ ಮರು ವಿತರಣೆಯಲ್ಲಿ ಶೇ. 50 ಕ್ಕಿಂತಲೂ ಹೆಚ್ಚು ಪ.ಬಂಗಾಳ ರಾಜ್ಯ ಒಂದರಲ್ಲಿಯೇ ಆಗಿದೆ. ಮರು ವಿತರಣೆಯಲ್ಲಿ ಪ್ರಯೋಜನ ಪಡೆದವರೂ ಶೇ. 56.37ರಷ್ಟು ಪರಿಶಿಷ್ಠ ಜಾತಿಗಳ ಮತ್ತು ಪರಿಶಿಷ್ಠ ಪಂಗಡಗಳ ಬಡ ಜನರಾಗಿದ್ದಾರೆ. ಕಳೆದ ವರ್ಷದಿಂದ ಈ ಭೂ ಹಿಡುವಳಿಗಳಿಗೆ ಪ್ರತಿ ಒಂದು ರೈತ ಕುಟುಂಬದ ಗಂಡ ಮತ್ತು ಹೆಂಡತಿಯ ಹೆಸರಿನಲ್ಲಿ ಪಟ್ಟಾ ಕೊಡಲು ಪ್ರಾರಂಭವಾಗಿದೆ. ಸಮಾಜದಲ್ಲಿ ಮಹಿಳೆಗೆ ಸ್ವತಂತ್ರ ಅಸ್ತಿತ್ವ ಸ್ಥಾನಮಾನ ಪಡೆಯಲು ಇದೊಂದು ಮಹತ್ವದ ಹೆಜ್ಜೆ. ಇತ್ತೀಚಿಗಿನ ನ್ಯಾಶನಲ್ ಸ್ಯಾಂಪಲ್ ಸರ್ವೆ ಸಮೀಕ್ಷೆಯಂತೆ 10 ಎಕರೆ ಮತ್ತು ಹೆಚ್ಚು ಭೂಹಿಡುವಳಿಗಾರರ ಸಂಖ್ಯೆ ಶೇ. 13.77ಕ್ಕೆ ಇಳಿದಿದೆ. ರಾಷ್ಟ್ರದ ಸಂಖ್ಯೆ ಶೇ. 47.99ರಷ್ಟಿದೆ. ಇತ್ತೀಚಿಗಿನ ಗಣನೆಯಂತೆ ಈ ಸಂಖ್ಯೆ ಶೇ. 12.16ಕ್ಕೆ ಸಮೀಕ್ಷೆಯಂತೆ ಹಸಿರು ಕ್ರಾಂತಿ ನಡೆದ ಇತರ ರಾಜ್ಯಗಳಲ್ಲಿ ದೊಡ್ಡ ಹಾಗೂ ಮಧ್ಯ ರೈತರ ಭೂ ಹಿಡುವಳಿಗಳ ವಿಸ್ತಾರ ಹೆಚ್ಚುತ್ತಿದೆ. ಹಸಿರು ಕ್ರಾಂತಿಯ ಪ್ರತಿಫಲ ಶ್ರೀಮಂತರಿಗೆ ಹೋಗುತ್ತದೆ. ಬಡರೈತರು ಕೃಷಿ ಕೂಲಿಕಾರರಾಗುತ್ತಿದ್ದಾರೆ. ಅದರೊಂದಿಗೆ ಕೃಷಿ ಕೂಲಿಕಾರರು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಡತನ ರೇಖೆಯ ಕೆಳಮಟ್ಟಕ್ಕೆ ತಳ್ಳಲ್ಪಡುತ್ತಿದ್ದಾರೆ. ಆದರೆ ಪ.ಬಂಗಾಳದಲ್ಲಿ ಸಣ್ಣ ಮತ್ತು ಅರೆ ಸಣ್ಣ ರೈತರು ತಮ್ಮ ಭೂ ಹಿಡುವಳಿಯ ವಿಸ್ತಾರವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ತಮ್ಮ ಬದುಕನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಪ.ಬಂಗಾಳದ ಒಟ್ಟು ವ್ಯವಸಾಯ ಭೂಮಿಯ ಶೇ. 75ರಷ್ಟು ಇಂದು ಬಡ ಹಾಗೂ ಅರೆ ರೈತರ ವಶದಲ್ಲಿದೆ. ಶತಮಾನಗಳಿಂದ ಕಾಲದ ಭೂಮಾಲಿಕ ಹಾಗೂ ಜೋತೇದಾರರ ಭದ್ರಮುಷ್ಟಿಯಿಂದ ಇಂದು ಇವರು ಬಿಡುಗಡೆ ಹೊಂದಿದ್ದಾರೆ. ಇಂತಹ ಬದಲಾವಣೆ ರಾತ್ರಿ ದೆಳಗಾಗುವುದರೊಳಗೆ ಆಗಲಿಲ್ಲ. ದೀರ್ಘಕಾಲದ ರೈತ ಚಳುವಳಿಯಿಂದ ಮತ್ತು ಅದರ ಫಲವಾಗಿ ಎಡರಂಗ ಸರಕಾರವು ಅಧಿಕಾರಕ್ಕೆ ಬಂದು ಅದರಧೋರಣೆಗಳು ಹದಿನಾರು ವರ್ಷಗಳ ಕಾಲ ನಿರಂತರ ಕಾರ್ಯಗತಗೊಂಡುದದರಿಂದ ಈ ಕ್ರಾಂತಿಕಾರಿ ಬದಲಾವಣೆಯಾಗಿದೆ. ಇತರ 14 ರಾಜ್ಯಗಳಲ್ಲಿ ವ್ಯವಸಾಯ ಭೂಮಿಯ ಸಿಂಹಪಾಲು ಭೂಮಾಲಿಕರ, ಶ್ರೀಮಂತರ ರೈತರ, ಪಟ್ಟಭದ್ರರ ಮುಷ್ಟಿಯಲ್ಲಿದ್ದು, ಬಡರೈತರು ಕೃಷಿ ಕಾರ್ಮಿಕರು ಇನ್ನೂ ಉಸಿರು ಕಟ್ಟುವ ಪರಿಸ್ಥಿತಿಯಲ್ಲಿಯೇ ಇದ್ದಾರೆ.

1992ರವರೆಗೆ, 14,34,000 ಬೇಗಾರರನ್ನು(ಬರ್ಗಾದಾರರನ್ನು) ಎಡರಂಗ ಸರಕಾರವು ದಾಖಲೆ ಮಾಡಿದೆ. ಅವರನ್ನು ಭೂಮಾಲಕರು ಮನ ಬಂದಂತೆ ಒಕ್ಕಲೆಬ್ಬಿಸದಂತೆ ಕಾನೂನಿನ, ಆಡಳಿತದ ಹಾಗೂ ಸಂಘಟನೆಯ ರಕ್ಷಣೆಯನ್ನು ನೀಡಿದೆ. ಪ್ರಯೋಜನ ಪಡೆದ ಇವರು 10.77 ಲಕ್ಷ ಎಕರೆ ಭೂ ಹಿಡುವಳಿಯನ್ನು ವ್ಯವಸಾಯ ಮಾಡುತ್ತಿದ್ದಾರೆ. ಇದರಿಂದ ಪ್ರಯೋಜನ ಪಡೆದವರಲ್ಲಿ ಶೇ. 43ರಷ್ಟು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಜನರೇ ಆಗಿದ್ದು ಅವರು ಶೇ. 49.12 ರಷ್ಟು ಪಾಲು ದೆಳಿಗಾರರ ವ್ಯವಸಾಯ ಭೂಮಿಯನ್ನು ಹೊಂದಿದ್ದಾರೆ.

ಈ ಕ್ರಮಗಳು ಕೃಷಿ ಉತ್ಪಾದನೆಯ ಮೇಲೆ ಅದ್ಭುತ ಪರಿಣಾಮ ಬೀರಿವೆ.

ಕೃಷಿ ಉತ್ಪಾದನೆಗಳು	1976-77 (ಮೆಟ್ರಿಕ್ ಟನ್)	1991-92 (ಮೆಟ್ರಿಕ್ ಟನ್)
ಅಕ್ಕಿ	59.48 ಲ.	119.54 ಲ.
ಆಹಾರ ಧಾನ್ಯಗಳು	74.50 ಲ.	128.56 ಲ.
ಎಣ್ಣೆ ಬೀಜಗಳು	0.60 ಲ.	4.50 ಲ.
ಬಟಾಟೆ	16.57 ಲ.	48.42 ಲ.
ಸೆಣಬು	34.73 ಲ.	63.72 ಲ.

ಗೊಬ್ಬರ ಬಳಕೆ : 1977-78 ರಲ್ಲಿ 1.62 ಲಕ್ಷ ಮೆಟ್ರಿಕ್ ಟನ್‌ಗಳಿದ್ದು, 1991-92 ರಲ್ಲಿ 7.55 ಲಕ್ಷ ಮೆಟ್ರಿಕ್ ಟನ್‌ಗಳಿಗೇರಿದೆ.

ನೀರಾವರಿ : 1976-77ರಲ್ಲಿ ಒಟ್ಟು ವ್ಯವಸಾಯದ ಶೇ. 25ರಷ್ಟು ಭೂಮಿಗೆ ಮಾತ್ರ ನೀರಾವರಿ ಸೌಕರ್ಯವಿತ್ತು. ಮುಂದೆ ಒಂದೇ ದಶಕದಲ್ಲಿ ನೀರಾವರಿ ಸೌಲಭ್ಯವಿರುವ ವ್ಯವಸಾಯ ಭೂಮಿಯ ಪ್ರಮಾಣ ಶೇ. 40ಕ್ಕೇರಿತು. 1981 ರಲ್ಲಿ ಜನಗಣನೆಯಂತೆ ರಾಜ್ಯದಲ್ಲಿ 1,55,621 ಕೊಳವೆ ಬಾವಿಗಳಿದ್ದು, 1988ರಲ್ಲಿ ಅವುಗಳ ಸಂಖ್ಯೆ 3,66,542ಕ್ಕೇರಿತು.

ಬಡತನರೇಖೆ: ಪಂಚಾಯತ್ ಸಂಸ್ಥೆಗಳು ಬಂಗಾಳದ ಗ್ರಾಮಾಂತರ ಪ್ರದೇಶದ ಜನರ ಪರಿಸ್ಥಿತಿಯನ್ನು ಉತ್ತಮಗೊಳಿಸಿದವು. ನ್ಯಾಶನಲ್ ಸ್ಯಾಂಪಲ್ ಸರ್ವೆ ಸಮೀಕ್ಷೆಯಂತೆ, 1977-78ರಲ್ಲಿ ದೇಶದ ಶೇ. 51.02ರಷ್ಟು ಜನರು ಬಡತನ ರೇಖೆಯ ಕೆಳಮಟ್ಟದಲ್ಲಿದ್ದರು. ಪ.ಬಂಗಾಳದಲ್ಲಿ ಇದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಬಡನತ ರೇಖೆಯ ಕೆಳಮಟ್ಟದಲ್ಲಿದ್ದರು. ಆದರೆ, 1987-88ರಲ್ಲಿ ಅದರ ಸಂಖ್ಯೆ ಶೇ. 30.03 ಕ್ಕಿಳಿಯಿತು. ಇತ್ತೀಚಿಗಿನ ಸಮೀಕ್ಷೆಯಂತೆ ಈ ಶೇಕಡಾಂಶ 27.3ಕ್ಕೆ ಇಳಿದಿದ್ದು, ರಾಷ್ಟ್ರೀಯ ಮಟ್ಟಕ್ಕಿಂತ ಬಹಳ ಕಡಿಮೆ ದರದಲ್ಲಿದೆ. ಗ್ರಾಮೀಣ ಜನರ ಕೊಳ್ಳುವ ಶಕ್ತಿಯು ಗಣನೀಯವಾಗಿ ಹೆಚ್ಚುತ್ತಿದ್ದು, ಅದರ ಬಹುಮುಖಿ ಪರಿಣಾಮದಿಂದ ಇಡೀ ರಾಜ್ಯದ ಆರ್ಥಿಕ ಅಭಿವೃದ್ಧಿಯಾಗುತ್ತಿದೆ.

ಯೋಜನೆಗಳನ್ನು ರೂಪಿಸುವುದರಲ್ಲಿ ಜನರ ಪಾತ್ರ

ನಮ್ಮ ರಾಜ್ಯದಲ್ಲಿ ಹಳ್ಳಿಗಳಲ್ಲಿ ಇದ್ದಕ್ಕಿದ್ದಂತೆ ರಸ್ತೆಯ ಪಕ್ಕದಲ್ಲಿ ಜೆಲ್ಲಿಕಲ್ಲು, ಮಣ್ಣು ಬಂದು ಬೀಳತೊಡಗುತ್ತವೆ ಆಗ ಜನಕ್ಕೆ ತಮ್ಮ ರಸ್ತೆಗೆ ಏನೋ ಗ್ರಹಚಾರ ವಕ್ರಿಸಿದೆ ಎಂದು ಗೊತ್ತಾಗುತ್ತದೆ. ಹಾಗೆಯೆ ಇದ್ದಕ್ಕಿದ್ದಂತೆ ಒಂದು ಸರಕಾರಿ ಭೂಮಿಯಲ್ಲಿ ಅಗೆತ ಆರಂಭವಾದಾಗ ಮಾತ್ರ ಅಲ್ಲಿ ಏನೋ ಒಂದು ಸರ್ಕಾರಿ ಕಟ್ಟಡ ಏಳಲಿದೆ ಎಂದು ತಿಳಿಯುವುದು ಎಷ್ಟೋ ಬಾರಿ ಹಳ್ಳಿಯ ಜನ ಗೊಣಗಿಕೊಳ್ಳುತ್ತಾರೆ, ತಮ್ಮ-ತಮ್ಮಲ್ಲೇ ಮಾತನಾಡಿಕೊಳ್ಳುತ್ತಾರೆ. ಇದು ಯಾರಿಗೆ ದೇಕಾಗಿತ್ತು ಈಗ ಮೊನ್ನೆ ತಾನೆ ರಸ್ತೆ ರಿಪೇರಿಯ ನಾಟಕ ನಡೆದಾಗಿದೆ, ಅದಕ್ಕೆ ಅಲ್ಲಿ

ಪುಟ 5 ಕ್ಕೆ

ಉಪಚುನಾವಣೆ ಫಲಿತಾಂಶಗಳು

ಸಾವಿನತ್ತ ಧಾವಿಸುತ್ತಿರುವ ಕಾಂಗ್ರೆ

ಹೊಲಸು ಭ್ರಷ್ಟಾಚಾರವನ್ನು, ಅದಕ್ಕಿಂತಲೂ ಹೊಲಸಾದ ವಿಚ್ಛಿದ್ರಕಾರಿ ಮೂಲಭೂತವಾದೀ ಭೂಪರ ಕೋಮುವಾದೀ ಸಮರವನ್ನು ಮೌನವಾಗಿ ಕಲ್ಲಿನ ಮೂರ್ತಿಯಂತೆ ನೋಡುತ್ತಾ ಕೂತಿರುವುದನ್ನು ಯಾರೂ ಮುತ್ಸದ್ದಿತನ ಎನ್ನಲಾರರು. ಆದರೆ ಕಾಂಗ್ರೆಸ್(ಐ) ಅತೀ ಬುದ್ಧಿವಂತಿಕೆಯ ಫಲವನ್ನು ಅದು ಉಣ್ಣಲಾರಂಭಿಸಿದೆ. ಎಂಟು ರಾಜ್ಯಗಳ ಉಪಚುನಾವಣೆಗಳ ಫಲಿತಾಂಶಗಳಿಂದ ಕಾಂಗ್ರೆಸ್ (ಐ) ತಾನೇ ತಂದುಕೊಳ್ಳುತ್ತಿರುವ ಸಾವಿನತ್ತ ಧಾವಿಸುತ್ತಿ ಎಂಬುದು ಸ್ಪಷ್ಟ. ಒಂದು ಪ್ರಶ್ನೆ ಕೇಳೋಣ- ಆ ಪಕ್ಷ ಏನಾದರೂ ಇದರಿಂದ ಪಾಠ ಕಲಿತಿದೆ ಎಂಬ ಬಗ್ಗೆ ಎಳ್ಳಷ್ಟಾದರೂ ಕಾಣುತ್ತಿವೆಯೇ? ನಮ್ಮ ಸಾಮಾನ್ಯ ಕಣ್ಣುಗಳಿಗಂತೂ ಅದು ಕಾಣುತ್ತಿಲ್ಲ. ಬದಲಾಗಿ ಕಾಂಗ್ರೆಸ್(ಐ)ನ ಅತ್ಯಂತ ದೆಪ್ಪ ತಕ್ಕಡಿ ವಕ್ತಾರ ಗಾಡ್ಗೀಲ್ ಅಸೆಂಬ್ಲಿ ಚುನಾವಣೆಗಳ ಫಲಿತಾಂಶಕ್ಕೇನು ತಾನೇ ಮಹತ್ವ ಇದೆ ಎಂದು ಬದಿಗೆ ತಳ್ಳಿದರು. ಅವರಿಗೆ ರಾಷ್ಟ್ರಮಟ್ಟದಲ್ಲಿ ಮಹತ್ವದ್ದು ಜಾಲಂಧರ್ ಲೋಕಸಭಾ ಉಪಚುನಾವಣೆ ಮಾತ್ರ. ಅವರು ಹೀಗೆನ್ನುವಾಗ ಕಾಂಗ್ರೆಸ್(ಐ) ಹೈಕಮಾಂಡ್‌ನ ಯೋಚನೆಗಳಿಗೇ ದನಿಕೊಡುತ್ತಿದ್ದರು!

ಇದಂತೂ ಆತ್ಮವಂಚನೆಯ ಪರಮಾವಧಿ. ಯಾರಿಗೆ ಅವರು ಮೋಸಮಾಡುತ್ತಿದ್ದಾರೆ.? ಪಂಜಾಬಿನಲ್ಲಿನ ಅಲ್ಪಸಂಖ್ಯಾಕರು ಸದಾ ಕೇಂದ್ರದ ಆಳುವ ಪಕ್ಷಕ್ಕೆ ಮತ ನೀಡುತ್ತಾ ಬಂದಿದ್ದಾರೆ. ಖಾಲಿಸ್ತಾನಿಗಳನ್ನು ಹತ್ತಿಕ್ಕಿ ದೇಶದೆಲ್ಲೆಲ್ಲಾ ಅಟ್ಟಿಸಿಕೊಂಡು ಹೋಗುತ್ತಿರುವಾಗ ಸಿಖ್ ರೈತರು ಅಕಾಲಿಗಳಿಗೆ ಮತನೀಡುವ ಪ್ರಶ್ನೆಯೇ ಇಲ್ಲ. ಏಕೆಂದರೆ ಈ ಬಹುಪಾಲು ಅಕಾಲೀ ಮುಖಂಡರು ಮಾತನಾಡದೇ ಕಾಗಿದ್ದ ಸಮಯದಲ್ಲಿ ಭಯೋತ್ಪಾದಕರ ವಿರುದ್ಧ ಉಸಿರೆತ್ತುವ ಧೈರ್ಯವನ್ನು ತೋರಿರಲಿಲ್ಲ. ಸಹಜವಾಗಿಯೇ, ಎಡಪಕ್ಷಗಳಾಗಲೀ, ಇತರ ಯಾವುದೇ ಜಾತ್ಯಾತೀತ ಗುಂಪಾಗಲೀ ಶಕ್ತಿಶಾಲಿಯಾಗಿಲ್ಲದಿರುವಾಗ ಸಿಖ್ ರೈತರು ಕಾಂಗ್ರೆಸ್(ಐ)ಗೆ ಮತನೀಡಿದರು. ಹೀಗೆ ಜಾಲಂಧರ್ ಫಲಿತಾಂಶ ಪಂಜಾಬಿನ ವಿಶೇಷ ಸನ್ನಿವೇಶದ ಪ್ರತಿಬಿಂಬವಷ್ಟೇ.

ಆದರೂ ತರ್ಕಕ್ಕಾಗಿ ಜಾಲಂಧರ್ [illegible]ತಾಂಶಕ್ಕೆ ಅಖಿಲ ಭಾರತ ಮಹತ್ವ [illegible]ದೆಯೆಂದು ಗಾಡ್ಗೀಳ್ ವಾದವನ್ನು ಒಪ್ಪಿ[illegible]ದರೂ ಪಾಟ್ನಾ ಲೋಕಸಭಾ ಉಪಚ[illegible]ಣೆಯ ಬಗ್ಗೆ ಕಾಂಗ್ರೆಸ್(ಐ) ಪ್ರತಿಕ್ರಿಯೇ ಏನು? ಅಲ್ಲಿ ಜನತಾದಳದಿಂದ ಒಂದು ಲಕ್ಷಕ್ಕೂ ಹೆಚ್ಚು ಮತಗಳಿಗಿಂತ ಹಿಂದೆ ಬಿಜೆಪಿಯಿದ್ದು ಕಾಂಗ್ರೆಸ್(ಐ) ಇನ್ನೂ ಎಷ್ಟೋ ಹಿಂದಿರುವುದಕ್ಕೆ ಅವರು ಏನನ್ನುತ್ತಾರೆ?

ರಾಜ್ಯಗಳಲ್ಲಿ ಹೇಗೋ 16 ರಲ್ಲಿ ನಾಲ್ಕು ಸ್ಥಾನಗಳಿಗೆ ಆತುಕೊಳ್ಳಲು ಕಾಂಗ್ರೆಗೆ ಸಾಧ್ಯವಾಗಿದೆ. ಪಳನಿ ಹಾಗೂ ಒಟ್ಟಪಾಳಂ ಲೋಕಸಭಾ ಸ್ಥಾನಗಳಿಗೂ ಚುನಾವಣೆ ನಡೆದಿದ್ದರೆ ಚಿತ್ರ ಇನ್ನಷ್ಟು ಶೋಚನೀಯವಾಗಿರುತ್ತಿತ್ತು. ಈ ಅವಮಾನದಿಂದ ಪಾರಾಗಿದ್ದಕ್ಕೆ ಶೇಷನ್‌ರಿಗೆ ಕೃತಜ್ಞರಾಗಿರಬೇಕು.

ಪಿ.ಡಿ. ಸಂಪಾದಕೀಯ

ಕಾಂಗ್ರೆಸ್(ಐ) ಗೆದ್ದ ಸ್ಥಾನಗಳಲ್ಲೂ ನಮಗೆ ಎದ್ದು ಕಾಣುವ ಸಂಗತಿಯೆಂದರೆ ಅದು ಪಡೆದ ಅಲ್ಪ ಅಂತರ. ಅದು ಸೋತಕಡೆಗಳಲ್ಲಿ ಈ ಅಂತರ ಎಷ್ಟೋ ಹೆಚ್ಚಿದೆ. ಶಾಂತವಾಗಿ ಆತ್ಮವಿಮರ್ಶೆ ಮಾಡಿಕೊಳ್ಳುವ ನೈತಿಕ ಶಕ್ತಿ ಕಾಂಗ್ರೆಸ್‌ಗಿದೆಯೇ? ಇದ್ದರೆ, ಅಲ್ಪಸಂಖ್ಯಾಕರು ತಮಗೆ ಸಂಪೂರ್ಣ ಕೈಕೊಟ್ಟಿದ್ದಾರೆ. ಬಡಜನರು ಏರುತ್ತಿರುವ ಬೆಲೆಗಳು, ನಿರುದ್ಯೋಗ, ಫ್ಯಾಕ್ಟರಿ ಕ್ಲೋಶರ್, ಲೇಆಫ್, ಕೈಗಾರಿಕೆಗಳನ್ನು ನಾಶಮಾಡುವ ವಾತಾವರಣದಿಂದಾಗಿ, ಐ.ಎಂ.ಎಫ್.- ವಿಶ್ವಬ್ಯಾಂಕ್ ಆದೇಶಗಳಿಗೆ ತಲೆಬಾಗಿದುದರ ಈ ದುಷ್ಪರಿಣಾಗಳಿಂದಾಗಿ ಸಿಟ್ಟಿನಿಂದ ವಿರುದ್ಧ ಮತನೀಡಿದ್ದಾರೆ ಎಂದು ರೈತರು ಹಣದ ಬೆಳೆಗಳ ಬೆಲೆ ತಗ್ಗಿದುದರಿಂದ ಮುಖತಿರುಗಿಸಿಕೊಂಡಿದ್ದಾರೆ. ಮಧ್ಯಮವರ್ಗಗಳು ಮಿತಿಯೇ ಇಲ್ಲದ, ಕೊನೆಯೇ ಇಲ್ಲದ ಭ್ರಷ್ಟಾಚಾರದಿಂದಾಗಿ, ಇತ್ತೀಚೆಗೆ ರಾಮಸ್ವಾಮಿಯ ವಿರುದ್ಧ ದೋಷಾರೋಪಣೆಯ ಸಂದರ್ಭದಲ್ಲಿ ಮತದಾನ ಮಾಡುವಾಗ ತಮ್ಮ ಪ್ರಜ್ಞೆಯನ್ನು ಮೂಲೆಯಲ್ಲಿ ಎತ್ತಿಟ್ಟ ಉದಾಹರಣೆಯಲ್ಲಿ ಮತ್ತೊಮ್ಮೆ ಕಂಡುಬಂದ ಭ್ರಷ್ಟಾಚಾರವನ್ನು ರಕ್ಷಿಸಲು ಅದರ ಕಾತುರದಿಂದಾಗಿ ತನ್ನನ್ನು ದೂಷಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ಸ್ವತಃ ಅದರ ಗಮನಕ್ಕೆ ಬರದಿರುವುದಿಲ್ಲ.

ತಾನು ಆಳುತ್ತಿರುವ ರಾಜ್ಯಗಳಲ್ಲೇ ಅದಕ್ಕೆ ಒದೆ ಬಿದ್ದಿರುವುದು ಇನ್ನೂ ಗಮನಾರ್ಹ ಸಂಗತಿ. ಆಂಧ್ರದಲ್ಲಿ ಎರಡೂ ಸ್ಥಾನಗಳನ್ನೂ ತೆಲುಗುದೇಶಂ ಗಿಟ್ಟಿಸಿತು. ಗುಜರಾತಿನಲ್ಲಿ ಬಿಜೆಪಿಗೆ ನಾಲ್ಕು ಸ್ಥಾನಗಳನ್ನು ಬಿಟ್ಟು ಕೊಟ್ಟಿತು. ಹರ್ಯಾಣದಲ್ಲಿ ಚೌತಾಲ ಕೂಡಾ ಮಣ್ಣುಮುಕ್ಕಿಸಿದರು. ಮಹಾರಾಷ್ಟ್ರದಲ್ಲೂ ಮೂರರಲ್ಲಿ ಎರಡು ಸ್ಥಾನ ಕಳಕೊಂಡಿತು. ಹೌದು- ಕಾಂಗ್ರೆಸ್(ಐ) ಈ ಎಲ್ಲಾ ವಾಸ್ತವತೆಯನ್ನು ಕಾಣಲು ಸಿದ್ಧವಿಲ್ಲ. ಉಷ್ಟ್ರಪಕ್ಷಿಯಂತೆ ಮರಳಿನಲ್ಲಿ ತಲೆ ಹುದುಗಿಸಿ ಕೂರುತ್ತದೆ. ಇದು ಸಾವಿನ ಬಯಕೆಯಲ್ಲದೆ ಮತ್ತೇನು?

ಇನ್ನೊಂದು ಕಡೆ ನೋಡಿದರೆ ಬಿಜೆಪಿ ಗೆದ್ದದ್ದು ಎಡ-ಪ್ರಜಾಪ್ರಭುತ್ವ ಶಕ್ತಿಗಳು ದುರ್ಬಲವಾಗಿರುವ ರಾಜ್ಯಗಳಲ್ಲಿ ಮಾತ್ರ. ಅದು ಗೆದ್ದ ಆರರಲ್ಲಿ ನಾಲ್ಕು ಸೀಟುಗಳು ಗುಜರಾತಿನಿಂದ ಬಂದಿದೆ. ಮಹರಾಷ್ಟ್ರದಿಂದ ಅದಕ್ಕೆ ಸಿಕ್ಕಿದ್ದು ಒಂದೇ ಸ್ಥಾನ. ಹಿಂದೀ ಪ್ರದೇಶದಲ್ಲಿ ತನ್ನ ಬಲದ ಬಗ್ಗೆ ಅದು ಅಟ್ಟಹಾಸನಡೆಸಿತ್ತು. ಆದರೆ ಪಾಟ್ನಾದಲ್ಲಿ ಅದರ ಅಭ್ಯರ್ಥಿ ಒಂದೂವರೆ ಲಕ್ಷಕ್ಕೂ ಹೆಚ್ಚು ಮತಗಳಿಂದ ಸೋಲುಂಡರು. ಹಿಂದೀ ಪ್ರದೇಶದ ಜನ ಕ್ರಮೇಣ ಬಿಜೆಪಿ ಮಂಗಾಟಗಳಿಂದ ಭ್ರಮನಿರಸನ ಹೊಂದುತ್ತಿದ್ದಾರೆ ಎಂದು ಸ್ಪಷ್ಟವಾಗುತ್ತಿದೆ.

ಗುಜರಾತಿನ ಚಿಮಣ್‌ಭಾಯಿ ಪಟೇಲರ ಅತ್ಯಂತ ಭ್ರಷ್ಟ ಸರಕಾರ ಕಾಂಗ್ರೆಸ್(ಐ)ಗೆ ಸರ್ವತೋಮುಖ ದ್ವೇಷ-ಧಿಕ್ಕಾರಗಳನ್ನು ಗಳಿಸಿಕೊಟ್ಟಿದೆ! ಈ ಉಪಚುನಾವಣಾ ಪರಾಭವಗಳ ನಂತರವೂ ಅದು ಅಧಿಕಾರದಲ್ಲಿ ಮುಂದುವರಿದರೆ ಗುಜರಾತನ್ನು ಬಿಜೆಪಿಗೆ ಕೈಯಾರೆ ಅರ್ಪಿಸಿದಂತೆಯೇ ಸರಿ.

ಹಾಗಿದ್ದರೆ, ಈ ಉಪಚನಾವಣೆಗಳಿಂದ ಕಲಿಯದೇಕಾದ ಪಾಠಗಳೇನು? ಕೋಮುವಾದವನ್ನು ತಂಪುಗೊಳಿಸುವ ಪ್ರಯತ್ನದಿಂದ ಕಾಂಗ್ರೆಸ್(ಐ) ಎಂದೂ ತನ್ನ ದೆಂಬಲದ ನೆಲೆಯನ್ನು ಕಾದುಕೊಳ್ಳಲು ಸಾಧ್ಯವಿಲ್ಲ. ಅದು ಮೂಲಭೂತವಾದಿ ಸಂಘಟನೆಗಳನ್ನು ಬಲಪಡಿಸಲು ನೆರವಾಗಬಹುದಷ್ಟೇ. ಎಡ- ಜಾತ್ಯಾತೀತ ಶಕ್ತಿಗಳು ಕೋಮುವಾದದೊಂದಿಗೆ ಮುಖಾಮುಖಿ ಸಮರಕ್ಕಿಳಿದಿವೆ. ಅದು ಒಳ್ಳೆಯ ಫಲ ನೀಡಿದೆ.

ಈಗಿನ ತುರ್ತು ಅಗತ್ಯವೆಂದರೆ ಮೂಲಭೂತವಾದಿಗಳೊಂದಿಗೆ ಯಾವುದೇ ರಾಜಿಯಿಲ್ಲ- ಅದನ್ನು ನೇರವಾಗಿ ಎದುರಿಸಿ ಕೊನೆಯವರೆಗೂ ಹೋರಾಟ. ಇಲ್ಲವಾದರೆ ನೀವೇ ಕೊನೆ ಕಾಣಲು ಸಿದ್ಧರಾಗಿ. ಕಾಂಗ್ರೆಸ್(ಐ) ಹೇಗೆ ನರಕದತ್ತ ಇಳಿಯುತ್ತಾ ಸಾಗಿದೆ ಎಂಬುದನ್ನು ಇತ್ತೀಚಿನ ಉಪಚುನಾವಣೆಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಅದು ಈ ಇಳಿಜಾರು ಹಾದಿಯಲ್ಲಿ ಹೆಚ್ಚೆಚ್ಚು ಕೆಳಗೆ ಸಾಗಿದಂತೆ ಈ ಪತನದ ವೇಗವೂ ಹೆಚ್ಚುತ್ತಾ ಹೋಗುತ್ತದೆ. ಆ ಪಕ್ಷ ನೇರವಾಗಿ ಮಣ್ಣುಪಾಲಾಗುವ ಸಮಯ ವೇಗದಿಂದ ಸಮೀಪಿಸುತ್ತಿದೆ.

ಅಯೋಧ್ಯಾ ಕಾಂಡ



ಕಾಮತರ ಬಿಳಿ ಪೈಂಟೂ ಬೆಳಗಿಸಲಾರದ ಬಿಜೆಪಿ "ಶ್ವೇತಪತ್ರ"

"ಅಯೋಧ್ಯೆಯನ್ನು, ರಾಮದೇವಾಲಯವನ್ನು ಕುರಿತಂತೆ ಬಿಜೆಪಿ ಹೊರಡಿಸಿರುವ ಶ್ವೇತಪತ್ರದಲ್ಲಿ ಒತ್ತಿಹೇಳಿರುವ ಹಾಗೆ ರಾಮಜನ್ಮಭೂಮಿಯನ್ನು ವಿಮೋಚಿಸಲು ನಡೆಯುತ್ತಿರುವ ಹೋರಾಟಕ್ಕೆ ಕಡಿಮೆ ಎಂದರೆ 200 ವರ್ಷಗಳಷ್ಟು ದೀರ್ಘ ಇತಿಹಾಸವಿದೆ" ಎಂದಿದ್ದಾರೆ. ಖ್ಯಾತ ಪತ್ರಕರ್ತ, ಅಂಕಣಕಾರ ಎಂ.ವಿ. ಕಾಮತ್‌ರವರು (ಉದಯವಾಣಿ, ಮೇ.18)

ಇದೇ ಬಿಜೆಪಿ ಶ್ವೇತಪತ್ರದ ಬಗ್ಗೆ ಬರೆಯುತ್ತಾ ಇನ್ನೊಬ್ಬ ಬುದ್ಧಿಜೀವಿ, ಭಾರತದ ಖ್ಯಾತ ನ್ಯಾಯತಜ್ಞ ಹಾಗೂ ಅಂಕಣಕಾರ ಎ.ಜಿ. ನೂರಾಣಿರವರು ಬಿಜೆಪಿಯ ಶ್ವೇತಪತ್ರ 'ರಾಮಜನ್ಮಭೂಮಿ ಹೋರಾಟ'ದ ಬಗ್ಗೆ ಹೇಳಿರುವ ಮೂರು ಮಜಲುಗಳನ್ನು ಒಪ್ಪುವುದಾದರೆ ಮಸೀದಿ ಪಡೆಯುವ "ಹೋರಾಟ" ಆರಂಭವಾದದ್ದು ಜುಲೈ, 1989 ರಂದು (ಫ್ರಂಟ್‌ಲೈನ್, ಮೇ 21) ಎನ್ನುತ್ತಾರೆ.

ಬಿಜೆಪಿ ಶ್ವೇತಪತ್ರದ ಪ್ರಕಾರ ಈ "ಹೋರಾಟ"ದ ಮೂರು ಹಂತಗಳೆದರೆ ಮೊದಲು "ಬರ್ಬರವಾದ ಪರಕೀಯರ" ವಿರುದ್ಧ ಸೈನಿಕ ಕಾರ್ಯಾಚರಣೆಯ ರೂಪದಲ್ಲಿ, ಎರಡನೆಯ ಹಂತದಲ್ಲಿ ಬ್ರಿಟಿಷರ ಶಾಸನಗಳಿದ್ದಾಗ "ಶಾಸನಬದ್ಧ ಹೋರಾಟ" ಹಾಗೂ ಮೂರನೆಯ ಹಂತವೆಂದರೆ ಮೇ1984 ರಿಂದ "ಸಾಮೂಹಿಕ ಆಂದೋಲನ" ಕಾಮತರು ಹಾಡಿ ಹೊಗಳಿರುವ ಈ ಬಿಜೆಪಿ ವಿಶ್ಲೇಷಣೆಯ ಎರಡನೇ ಮಜಲಿನ ಒಂದು ಉದಾಹರಣೆ ನೀಡುತ್ತಾರೆ ನೂರಾಣಿಯವರು ಬಿಜೆಪಿ ಶ್ವೇತಪತ್ರದ ಪ್ರಕಾರ "ರಾಮಜನ್ಮಭೂಮಿಯನ್ನು ಮತ್ತೆ ಪಡೆಯಲು ಮೊದಲ ಕಾನೂನು ದಾವೆ ಹಾಕಿದ್ದು 1885ರಲ್ಲಿ" ಏನಿದು ದಾವೆ? ಮಹಂತ ರಘುವೀರ್‌ದಾಸ್ ಎಂಬುವರು ಮೇ 25, 1885 ರಂದು ಫೈಜಾಬಾದ್ ಜಿಲ್ಲಾ ನ್ಯಾಯಾಧೀಶರೆದುರು ಒಂದು ದಾವೆ ಸಲ್ಲಿಸಿದರು. ರಾಮಜನ್ಮಭೂಮಿಯಲ್ಲಿ ಮಂದಿರ ಕಟ್ಟಲು ಅನುಮತಿ ನೀಡಬೇಕು ಎಂದು. ಅವರ ದಾವೆಯ ಪ್ರಕಾರ ರಾಮಜನ್ಮಭೂಮಿ ಯಾವುದು? "ಜನ್ಮಸ್ಥಾನದ ಚಬೂತರಾ ಪೂರ್ವ-ಪಶ್ಚಿಮ 21 ಅಡಿ, ಉತ್ತರ-ದಕ್ಷಿಣ 17 ಅಡಿ. ಅಲ್ಲಿ 'ಚರಣಪಣ್ಯ' ಇದೆ. ಅಲ್ಲಿ ಈಗ ಒಂದು ಸಣ್ಣ ದೇವಸ್ಥಾನವೂ ಇದೆ." ಅಂದರೆ ಆ ಮಹಂತರು ದಾವೆ ಹಾಕಿದ್ದು ಮಸೀದಿಯ ಹೊರಗೆ ಇರುವ, ಆದರೆ ಮಸೀದಿಯ ಆವರಣದ ಒಳಗೆ ಇರುವ ಸ್ಥಳಕಷ್ಟೆ, ಬಾಬ್ರಿ ಮಸೀದಿಗಲ್ಲ!

ಮಸೀದಿಯನ್ನು- ತಮ್ಮ ವಶಕ್ಕೆ ಕೊಡಬೇಕೆಂಬ ಮೊದಲು ದಾವೆ ಬಂದದ್ದು- ಜುಲೈ 1, 1989 ರಲ್ಲಿ ವಿ.ಹೆಚ್.ಪಿ.ಯ ಉಪಾಧ್ಯಕ್ಷ ದೇವಕೀನಂದನ್ ಅಗರ್‌ವಾಲಾ ಎಂಬುವರು ಹಾಕಿದ ದಾವೆಯಿದು. ಹೀಗಿರುವಾಗ ಮಸೀದಿ ಒಡೆದು ಮಂದಿರ ಕಟ್ಟಬೇಕೆನ್ನುವ ಹೋರಾಟ ಆರಂಭವಾದದ್ದು ನಾಲ್ಕು ವರ್ಷಗಳ ಹಿಂದೆಯಷ್ಟೇ, ಬಿಜೆಪಿಯ ಬೆಂಬಲದಿಂದ ದುಷ್ಟ ಶಕ್ತಿಯಾದ ವಿ.ಹೆಚ್.ಪಿ. ಈ ಅನಾಹುತದ ಪರಂಪರೆಗೆ ಬೀಜ ಬಿತ್ತಿತೆಂಬುದು ತಪ್ಪುಗ್ರಹಿಕೆ ಹೇಗಾಗುತ್ತದೆ ಎಂದು ಕಾಮತರು ಹೇಳಬಲ್ಲರೇ?

ಆಹಾ! ಎಂತಹಾ ಕರಸೇವೆ!

ಸೆಪ್ಟೆಂಬರ್ 30,1990 ರಂದೇ ಕಾಮತರು ಈಗ ಹೊಸದಾಗಿ ಆರಿಸಿಕೊಂಡಿರುವ ಅವರ ಗುರು ಎಲ್.ಕೆ. ಅಡ್ವಾಣಿಯವರು "ಅದು ರಾಮಜನ್ಮ ಸ್ಥಳ ವೆಂದು ಯಾರೂ ಸಾಬೀತು ಪಡಿಸಲು ಸಾಧ್ಯವಿಲ್ಲ" ಎಂದಿದ್ದರು. ಭಾರತದ ಪ್ರಸಿದ್ಧ ಇತಿಹಾಸಕಾರರು, ಪ್ರಾಚ್ಯ ಸಂಶೋಧನಾ ವಿದ್ವಾಂಸರು ಆ ಪ್ರದೇಶದಲ್ಲೇ ಏಕೆ, ಇಡೀ ಉತ್ತರ ಪ್ರದೇಶದಲ್ಲೆಲ್ಲಾ 16 ನೇ ಶತಮಾನದವರೆಗೂ ರಾಮ ದೇವಸ್ಥಾನದ ಕುರುಹುಗಳೇ ಇಲ್ಲ ಎಂದಿದ್ದಾರೆ. ವಾಸ್ತವವಾಗಿ ರಾಮನನ್ನು ದೇವರು ಎಂದು ಪರಿಗಣಿಸಲಾರಂಭಿಸಿದ್ದೇ 13 ನೇ ಶತಮಾನದ ನಂತರ ಎಂದು ಧರ್ಮಗ್ರಂಥಗಳ ಪುರಾವೆ ನೀಡುತ್ತಾ ಡಾ. ಸುಶೀಲ್ ಶ್ರೀವಾಸ್ತವ ಹೇಳಿದ್ದಾರೆ. ಆದರೂ "ಬಾಬರ್ ಹಿಂದೂಗಳನ್ನು ಅಡಿಯಾಳಗಿಸಲೆಂದೇ ಕಟ್ಟಿದ ಆ ಮಸೀದಿಯನ್ನು ಆತ್ಮಾಭಿಮಾನಿ ಕರಸೇವಕರು ಕುಟ್ಟಿ ಕೆಡವಿದ್ದು" ಎಂದು ಬಲವಾಗಿ ನಂಬಿರುವ ಕಾಮತರು (ಅವರ ಗುರು-ಮಾರ್ಗದರ್ಶಕರುಗಳು ಬಾಬ್ರಿ ಮಸೀದಿಯನ್ನು ಧ್ವಂಸವನ್ನು ಟೀಕಿಸುವವರು ಪಾಶ್ಚಾತ್ಯರಿಂದ ಪ್ರಭಾವಿತರಾದವರು ಎನ್ನುತ್ತಾ ಪಾಶ್ಚಾತ್ಯ ಬೌದ್ಧಿಕತೆಯನ್ನು ಸಾರಾಸಗಟಾಗಿ ಹೀಯಾಳಿಸುತ್ತಾರೆ ಎಂಬುದರ ಅರಿವೇ ಇಲ್ಲದೆ?) ಪಾಶ್ಚಾತ್ಯ ಇತಿಹಾಸಕಾರ ಟಾಯ್ನ್‌ಬೀಯನ್ನು ಉದ್ಧರಿಸುತ್ತಾರೆ! ಆಹಾ, ಎಂತಹ ನಮ್ರ ಕರಸೇವೆ!

ಕಾಮತರ ಕರಸೇವೆ ಅಷ್ಟಕ್ಕೇ ನಿಲ್ಲುವುದಿಲ್ಲ. ಬಾಬ್ರಿ ಮಸೀದಿಯ "ಮುರಕಲು ಗುಡ್ಡೆಯೇ" ಅಂತಿಮ ಸಾಕ್ಷ್ಯವನ್ನು ನೀಡಿತು ಎನ್ನುತ್ತಾ ಡಿಸೆಂಬರ್ 25ರ "ಹಿಂದೂ'' ಪತ್ರಿಕೆಯ ಒಂದು ವರದಿಯನ್ನು ಉದ್ಧರಿಸುತ್ತಾರೆ- 11 ನೇಯ ಶತಮಾನದ ವೈಷ್ಣವ ದೇವಸ್ಥಾನದ (ರಾಮದೇವಸ್ಥಾನದ್ದಲ್ಲ!) ಖಚಿತ ಸಾಕ್ಷ್ಯಾಧಾರ ದೊರೆಯಿತು ಎನ್ನುತ್ತಾರೆ. ಆದರೆ ಅದೇ ಪತ್ರಿಕಾ ಗುಂಪಿನ 'ಫ್ರಂಟ್‌ಲೈನ್' ಈ ವರದಿಯ ಬಗ್ಗೆ ತನಿಖೆ ನಡೆಸಿದ ನಂತರ ಖ್ಯಾತ ಪ್ರಾಚ್ಯ ಸಂಶೋಧನಾಕಾರರ ಅಭಿಪ್ರಾಯಗಳನ್ನು ಸಂಗ್ರಹಿಸಿದ ನಂತರ ಏನು ಹೇಳಿತು ಎಂದು ಮಾತ್ರ ಚಕಾರವೆತ್ತುವುದಿಲ್ಲ (ನೋಡಿ 'ಐಕ್ಯರಂಗ') ಭಲೆ, ಕರಸೇವಕ ಪತ್ರಕರ್ತರೇ! ನಿಮಗೆ ಕರಸೇವಕ ಪ್ರಾಚ್ಯ ಸಂಶೋಧನಕರೇ ತಕ್ಕ ಸಾಕ್ಷಿಗಳು! ಅಡ್ವಾಣಿಯವರಿಗೆ ವಿ.ಹೆಚ್.ಪಿ. ಕ್ಯಾಸೆಟ್ ಸಾಕ್ಷಿಯಿದ್ದಂತೆ. ಡಿಸೆಂಬರ್ 6 ರಂದು ಮಸೀದಿಯ ಗುಮ್ಮಟವೇರಿ ಹಾರೆ-ಪಿಕಾಸಿಗಳಿಂದ 'ಹೀರೋ'ಗಳಾದ ಕರಸೇವಕರೂ ನಾಚಿ ನೀರಾಗಬೇಕು. ಎಷ್ಟೆಂದರೂ ಈ ಸ್ಪರ್ಧೆಯಲ್ಲೂ ಲೇಖನಿ ಕತ್ತಿ, ಹಾರೆ-ಪಿಕಾಸಿಗಳಿಗಿಂತ ಹಿಂದೆ ಉಳಿಯಲು ಕಾಮತರ "ಸಂಸ್ಕೃತಿ" ಹೇಗೆ ತಾನೇ ಬಿಟ್ಟೀತು?

ಸಹಜವಾಗಿಯೇ ಈ ಲೇಖನೀ ಕರಸೇವಕರಿಗೆ ಭಾರತ ಸರಕಾರದ ಶ್ವೇತಪತ್ರ ಈ ಎಲ್ಲ ಸಂಗತಿಗಳ ಬಗ್ಗೆ ಮೌನವತ್ರ ಪಾಲಿಸಿರುವುದು ಸೋಜಿಗದ ಸಂಗತಿಯಾಗಿ ಕಾಣಿಸುತ್ತದೆ. ಆದರೆ ಭಾರತ ಸರಕಾರದ ಹಲವಾರು ಅಪ್ರಕಟಿತ ದಸ್ತಾವೇಜುಗಳನ್ನು ಉದ್ಧರಿಸುವ ಬಿಜೆಪಿ ಶ್ವೇತಪತ್ರ ಡಿಸೆಂಬರ್ 23, 1949 ರ ಘಟನೆಯ ಬಗ್ಗೆ ಸಾರ್ವಜನಿಕವಾಗಿರುವ ಸರಕಾರದ ಹಾಗೂ ನ್ಯಾಯಾಲಯದ ದಸ್ತಾವೇಜುಗಳ ಬಗ್ಗೆ ಏಕೆ ಮೌನವಾಗಿದೆ ಎಂಬುದು ಸೋಜಿಗವಾಗಿ ಕಾಣುವುದಿಲ್ಲ.

ಕಳ್ಳತನ ಪವಾಡವಾಯಿತು!

ಎ.ಜಿ. ನೂರಾಣಿಯವರೆನ್ನುವಂತೆ ಈಗ ನಾವು ಯಾವುದನ್ನು 'ಅಯೋಧ್ಯಾ ಸಮಸ್ಯೆ' ಎನ್ನುತ್ತೇವೋ ಅದು ಆರಂಭವಾಗಿದ್ದು ಈ ದಿನದಿಂದಲೇ. ಅಂದು ಅಯೋಧ್ಯಾ ಪೋಲೀಸ್ ಸ್ಟೇಶನ್ನಿನ ಸಬ್ ಇನ್ಸ್‌ಪೆಕ್ಟರ್ ರಾಮ್‌ದುಬೆ ಸಲ್ಲಿಸಿದ ಎಫ್.ಐ.ಆರ್. (ಪ್ರಥಮ ತನಿಖಾ ವರದಿ) ಹೀಗಿದೆ.

"........ನಾನು ಬೆಳಿಗ್ಗೆ 8 ಗಂಟೆಯ ವೇಳೆಗೆ ಜನ್ಮಭೂಮಿ ತಲುಪಿದಾಗ 50-60 ಮಂದಿ ಬಾಬ್ರಿಮಸೀದಿಯ ಕಾಂಪೌಂಡ್ ಬಾಗಿಲಿನ ಬೀಗ ಮುರಿದು ಮಸೀದಿಗೆ ನುಗ್ಗಿ ಅಲ್ಲಿ ಶ್ರೀ ಭಗವಾನ್‌ನ ವಿಗ್ರಹವೊಂದನ್ನು ಸ್ಥಾಪಿಸಿದ್ದು ಎಂದು ತಿಳಿದು ಬಂತು. ರಾಮ್‌ದಾಸ್, ರಾಮ್‌ಶಕ್ತಿದಾಸ್ ಮತ್ತು ಇನ್ನು 50-60 ಗುರುತು ಸಿಗದ ಇತರರು ಕಳ್ಳತನದಿಂದ ಮಸೀದಿ ಪ್ರವೇಶಿಸಿ ಅದರ ಪಾವಿತ್ರ್ಯವನ್ನು ಕೆಡಿಸಿದರು.

ಆಗ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಹಾಗೂ ದುಷ್ಕೃತ್ಯಕ್ಕೆ ಕಾರಣವಾಗಿದ್ದ (ನಂತರ ಜನ ಸಂಘದ ಮುಖಂಡನಾದ) ಕೆ.ಕೆ. ನಾಯರ್ ಕೂಡಾ ಡಿಸೆಂಬರ್ 27,1949 ರಂದು ಉತ್ತರ ಪ್ರದೇಶ ಮುಖ್ಯಕಾರ್ಯದರ್ಶಿ ಭಗವಾನ್ ಸಹಾಯ್ ಎದುರು "ಅದೊಂದು ಬಲಪ್ರಯೋಗದಿಂದ ಹಾಗೂ ಕಪಟೋಪಾಯದಿಂದ ನಡೆಸಿದ ಕಾನೂನು ಬಾಹಿರ ಕೃತ್ಯ" ಎಂದು ಒಪ್ಪಿಕೊಂಡರು.

ಈ ಎಲ್ಲಾ ಕರಾಳಸತ್ಯಗಳನ್ನು ಮರೆಮಾಚಿರುವ ಬಿಜೆಪಿ "ಶ್ವೇತಪತ್ರ" ಈ ಘಟನೆಯ ಬಗ್ಗೆ ಏನು ಹೇಳಿದೆ ನೋಡಿದೆ. - "ರಾಮನ ಪ್ರತಿಮೆ 1949 ಡಿಸೆಂಬರ್ ರಾತ್ರಿ ಪ್ರತ್ಯಕ್ಷಗೊಂಡಿತು"! ಶುದ್ಧಕಳ್ಳತನವೊಂದು ಮಹಾನ್ ಪವಾಡವಾಗುವ ಪವಾಡ ಕಾಮತರಂತವರಿಗೆ ಖಂಡಿತಾ ಸೋಜಿಗವುಂಟು ಮಾಡುವುದಿಲ್ಲ.

ಇಂತಹ ಶತಸುಳ್ಳನ್ನು ಎಲ್ಲರ ಕಣ್ಣೆದುರೇ ಇರುವ ಅಧಿಕೃತ ದಸ್ತಾವೇಜುಗಳಿಂದ ಸಾಬೀತಾಗಿರುವ ಸುಳ್ಳನ್ನು ಈ ರೀತಿ ಪವಾಡವಾಗಿಸುವ 'ಶ್ವೇತಪತ್ರ' ಎಷ್ಟು ವಿಶ್ವಾಸಾರ್ಹ? ಇಂತಹ ಶ್ವೇತಪತ್ರ ಪ್ರಧಾನಮಂತ್ರಿಗಳ ವಿಶೇಷ ಸೆಲ್‌ನಿಂದ ಪಡೆದ ಗುಪ್ತ ದಾಖಲೆಗಳಿಂದ ಉದ್ಧರಿಸುವ, ಈ ಸಮಸ್ಯೆಯ ಚರ್ಚೆಯ ಬಗ್ಗೆ ಹೇಳದಿರುವ ಅಂಶಗಳು ಎಷ್ಟು ನಂಬಲರ್ಹ? ಇದು ಎ.ಜಿ. ನೂರಾಣಿಯವರು ಕೇಳುವ ಪ್ರಶ್ನೆ. ಇದು ಕೋಮುವಾದಿಗಳಿಗೆ ತಮ್ಮನ್ನು ಮಾರಿಕೊಂಡಿರದವರೆಲ್ಲರ ಕೇಳುವ ಪ್ರಶ್ನೆ ಕೂಡಾ.

ಬಾಬ್ರಿಮಸೀದಿ ಹಿಂದೂಗಳ ಸಾಮೂಹಿಕ ಆತ್ಮಾಭಿಮಾನಕ್ಕೆ ಬಂದ ವಿಪತ್ತು ಎಂದು ಬಿಜೆಪಿ ಶ್ವೇತಪತ್ರವನ್ನು ಉರುಹೊಡೆಯುವ ಕಾಮತ್‌ರಂತವರಿಗೆ ಹಾಗೂ ಬಿಜೆಪಿವಾಲಗಳಿಗೆ ನೂರಾಣಿಯವರು ಮತ್ತೊಂದು ಪ್ರಶ್ನೆ ಕೇಳಿದ್ದಾರೆ. ಸಾವಿರಾರು ವರ್ಷಗಳಿಂದ ಶ್ರೀರಾಮ ಜನ್ಮಭೂಮಿ ಹಿಂದೂಗಳ ಭಕ್ತಿ ಗೌರವಕ್ಕೆ ಪಾತ್ರವಾಗಿದ್ದ ಈ ಹೋರಾಟಕ್ಕೆ ಎರಡು ಶತಮಾನಗಳಿಂದ ನಡೆಯುತ್ತಿದ್ದರೆ ಸ್ವಾತಂತ್ರ್ಯದ ಮೊದಲು ಹಿಂದೂ ಹಿತಾಸಕ್ತಿಗಳ ಪ್ರತಿವಾದಕರೆನಿಸಿಕೊಂಡಡಿದ್ದ ಯಾರೂ ಕೂಡಾ ಇದನ್ನು ಎತ್ತಿರಲಿಲ್ಲವೇಕೆ ಪಂಡಿತ ಮದನ್‌ಮೋಲಾನ ಮಾಲವೀಯ, ಲಾಲ ಲಜಪತರಾಯರಂತಹ ಮುಖಂಡರು ಎಂದೂ ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಅಷ್ಟೇ ಏಕೆ ಹಿಂದೂ ಮಹಾಸಭಾದ ಮುಖಂಡ ಸಾವರ್ಕರ್, ಮಾತ್ರವಲ್ಲ ಆರ್.ಎಸ್.ಎಸ್. ಸಂಸ್ಥಾಪಕ ಹೆಡ್ಗೆವಾರ್ ಹಾಗೂ ಗೋಲ್ವಾಲ್ಕರ್‌ರವರು ಕೂಡಾ ಏಕೆ ಈ ಬಗ್ಗೆ ಮೌನವಾಗಿದ್ದರು? ಬಿಜೆಪಿ ಶ್ವೇತಪತ್ರ ಹೇಳುವಂತೆ ಶ್ರೀರಾಮ "ನಮ್ಮ ಸ್ವಾತಂತ್ರ್ಯ ಆಂದೋಲನದ ರಾಷ್ಟ್ರೀಯ ಭಾವನೆಯ ಆತ್ಮ" ಎಂದಾಗಿದ್ದರೆ ಏಕೆ ಈ ಮೌನ? ಕಾಮತರ ಲೇಖಣಿಯ ಬಿಳಿ ಪೈಂಟ್ ಈ ಮೌನವನ್ನು ಭೇಧಿಸಬಲ್ಲುದೇ?

ಕಾಮತರು ಕಾಣಬಯಸದ ಚಿತ್ರ

ಒಂದಂತೂ ಸತ್ಯ. ಡಿಸೆಂಬರ್ 6 ರ ಕರಾಳ ಘಟನೆ ಹಾಗೂ ನಂತರದ ಭೀಕರ ರಕ್ತಪಾತದಿಂದ ನೊಂದವರಿಗೆ, ಭಾರತ ಎತ್ತಸಾಗಿದೆ ಎಂದು ಆತಂಕ ಪಡುವವರಿಗೆ ಈ ಎರಡು "ಶ್ವೇತಪತ್ರ"ಗಳಿಂದ ತಿಳಿಯುವ ಒಂದೇ ಸಂಗತಿಯೆಂದರೆ ಈ ಇವೆರೆಡರ ಕೃತ್ಯಗಳೂ ಅಂದರೆ ಕಾಂಗ್ರೆಸ್ (ಐ) ಸರಕಾರ ಮತ್ತು ಬಿಜೆಪಿ ಈ ಕರಾಳಕೃತ್ಯಗಳಲ್ಲಿ ಶಾಮೀಲಾಗಿದ್ದು ಎಂಬುದು. ಈ ಎರಡು ಪಕ್ಷಗಳ ನಡುವೆ ಈ ಸಮಸ್ಯೆಯ ಬಗ್ಗೆ ಬಹಳಷ್ಟು ಚರ್ಚೆ ನಡೆಯಿತು. ಆದರೆ ಅವು "ಬಿಳಿಹಾಳೆ"ಯಲ್ಲಿ ಮುದ್ರಿಸಲಾಗದಂತಹ ಚರ್ಚೆಗಳಿರಬಹುದೇನೋ,

ಏಕೆಂದರೆ ಈ ಎರಡೂ ಶ್ವೇತಪತ್ರಗಳಲ್ಲಿ ಅವು ಕಾಣುವುದಿಲ್ಲ. ಎನ್ನುತ್ತಾರೆ. ಪ್ರಖ್ಯಾತ ಅಂಕಣಕಾರ ಎನ್.ಕೆ. ಪಾಂಡೆ (ಫ್ರಂಟ್‌ಲೈನ್)

ಇನ್ನೊಬ್ಬ ಪ್ರಖ್ಯಾತ ಪತ್ರಕರ್ತ ಎನ್. ರಾಮ್‌ರವರು ಹೇಳುವಂತೆ "ಈ ಇಬ್ಬರ ನಡುವಿನ ವೈಷಮ್ಯದಿಂದಾಗಿ ಒಬ್ಬರು ಇನ್ನೊಬ್ಬರನ್ನು ಬಯಲಿಗೆಳೆದಿದ್ದಾರೆ. ಒಬ್ಬರು ಅದುಮಿಡುವ ಸತ್ಯವನ್ನು ಇನ್ನೊಬ್ಬರು ಹೊರಗೆಳೆದಿದ್ದಾರೆ. ಅಷ್ಟರ ಮಟ್ಟಿಗೆ ಇವೆರೆಡು ಪ್ರಯೋಜನಕಾರಿ."

ನಿಜ, ಕಾಮತರಿಗೆ ಇವೆಲ್ಲಾ ಕಾಣಲಾರದು. 'ಮತಾತೀತತೆ ಎಂದರೆ ಬಹುಸಂಖ್ಯಾಕರ ಮತಕ್ಕೋ ಭಾವನೆಗಳಿಗೋ ಅನಾದರ ಕಾಣಿಸುವುದೆಂದರ್ಥವಲ್ಲ ಎಂಬುದನ್ನು ಬಿಜೆಪಿಯ ಪತ್ರ ಸೂಚ್ಯವಾಗಿ ಹೇಳುತ್ತದೆ". ಎನ್ನುವ ಕಾಮತರು ಈ ಮಾತನ್ನು ಇನ್ನಷ್ಟು ಒತ್ತಿ ಹೇಳಬಯಸುತ್ತಾರಂತೆ. ಅರುಣ್ ಶೌರಿಯವರಿಂದಲೂ ಅಡ್ವಾಣಿ, ಸಿಂಘಾಲ್, ದೇವರಸ್‌ಗಳ ಇದನ್ನೇ ಬಯಸುತ್ತಿರಬಹುದು.

ಆದರೆ ಇತರ ಹಲವಾರು ಪತ್ರಕರ್ತರಂತೆ ನಮಗೂ ಎರಡು ಶ್ವೇತಪತ್ರಗಳನ್ನು ಒಟ್ಟಿಗೆ ಇಟ್ಟು ನೋಡಿದಾಗ 19[illegible] ರಿಂದ ಕಾಮತರ "ಡಾಂಭಿಕ ಮತಾತೀತ ಸರಕಾರ" [illegible] ಬಹುಸಂಖ್ಯಾಕರ ಹೆಸರಲ್ಲಿ ರಾಜಕೀಯ ಮಾಡುತ್ತಾ ಗದ್ದುಗೆಯ ಮೇಲೆ ಕಣ್ಣಿಟ್ಟಿರುವ ಕೋಮುವಾದಿ [illegible] ತುಷ್ಟೀಕರಣದ ಚಿತ್ರ ಎದ್ದು ಕಾಣುತ್ತದೆ. ನಾವಂತೂ [illegible] ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಮುಂದೆ ಈ [illegible] ಒತ್ತಿ ಹೇಳಬಯಸುತ್ತೇವೆ.

ಹೀಗೊಂದು ರಾಮನ ಹಾಡು

ಅಯೋಧ್ಯೆ
ಅವಲಕ್ಷಣದ ತಾಣ
ನನಗೆ.

ರಕ್ಕಸರನ್ನು ಕೊಂದು
ಯಜ್ಞಗಳನ್ನು
ನಿರ್ವಿಘ್ನಗೊಳಿಸಿದ್ದು ಅಯೋಧ್ಯೆಯಲ್ಲಲ್ಲ

ಬಿಲ್ಲು ಮುರಿದು
ಸೀತೆಯ ಕಣ್ಣ ಮಿಂಚು
ಗೆದ್ದದ್ದು ಇಲ್ಲಲ್ಲ- ಮಿಥಿಲೆಯಲ್ಲಿ.

ಶಬರಿಯನ್ನು ಮುಟ್ಟಿದ್ದು,
ಸುಗ್ರೀವನಿಗೆ ಅಭಯ ನೀಡಿದ್ದು
ಹನುಮನನ್ನು ಪಡೆದದ್ದೆಲ್ಲಾ ದೂರ ಕಾಡಲ್ಲಿ.

ನಾ ಮೆಟ್ಟಿದ ಕಲ್ಲಿಂದ
ಅಹಲ್ಯೆ ಮರುಹುಟ್ಟಿದ್ದು ಸಹ ಇಲ್ಲಲ್ಲ.

ರಾವಣ ವಧೆ-
ಸೀತಾ ಪುನರ್ಮಿಲನ
ಎಲ್ಲವೂ ಘಟಿಸಿದ್ದು ಇಲ್ಲಿಂದ ದೂರ

ಇಲ್ಲಿಲ್ಲ ಶಾಂತಿ.
ಮೆಚ್ಚಿನ ಮಡದಿ ಬಸುರಿ,
ಅಗಸನ ಮಾತು ಚುಚ್ಚಿ
ಆಕೆಗಾಯಿತು ಅಡವಿ

ಈ ಅಯೋಧ್ಯೆಯಲ್ಲಿ
ಸಿಗಲಿಲ್ಲ
ನನಗೆ ತಂದೆಯ ನೆರಳು
ಮಕ್ಕಳ ಮಮತೆ
ಅಥವಾ ದುಷ್ಟ ಸಂಹಾರ,
ಭಕ್ತ ಪರಿಪಾಲನೆ ಘನತೆ

ಸರಯೂಗೆ ಮಾತ್ರ ಗೊತ್ತು
ನನ್ನ ವ್ಯಥೆ
ಶಪಿತ ಅಯೋಧ್ಯೆಯ
ಹೆಣಭಾರದ ಕಥೆ.

ಎದೆ ತೆರೆದು
ಕೊಡು ನನಗೆ ಒಂದಿನಿತು ಜಾಗ
ಬೇಡವೇ ಬೇಡ ನನಗೆ ಈ
ಅಯೋಧ್ಯೆಯ ಮಂಥಾರಾ ಬೇಧ,
ಕೈಕೆಯಿಯಾ ಹಗೆಯ ಕೂಪ.
ನಾನಿಲ್ಲಿ ಸಿಂಹಾಸನ ವಂಚಿತ

-- ರಮೇಶ್ ಚಿಪಳೂಟಕರ್
ಕೃಪೆ: ಉದಯವಾಣಿ 9-5-93

ರಿಕ್ಷಾವಾಲಾ ರಾಮೂಜಿಗೆ ಜುಗುಪ್ಸೆ ಆವರಿಸಿತೇಕೆ?

ಅಹಮದಾಬಾದ್ : ಇತ್ತೀಚೆಗೆ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸನ್ನು ಹಿಂದಕ್ಕೆ ತಳ್ಳಿದೆಯೆಂಬ ಹರ್ಷವನ್ನು ಬಿಜೆಪಿಗಿತ್ತ ಆರು ವಿಜಯಗಳಲ್ಲಿ ನಾಲ್ಕನ್ನು ಒದಗಿಸಿದ, ಅಡ್ವಾಣಿಯವರ ತವರು ರಾಜ್ಯ ಗುಜರಾತ್‌ನ ರಾಜಧಾನಿ ಹೌದು, ಡಿಸೆಂಬರ್ 6 ರ ನಂತರ ಮುಗ್ಧರ ರಕ್ತದ ಕೋಡಿ ಹರಿದ ನಗರಗಳಲ್ಲಿ ಪ್ರಮುಖ ನಗರ.

ಆ ನಗರದ ಒಂದು ಚಿಕ್ಕ ಬೀದಿಯ ಜನ ಈಗಲೂ ಸುಮಾರು ಅರವತ್ತರ ಪ್ರಾಯದ ರಿಕ್ಷಾವಾಲಾ ರಾಮೂಜಿಯನ್ನು ನೆನಪಿಸಿಕೊಳ್ಳುತ್ತಾರೆ. ಆತ ವಾಸಿಸುತ್ತಿದ್ದದ್ದು ರಹೀಮ್ ಎಂಬುವವರ ಹಿತ್ತಲಮನೆಯಲ್ಲಿ ಬಾಡಿಗೆಯಿಲ್ಲದೆ ರಹೀಮರ ಇಬ್ಬರು ಮಕ್ಕಳನ್ನು ಸ್ಕೂಲಿಗೆ ಕರೆದೊಯ್ಯುತ್ತಿದ್ದಾ, ಪಾಠಸು[illegible] ತರಗತಿಯಲ್ಲಿರುವ ಸುಲ್ತಾನ್ ರಾಮೂಜಿಯನ್ನು 'ದಾದಾ' (ತಾತಾ) ಎಂದೇ ಕರೆಯುತ್ತಿದ್ದ.

ಅಹಮದಾಬಾದನ್ನು ತಲ್ಲಣಗೊಳಿಸಿದ ಇತ್ತೀಚಿನ ಗಲಭೆಗಳ ನಾಲ್ಕನೇ ದಿನವದು. ಬೀದಿಯಲ್ಲಿ ಪರಸ್ಪರ ತಲೆಕಡಿಯಲೂ ಹೇಸದಿದ್ದವರ ನಡುವೆ ಧೈರ್ಯದಿಂದ ನುಗ್ಗಿ ದಯವಿಟ್ಟು ತಾಳ್ಮೆ ಸಹನೆ ತೋರಿ ಎಂದು ಕೈ ಮುಗಿದು ಅಂಗಲಾಚುತ್ತಿದ್ದ ರಾಮೂಜಿ. ನಿಜ ಯಾರೂ ಅವನ ಮಾತಿಗೆ ಕಿವಿಗೊಡಲಿಲ್ಲ. ಆದರೆ ಅವನ ಮೇಲೆ ಕೈ ಮಾಡಲೂ ಇಲ್ಲ. ಅಂತಹ ಗೌರವಾನ್ವಿತ ವ್ಯಕ್ತಿಯಾಗಿದ್ದ ಆತ. ಎಲ್ಲರಿಗೂ ಗೌರವ ನೀಡಿ ಗೌರವ ಪಡೆಯುತ್ತಿದ್ದಾತ. ಆದರೆ ಈ ಗಲಭೆ ಆತನನ್ನು ಅತ್ಯಂತ ಖಿನ್ನ[illegible]ಗಿಯೇ ಖಂಡಿಸುತ್ತಿದ್ದ. ಹಿತ್ತಲಲ್ಲಿ ತನ್ನ ಅನ್ನ ಬೇಯಿಸುತ್ತಾ ತನ್ನ ಸುತ್ತ ವ್ಯಾಪಿಸಿದ್ದ ಕೋಮು ದ್ವೇಷದ ಬಗ್ಗೆ ಸಿಟ್ಟಿನಿಂದ ತನ್ನಷ್ಟಕ್ಕೇ ಮಾತನಾಡುತ್ತಿದ್ದ ಆತ.

ಹೌದು ಅದು ಗಲಭೆಗಳ ನಾಲ್ಕನೇ ದಿನ. ಸೂರ್ಯ ಮುಳುಗಿದನಷ್ಟೆ. ಕೆಲವು ಮನೆಗಳು ಇನ್ನೂ ಉರಿಯುತ್ತಿದ್ದವು. ಜನ ಒಬ್ಬೊಬ್ಬರಾಗಿ ಅತ್ತಿತ್ತ ಹೆದರಿಕೆಯಿಂದ ಕಣ್ಣು ಹಾಯಿಸುತ್ತಾ ಹೊರಬರುತ್ತಿದ್ದರು. ರಾಮೂಜಿ ಅತ್ಯಂತ ಖಿನ್ನತೆಯಿಂದ ಜೋಲು ಮೋರೆಹಾಕಿಕೊಂಡು ಭಾರವಾದ ಹೆಜ್ಜೆಗಳನ್ನಿಡುತ್ತಾ ರಹೀಮನತ್ತ ಸಾಗಿದ್ದ. ಏಕೆ ಈ ಬಾಳು ಎಂಬ ಜಿಗುಪ್ಸೆ ತುಂಬಿದಂತಿತ್ತು ಅವನ ಕಾಲುಗಳಲ್ಲಿ. ಇದ್ದಕ್ಕಿದ್ದಂತೆ ಕಾರು ಕಿರ್ರನೆ ನಿಂತ ಸದ್ದಿಗೆ ಅಯ್ಯೋ ಎಂಬ ಚೀರಾಟ. ರಹೀಮ ಬೀದಿಯತ್ತ ಧಾವಿಸಿ ಬಂದ. ಅವನ ಹಿಂದೆಯೇ ಇತರರು. ರಾಮೂಜಿ ಅಂಬಾಸಿಡರ್ ಕಾರೊಂದರ ಚಕ್ರದಡಿ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಅವನ ಜೇಬಿನಿಂದ ಹೊರಗೆ ಬಂದ ಎರಡು ರೂಪಾಯಿ ನಾಣ್ಯ [ಅಲ್ಲಾ, ಯೇಸು, ಶಿವ] ಚಿತ್ರಗಳಿದ್ದ ಒಂದು ಚಿಕ್ಕ ಕಾರ್ಡು ರಸ್ತೆಯ ಮೇಲೆ ಬಿದ್ದಿತ್ತು. ಈ ಒಂದು ಹೆಣದ ಸುತ್ತಲಾದರೂ ಅಂದು ಆ ಓಣಿಯ ಜನರೆಲ್ಲಾ ನೆರೆದರು. ಆ ಬೀದಿಗಳಲ್ಲಿ ಬಿದ್ದಿದ್ದ ನೂರಾರು ಹೆಣಗಳ ಪೈಕಿ ಜನ ಅತ್ತದ್ದು ಈ ಒಂದು ಹೆಣವನ್ನು ನೋಡಿ ಮಾತ್ರ. ಈ ಹೆಣ ನೋಡುತ್ತಿದ್ದಾಗ ಅವರಿಗೆ ನೆನಪಾಗುತ್ತಿದ್ದದ್ದು ನಾಲ್ಕು ದಿನಗಳ ಹಿಂದೆ ಸದಾ ನಗುವೇ ಲಾಸ್ಯವಾಡುತ್ತಿದ್ದ ವಯಸ್ಸಾದ ಮೊಗವನ್ನು ಪೂರ್ಣವಾಗಿ ಆವರಿಸಿದ್ದ ಖಿನ್ನತೆಯ ಗೆರೆ. ಇನ್ನು ಈ ಬಾಳಿಗೆ ಅರ್ಥವಿಲ್ಲ ಎಂದನ್ನಿಸಿರಬೇಕು ರಾಮೂಜಿಗೆ.

ಇದು "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯಲ್ಲಿ (ಜೂನ್3) ಪ್ರಕಟವಾದ ಒಂದು ಘಟನೆ.

ರಿಕ್ಷಾವಾಲಾ ರಾಮೂಜಿಗೆ ಬದುಕಿನ ಮೇಲೆಯೇ ಜಿಗುಪ್ಸೆ ಮೂಡಿಸಿದ ಸನ್ನಿವೇಶ ಒಂದು ರಾಜಕೀಯ ಪಕ್ಷಕ್ಕೆ ದೇಶವನ್ನಾಳ ಹೊರಟಿರುವ ರಾಜಕೀಯ ಪಕ್ಷಕ್ಕೆ ಹರ್ಷ ತರಿಸುವ ಸನ್ನಿವೇಶವೊ ಆಗಬೇಕೇ?



Fleeing the fighting in Bosnia ...

ಹಾ! ಯುಗೋಸ್ಲಾವಿಯಾ!

ಕರುಳು ಬಿರಿಯುವ ನಿನ್ನ ಕೋದನಕ್ಕೆ ಕಾರಣರಾರು?

ಬೊಷ್ಕೊ ಸರ್ಬಿಯನ್ ಹುಡುಗ. ಅದ್ಮಿರಾ ಮುಸ್ಲಿಂ ಹುಡುಗಿ. ಇಬ್ಬರೂ ಎಂದೂ ಅಗಲದ ಮೌನ ಅಪ್ಪುಗೆಯಲ್ಲಿ ಆರು ದಿನ ಸರಯೆವೊ ಪಟ್ಟಣದಲ್ಲಿ ಬಿದ್ದಿದ್ದರು. ಸರ್ಬಿಯನ್ ಸೈನಿಕರ ಕಣ್ಣಿಗೆ ಅಕಸ್ಮಾತ್ತಾಗಿ ಬಿದ್ದ ಅವರ ಮೇಲೆ ಮಣ್ಣು ರಾಶಿ ಬಿದ್ದಿತ್ತು. ಪಕ್ಕದಲ್ಲೇ ಅವರನ್ನು ನೆಲಕಚ್ಚಿಸಿದ ರಾಕೆಟ್ ಸಹ ಬಿದ್ದಿತ್ತು. 25 ವಯಸ್ಸಿನ ಈ ಯುವಪ್ರೇಮಿಗಳು ಬೊಸ್ನಿಯಾದ ಯಾದವೀ ಕಲಹದಿಂದ ಬೇಸತ್ತು ಯುಗೋಸ್ಲಾವಿಯಾದ ರಾಜಧಾನಿ ಬೆಲ್‌ಗ್ರೇಡ್‌ಗೆ ಹೋಗಿ ಮದುವೆಯಾಗೋಣ ಎಂದು ಸರಯೆವೋದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಆಗಲೇ ಸರ್ಬಿಯನ್ ಹಾಗೂ ಬೊಸ್ನಿಯನ್ ಮುಸ್ಲಿಂ ಗೆರಿಲ್ಲಾಗಳ ನಡುವಣ ರಾಕೆಟ್ ಚಕಮಕಿಯಲ್ಲಿ ಸಿಕ್ಕಿಬಿದ್ದರು. ಬೊಷ್ಕೋ ಅದ್ಮಿರಾರ ದುರಂತ, ಇಡೀ ಯುಗೋಸ್ಲಾವಿಯದ ಜನರ ಇಂದಿನ ದುರ್ಭರ ಬದುಕಿಗೆ ಹಿಡಿದ ಕನ್ನಡಿ. ಸಾಮ್ರಾಜ್ಯಶಾಹಿ ಪಶ್ಚಿಮ ಹಾಗೂ ಸಮಾಜವಾದಿ ಪೂರ್ವಗಳ ನಡುವೆ ಇದ್ದೂ ಶೀತಲ ಸಮರದಿಂದ ದೂರನಿಂತ ಅಲಿಪ್ತ ಚಳುವಳಿ ಆರಂಭಿಸಿದ ಹೆಮ್ಮೆಯ ಯುಗೋಸ್ಲಾವಿಯಕ್ಕೆ ಇಂತಹ ದುಸ್ಥಿತಿ ಏಕೆ? ಹಲವಾರು ಜನಾಂಗಗಳ ಧರ್ಮಗಳ ಜನ ಶಾಂತವಾಗಿ ದಶಕಗಳ ಕಾಲ ಬದುಕುತ್ತಿದ್ದ-ಯುಗೋಸ್ಲಾವಿಯದಲ್ಲಿ ಈ ಯಾದವೀ ಕಲಹ ಏಕೆ? ಯಾವುದೇ ಮಿಲಿಟರಿ ಬಣಕ್ಕೆ ಸೇರದೆ, ಅಲಿಪ್ತರಾಷ್ಟ್ರವಾಗಿದ್ದ ಯುಗೋಸ್ಲಾವಿಯದಲ್ಲಿ ಈ ರಕ್ತಪಾತ ಏಕೆ? ಅದೂ ಶೀತಲ ಸಮರ ಕೊನೆಗೊಂಡಿದೆ ಎಂದು ಎಲ್ಲರೂ ಹೊಯ್ಕೊಳ್ಳುತ್ತಿರುವಾಗ ಈ ಪ್ರಶ್ನೆಗಳಿಗೆ ಸುಲಭ ಉತ್ತರವಿಲ್ಲ. ಆದರೂ ಉತ್ತರ ಹುಡುಕುವ ಪ್ರಯತ್ನ ಈ ಲೇಖನ.

ಯುಗೋಸ್ಲಾವಿಯಾದ ಸಮಸ್ಯೆಗಳು ಆರಂಭವಾಗಿದ್ದು 1991 ರಲ್ಲಿ. ಸ್ಲೋವೇನಿಯಾ, ಕ್ರೋಶಿಯಾಗಳು ಸ್ವಾತಂತ್ರ್ಯ ಘೋಷಿಸಿಕೊಂಡಾಗ, ಆಮೇಲೆ ಒಂದೊಂದಾಗಿ ಬೊಸ್ನಿಯಾ ಮುಂತಾದ ಚಿಕ್ಕ ಗಣ ರಾಜ್ಯಗಳೂ ಸ್ವಾತಂತ್ರ್ಯ ಕೇಳಲಾರಂಭಿಸದವು.

ಯುಗೋಸ್ಲಾವಿಯಾ ಚಿಕ್ಕದೇಶವಾದರೂ ಹಲವಾರು ಜನಾಂಗಗಳು, ರಾಷ್ಟ್ರೀಯತೆಗಳು ಇರುವ ದೇಶ. ಹಿಂದೆ ಹಲವಾರು ಯುರೋಪಿಯನ್ ಸಾಮ್ರಾಜ್ಯಗಳ ಅಧೀನವಾಗಿದ್ದು, ಎರಡನೇ ಮಹಾಯುದ್ಧದನಂತರ ಒಂದಾದ ದೇಶ. ಸುಮಾರು 2-4 ಕೋಟಿ ಜನಸಂಖ್ಯೆಯ ಈ ದೇಶ ಆರು ಗಣರಾಜ್ಯಗಳು (ಸರ್ಬಿಯಾ, ಕ್ರೋಶಿಯಾ, ಸ್ಲೋವೇನಿಯಾ, ಬೊಸ್ನಿಯಾ, ಮೊಂಟೆನೆಗ್ರ, ಮಸೆಡೋನಿಯಾ) ಹಾಗೂ ಎರಡು ಪ್ರಾಂತ್ಯಗಳು (ಕೊಸೊವೊ, ವೊಯ್‌ವೊಡಿನಾ) ಕೂಡಿದ ದೇಶ (ನಕ್ಷೆ ನೋಡಿ) ಸರ್ಬಿಯಾ ಅತಿ ದೊಡ್ಡ ಹಾಗೂ ಪ್ರಮುಖ ಗಣರಾಜ್ಯ ಸರ್ಬಿಯನ್ ಜನಾಂಗದವರು ಸರ್ಬಿಯಾ ಗಣರಾಜ್ಯದಲ್ಲಿ ಬಹುಸಂಖ್ಯಾತರು ಮಾತ್ರವಲ್ಲ, ಇತರ ಗಣರಾಜ್ಯಗಳಲ್ಲೂ ಗಣನೀಯ ಅಲ್ಪಸಂಖ್ಯಾತರು. ಇಡೀ ದೇಶದಲ್ಲಿ ಶೇಕಡಾ 36 ರಷ್ಟು ಜನ ಸರ್ಬಿಯನ್ನರು ಕ್ರೋಟರು, ಮುಸ್ಲಿಮರು, ಸ್ಲೋವೆನ್ನಿಯರು, ಅಲ್ಬೇನಿಯನ್ನರು ಮತ್ತು ಇತರ ಜನಾಂಗದವರು ಅಲ್ಪಸಂಖ್ಯಾತರು. (ಪಟ್ಟಿ ನೋಡಿ)

ನಾಲ್ಕೈದು ದಶಕಗಳ ಕಾಲ ಒಂದೇ ದೇಶವಾಗಿರುವ ಯುಗೋಸ್ಲಾವಿಯದಲ್ಲಿ ಹಲವು ಜನಾಂಗಗಳ ನಡುವೆ. ವಿವಾಹಗಳಾಗಿಲ್ಲವೆಂದಲ್ಲ. ಶೇಕಡಾ 5 ರಷ್ಟು ಜನ ತಮ್ಮನ್ನು ಯುಗೋಸ್ಲಾವಿಯನ್ನರು ಎಂದು ಕರೆದುಕೊಳ್ಳುತ್ತಾರೆ. ಆರ್ಥಿಕವಾಗಿಯೂ ಗಣರಾಜ್ಯಗಳು ಒಂದರ ಮೇಲೊಂದು ಅವಲಂಬಿತವಾಗಿದೆ.

ಯುಗೋಸ್ಲಾವಿಯಾ ಹಿಂದಿನಿಂದಲೂ ಯುರೋಪಿನ ಆಗಿನ ದೊಡ್ಡ ಸಾಮ್ರಾಜ್ಯಶಾಹಿಗಳ ಅಧಿಪತ್ಯಕ್ಕೆ ಸಿಕ್ಕಿದ ದೇಶ (ಚಾರಿತ್ರಿಕ ಹಿನ್ನೆಲೆ ಬಾಕ್ಸ್ ನೋಡಿ.) ಈಗ ಯಾದವೀ ಕಲಹದಲ್ಲಿ ನರಳುತ್ತಿರುವ ಬೋಸ್ನಿಯಾದ ರಾಜಧಾನಿ ಸರಯೆವೋದಲ್ಲಿ ನಡೆದ ರಾಜಕೀಯ ಕೊಲೆಯೇ ಪ್ರಥಮ ಮಹಾಯುದ್ಧ ಆರಂಭವಾಗಲೂ ಕಾರಣವಾಗಿತ್ತು. ಇಟಲಿ, ಹಂಗೇರಿ, ಆಸ್ಟ್ರಿಯಾ, ರೊಮೇನಿಯಾ, ಬಲ್ಗೇರಿಯಾ, ಅಲ್ಬೇನಿಯಾ, ಗ್ರೀಸ್‌ಗಳ ಜತೆ ಗಡಿ ಹೊಂದಿದೆ ಯುಗೋಸ್ಲಾವಿಯಾ.

ಜನಾಂಗೀಯ ದ್ವೇಷದ ಹೊಣೆ

1945 ರಲ್ಲಿ ಜರ್ಮನ್ ಫ್ಯಾಸಿಸಂನಿಂದ ವಿಮೋಚನೆ ನಂತರ ಜೊಸೆಫ್ ಟಿಟೋರವರ ನಾಯಕತ್ವದಲ್ಲಿ ಯುಗೋಸ್ಲಾವಿಯದಲ್ಲಿ ಜನಾಂಗೀಯ ಕಲಹ, ಅಶಾಂತಿ ಇರಲಿಲ್ಲ. 1980 ರಲ್ಲಿ ಅಧ್ಯಕ್ಷ ಟಿಟೋ ನಿಧನದ ನಂತರ ಸಾಮೂಹಿಕ ಅಧ್ಯಕ್ಷತ್ವದ ವಿಧಾನ ಜಾರಿಗೆ ಬಂತು. 1990 ರಲ್ಲಿ ನಡೆದ ಬಹುಪಕ್ಷೀಯ ಚುನಾವಣೆಗಳು ಜನಾಂಗೀಯ-ರಾಷ್ಟ್ರೀಯತೆ ಭಾವನೆಗಳನ್ನು ಕೆರಳಿಸಿದವು. ಅಧಿಕಾರಕ್ಕಾಗಿ ಜನಾಂಗ-ರಾಷ್ಟ್ರೀಯತೆ ಆಧಾರಿಸಿದ ಪಕ್ಷಗಳು ಹುಟ್ಟಿಕೊಂಡವು. ಇವು ಚರಿತ್ರೆಯ ಕಹಿನೆನಪುಗಳನ್ನು ಮರುಕಳಿಸುವ, ತಪ್ಪು ಪೂರ್ವಗ್ರಹವನ್ನು ಹರಡುವ ಮೂಲಕ ಸರ್ಬಿಯಾ ಬಿಟ್ಟು ಇತರ ಗಣರಾಜ್ಯಗಳಲ್ಲಿ ಪ್ರತ್ಯೇಕತಾ ಮನೋಭಾವ ಹರಡಲಾರಂಭಿಸಿತ್ತು. ಆದರೆ ದೊಡ್ಡ ಪ್ರಮಾಣದಲ್ಲಿ ಹರಡಿದ್ದು ಸ್ಲೋವೇನಿಯಾ, ಕ್ರೋಶಿಯಾಗಳ ಸ್ವಾತಂತ್ರ್ಯ ಘೋಷಣೆಯ ನಂತರ. ಮೊದಲ ಬಾರಿಗೆ ಈ ಎರಡು ಗಣರಾಜ್ಯಗಳಿಗೆ ಮಾನ್ಯತೆ ನೀಡಿದ್ದು. ಜರ್ಮನಿ ಈ ಎರಡು ಗಣರಾಜ್ಯಗಳು ಹಿಟ್ಲರನ ಜರ್ಮನಿಯ ಅಧೀನವಾಗಿದ್ದವು ಎಂಬುದು ಆಕಸ್ಮಿಕವಲ್ಲ. ಯುರೋಪಿನ ಇತರ ದೇಶಗಳು, ಅಮೇರಿಕವು ಅದುವರೆಗೆ ಹಿಂದೇಟು ಹೊಡೆಯುತ್ತಿದ್ದು ಜರ್ಮನಿಯ ನಂತರ ಈ ದೇಶಗಳಿಗೆ ಅಧಿಕೃತ ಮಾನ್ಯತೆ ನೀಡಿದವು. ಇದು ಯುರೋಪಿನಲ್ಲಿ ಯಾವುದೇ ದೇಶದ ಗಡಿಯನ್ನು ಪುನರ್ರಚಿಸಲು ಹೋಗಬಾರದು (ಶಾಂತಿ ಹಾಗೂ ಭದ್ರತೆಯ ದೃಷ್ಟಿಯಿಂದ) ಎಂಬ ಎಲ್ಲಾ ದೇಶಗಳೂ ಸೇರಿ ಮಾಡಿಕೊಂಡ ಒಪ್ಪಂದಕ್ಕೆ ವಿರುದ್ಧವಾಗಿತ್ತು.

ಜರ್ಮನಿಯ ಸಂಚು

ಜರ್ಮನಿ ಹಾಗೂ ಯುರೋಪಿನ ಇತರ ದೇಶಗಳು ಯುಗೋಸ್ಲಾವಿಯಾ ದೇಶವನ್ನು ಛಿದ್ರಗೊಳಿಸುವ ಸಂಚು ಹೂಡುತ್ತಿರುವುದು ಯುಗೋಸ್ಲಾವಿಯಾದ ಪ್ರಮುಖ ಜನಾಂಗ ಸರ್ಬಿಯನ್ನರ ಜನಾಂಗೀಯ-ರಾಷ್ಟ್ರೀಯತಾ ಭಾವನೆಗಳನ್ನು ಕೆರಳಿಸಿದವು. ಜರ್ಮನಿ ಕ್ರೋಶಿಯಾ ಸ್ಲೋವೇನಿಯಾ ಪ್ರತ್ಯೇಕತವಾದಿ ಪಕ್ಷಗಳಿಗೆ ಧನಸಹಾಯ ಮಾಡಿದ್ದು ಈಗ ಬಹಿರಂಗ ಗುಟ್ಟು.

ಸ್ವಾತಂತ್ರ್ಯ ಘೋಷಿಸಿಕೊಂಡ ಕ್ರೋಶಿಯಾ, ಬೋಸ್ನಿಯಾಗಳಲ್ಲಿ ದೊಡ್ಡ ಅಲ್ಪಸಂಖ್ಯಾತ ಗುಂಪು ಆದ ಸರ್ಬಿಯನ್ನರಿಗೆ ತಾವು ಎರಡನೇ ದರ್ಜೆ ಪ್ರಜೆಗಳಾಗಿರುತ್ತೇವೆ ಎಂಬ ಭಯವಾಯಿತು. ಇದು ಸರ್ಬಿಯನ್ ಗೆರಿಲ್ಲಾ ಗುಂಪುಗಳಿಗೆ ಜನ್ಮನೀಡಿತು. ಈ ಮಧ್ಯೆ ಯುಗೋಸ್ಲಾವಿಯಾದ ಸೈನದಲ್ಲಿದ್ದ ಹಲವಾರು ತುಕಡಿಗಳು ನಾಮಮಾತ್ರಕ್ಕೆ ಇರುವ ಫೆಡರಲ್ ಸರ್ಕಾರದ ನಿಯಂತ್ರಣದ ಅಭಾವದಿಂದ ಸರ್ಬಿಯನ್ ಗೆರಿಲ್ಲಾ ಗುಂಪುಗಳಿಗೆ ನೇರ ಬೆಂಬಲ ನೀಡಲಾರಂಭಿಸಿದವು. ಹಲವಾರು ಕಡೆ ಗೆರಿಲ್ಲಾ ಕದನದಲ್ಲಿ ನೇರವಾಗಿ ಭಾಗವಹಿಸಲಾರಂಭಿಸಿದವು.

ಕ್ರೋಶಿಯಾದಲ್ಲಿ ಸರ್ಬಿಯನ್ ಗೆರಿಲ್ಲಾ ಪಡೆಗಳು, ಕ್ರೋಶಿಯನ್ ಪಡೆಗಳು ಹೋರಾಟ ನಡೆಸುತ್ತಿವೆ. ಬೋಸ್ನಿಯಾದಲ್ಲಿ ಒಂದು ಕಡೆ ಸರ್ಬಿಯನ್ ಗೆರಿಲ್ಲಾಗಳಿಗೂ, ಮುಸ್ಲಿಂ ಗೆರಿಲ್ಲಾಗಳಿಗೂ ಹೋರಾಟ ನಡೆಯುತ್ತಿದೆ. ಇನ್ನೊಂದು ಕಡೆ ಕ್ರೋಟ್ ಗೆರಿಲ್ಲಾಗಳಿಗೂ, ಮುಸ್ಲಿಂ ಗೆರಿಲ್ಲಾಗಳಿಗೂ ಹೋರಾಟ ನಡೆಯುತ್ತಿದೆ. ಜನಾಂಗೀಯ ದ್ವೇಷ, ಪೂರ್ವಗ್ರಹ ಕೆರಳಿಸಿದಾಗ ಎಲ್ಲೆಡೆ ಆಗುವಂತೆ ಹೇಳತೀರದ ಬರ್ಬರ ಹಿಂಸೆ ನಡೆಯುತ್ತಿದೆ. ಈವರೆಗೆ ಎರಡೂವರೆ ಲಕ್ಷ ಯುಗೋಸ್ಲಾವ್ ನಾಗರಿಕರು ದೇಶ ಬಿಟ್ಟು ಹೋಗಿದ್ದಾರೆ. 12 ಸಾವಿರ ಜನ ಸತ್ತಿದ್ದಾರೆ. ಇನ್ನೂ ಕಳೆದು ಹೋದ ಜನರ ಅಂಕಿಸಂಖ್ಯೆಗಳೂ ಇಲ್ಲ. ಆರ್ಥಿಕ, ಸಾಮಾಜಿಕ ನಷ್ಟ ಲೆಕ್ಕ ಹಾಕಲೂ ಕಷ್ಟವಾಗುತ್ತಿದೆ ಸರ್ಕಾರಗಳಿಗೆ. ಇಡೀ ಯುಗೋಸ್ಲಾವಿಯಾ ರಣರಂಗವಾಗಿದೆ.

ದುರಂತಕ್ಕೆ ಕಾರಣವೇನು?

ಯುಗೋಸ್ಲಾವಿಯಾದ ಈ ದುರಂತ ವಿದ್ಯಮಾನಗಳಿಗೆ ಹಲವು ಕಾರಣಗಳಿವೆ ಮೊದಲನೆಯದು ಯುಗೋಸ್ಲಾವಿಯಾದಲ್ಲಿ ಆರಂಭಿಸಿದ ಆರ್ಥಿಕ ಸುಧಾರಣೆಗಳ ಭಾಗವಾಗಿ ಹಲವು ರಾಷ್ಟ್ರೀಯ ಆಸ್ತಿಗಳ ಆರ್ಥಿಕ

ಯುಗೋಸ್ಲಾವಿಯದಲ್ಲಿರುವ ಜನಾಂಗಗಳು			
ಜನಾಂಗ	ಇಡೀ ದೇಶದಲ್ಲಿ ಜನಸಂಖ್ಯೆ (ಶೇಕಡಾವಾರು)	ಬಹುಸಂಖ್ಯಾತವಿರುವ ಗಣರಾಜ್ಯ	ಗಣನೀಯ ಅಲ್ಪಸಂಖ್ಯಾತ ಗಣರಾಜ್ಯ ಅಡಿಗಳು
ಸರ್ಬಿಯನ್ನರು	36.3	ಸರ್ಬಿಯಾ (ಶೇಕಡಾ 66)	ಬೋಸ್ನಿಯಾ (ಶೇಕಡಾ 31) ಕ್ರೋಶಿಯಾ (ಶೇಕಡಾ 12)
ಕ್ರೋಟರು	19.7	ಕ್ರೋಶಿಯಾ (ಶೇಕಡಾ 75)	ಬೋಸ್ನಿಯಾ (ಶೇಕಡಾ18)
ಮುಸ್ಲಿಮರು	8.9	ಬೋಸ್ನಿಯಾ (ಶೇಕಡಾ 43)	ಸರ್ಬಿಯಾ (ಶೇಕಡಾ 14)
ಸ್ಲೋವೇನ್ನರು	7.8	ಸ್ಲೋವೆನಿಯಾ (ಹೆಚ್ಚು ಕಡಿಮೆ ಶೇಕಡಾ100)	
ಅಲ್ಬೇನ್ನಿಯನ್ನರು	7.7	-	ಮಸೆಡೊನಿಯಾ (ಶೇಕಡಾ 22)
ಮಸೆಡೋನಿಯನ್ನರು	5.9	ಮಸೆಡೋನಿಯಾ (ಶೇಕಡಾ 68)	
ಯುಗೋಸ್ಲಾವಿಯನ್ನರು (ಮಿಶ್ರ ಜನಾಂಗ)	5.4		
ಮೊಂಟಿನಿಗ್ರನ್ನರು	2.5	ಮೊಂಟೆನಿಗ್ರೊ	-
ಹಂಗೇರಿಯನ್ನರು	1.9	-	ಸರ್ಬಿಯಾ
ಇತರ	3.9	-	-



ಯುಗೋಸ್ಲಾವಿಯಾದ

ಸರ್ಬಿಯಾ: ಅತಿ ದೊಡ್ಡ ಗಣರಾಜ್ಯ. 90 ಲಕ್ಷ ಜನಸಂಖ್ಯೆ ಮೂರನೇ ಎರಡು ಭಾಗ ಸರ್ಬಿಯನ್ನರು. ಶೇಕಡಾ 14 ಮುಸ್ಲಿಂ ಅಲ್ಬೇನಿಯನ್ನರು (ಕೊಸೊವೋ ಪ್ರಾಂತ್ಯದಲ್ಲಿ) ಹಂಗೇರಿಯನ್ನರು (ವೊಯ್‌ವೊಡಿನೊ ಪ್ರಾಂತ್ಯದಲ್ಲಿ) ಪ್ರಮುಖ ಅಲ್ಪಸಂಖ್ಯಾತರು. ರಾಜಧಾನಿ ಬೆಲ್‌ಗ್ರೇಡ್ ಅದು ದೇಶದ ರಾಜಧಾನಿ ಕೂಡಾ.

ಕ್ರೋಶಿಯಾ : ಎರಡನೇ ದೊಡ್ಡ ಗಣರಾಜ್ಯ. 47 ಲಕ್ಷ ಜನಸಂಖ್ಯೆ ಕ್ರೋಟರು (ಶೇಕಡಾ 75) ಹೆಚ್ಚಾಗಿ ರೋಮನ್ ಕ್ಯಾಥೋಲಿಕ್ಕರು. ಶೇಕಡಾ 12 ಇರುವ ಸರ್ಬಿಯನ್ನರು ಅತಿದೊಡ್ಡ ಅಲ್ಪಸಂಖ್ಯಾತರು ಆರ್ಥಿಕವಾಗಿ ಪ್ರಬಲವಾದ ಗಣರಾಜ್ಯ ರಾಜಧಾನಿ ಝುಗರೆಬ್.

ಸ್ಲೋವೇನಿಯಾ : ಜನಸಂಖ್ಯೆ 20ಲಕ್ಷ ರೋಮನ್ ಕ್ಯಾಥೋಲಿಕ್ ಸ್ಲೋವೇನಿಯನ್ನರು ಹೆಚ್ಚು ಕಡಿಮೆ ಪೂರ್ಣವಾಗಿ ಇರುವ ಗಣರಾಜ್ಯ ಆರ್ಥಿಕವಾಗಿ ಅತ್ಯಂತ ಪ್ರಬಲ ಗಣರಾಜ್ಯ ಇಲೆಕ್ಟ್ರಾನಿಕ್, ಬಳಕೆ ವಸ್ತುಗಳು, ಬಟ್ಟೆ ಫರ್ನಿಚರ್ ಕೈಗಾರಿಕೆ ಇರುವ ಗಣರಾಜ್ಯ ಆಹಾರ ಹಾಗೂ ವಿದ್ಯುತ್‌ಗೆ ಮಾತ್ರ ಸರ್ಬಿಯಾದ ಮೇಲೆ

ಯುಗೋಸ್ಲಾವಿಯಾದ ಚಾರಿತ್ರಿಕ ಹಿನ್ನಲೆ

...ಸಿಸ್ಟ್ ವಿರೋಧಿ ಹೋರಾಟದಲ್ಲಿ ಮೂಡಿ ಬಂದ ದೇಶ

...ಯುವ ರೂಪದಲ್ಲಿ ಯುಗೋಸ್ಲಾವಿಯಾ ಒಂದು ದೇಶವಾದದ್ದು 1918 ರಲ್ಲಿ ಪ್ರಥಮ ಮಹಾಯುದ್ಧ ...ರ. 1918 ರವರೆಗೆ ಕ್ರೋಶಿಯಾ, ಸ್ಲೋವೇನಿಯಾಗಳು ಆಸ್ಟ್ರೋ- ಹಂಗೇರಿಯನ್ ಸಾಮ್ರಾಜ್ಯದ ...ಗಳು. ಪ್ರಥಮ ಮಹಾಯುದ್ಧದಲ್ಲಿ ಅದರ ಪತನದ ನಂತರ ಕ್ರೋಶಿಯ, ಸ್ಲೋವೇನಿಯಾಗಳು ...ತೆ ಸೇರಿ ಯುಗೋಸ್ಲಾವಿಯಾ ದೇಶವಾಯಿತು.

1941 ರಲ್ಲಿ ಎರಡನೇ ಮಹಾಯುದ್ಧದಲ್ಲಿ ಹಿಟ್ಲರನ ಕೈ ಮೇಲಾಗುತ್ತಿದ್ದ ಮೊದಲ ವರ್ಷಗಳಲ್ಲಿ ...ಯಾ ಫ್ಯಾಸಿಸ್ಟರ ಪಾಲಾಯಿತು. ಅದನ್ನು ಛಿದ್ರಗೊಳಿಸಲಾಯಿತು. ಜನಾಂಗೀಯ ವಿರಸದ ಮೇಲೆ ...ಸಿಸ್ಟ್ ದಬ್ಬಾಳಿಕೆಯನ್ನು ಯುಗೋಸ್ಲಾವಿಯ ಎದುರಿಸಬೇಕಾಯಿತು. ಸ್ಲೋವೇನಿಯಾ ಜರ್ಮನಿಯ ... ಸರ್ಬಿಯಾದಲ್ಲಿ ಜರ್ಮನಿ ಒಂದು ಕೈಗೊಂಬೆ ಸರಕಾರ ಸ್ಥಾಪಿಸಿತು. ದಕ್ಷಿಣ ಮೊಂಟೆ ನೆಗ್ರೋ ...ಡೋನಿಯಾದಲ್ಲಿ ಫ್ಯಾಸಿಸ್ಟ್ ಇಟಲಿ, ಅಡಿಯಾಳಾದ ಸರಕಾರಗಳನ್ನು ಸ್ಥಾಪಿಸಿತು. ವೊಯ್‌ವೊಡಿ ...ೇರಿ ಕಬಳಿಸಿತು. ಇಂದಿನ ಕ್ರೋಶಿಯಾ, ಬೋಸ್ನಿಯಾ ಸೇರಿದ್ದ ಕ್ರೋಶಿಯಾದಲ್ಲಿ ನಾಜಿ-ಸರಕಾರ ...ತು. ಇಡೀ ಯುಗೋಸ್ಲಾವಿಯಾವನ್ನು ನಾಲ್ಕು ಮಿಲಿಟರಿ ಪ್ರದೇಶಗಳಾಗಿ ಜರ್ಮನಿ ಹಾಗೂ ಇಟ ...ಸಿದ್ದವು.

...ಆಡಳಿತದ ಕಾಲದಲ್ಲಿ ಜನಾಂಗೀಯ ದ್ವೇಷ-ದಬ್ಬಾಳಿಕೆ ಎಲ್ಲಾ ಗಣರಾಜ್ಯಗಳಲ್ಲೂ ಜನಾಂಗೀಯ ...ರ್ವಗ್ರಹಕ್ಕೆ ಕಾರಣವಾಯಿತು. ಕ್ರೋಶಿಯಾದಲ್ಲಿ ಜ್ಯೂ, ಜಿಪ್ಸಿಗಳಲ್ಲದೆ ಅಲ್ಪಸಂಖ್ಯಾತ ಸರ್ಬಿಯನ್ನರ ...ದ ಕ್ರೂರ ದಬ್ಬಾಳಿಕೆಯ ಕಹಿ ನೆನಪು ಯುಗೋಸ್ಲಾವಿಯಾವನ್ನು ಇಂದೂ ಕಾಡುತ್ತಿದೆ.

...ಿ ದಬ್ಬಾಳಿಕೆ, ಜನಾಂಗೀಯ ಉದ್ದೇಶದ ವಿರುದ್ಧ ಟಿಟೊ, ಫ್ಯಾಸಿಸ್ಟ್ ವಿರೋಧಿ, ಯುಗೋಸ್ಲಾವಿಯಾ ...ಮಂಡಳಿ ಸ್ಥಾಪಿಸಿದ್ದು ಈ ಮಂಡಳಿಗೆ ಎಲ್ಲಾ ಗಣರಾಜ್ಯಗಳ ಜನತೆಯಿಂದ ಬೆಂಬಲ ದೊರಕಿತು. ಈ ... ಜನಾಂಗದ ಜನರ ಸಮಾನತೆಯಲ್ಲಿ ನಂಬಿಕೆ ಇಟ್ಟಿತು. ಘೋಷಿಸಿತ್ತು. 1945 ರ ಹೊತ್ತಿಗೆ ಗೆರಿಲ್ಲಾ ... ಯುಗೋಸ್ಲಾವಿಯಾದ ಎಲ್ಲಾ ಗಣರಾಜ್ಯಗಳ ನಾಜಿ ಆಡಳಿತವನ್ನು ಬುಡಮೇಲು ಮಾಡುವಷ್ಟು ...ಹಿಟ್ಲರನ ಪತನದ ನಂತರ ಅಧಿಕಾರ ವಹಿಸಿಕೊಂಡಿತ್ತು. ಎಲ್ಲಾ ಗಣರಾಜ್ಯಗಳ ಜನಾಂಗದ ಜನ ಈ ...ಯ ಗಣರಾಜ್ಯಕ್ಕೆ ಸ್ವಿಚ್ಛೆಯಿಂದ ಅಂಗ ಗಣರಾಜ್ಯಗಳಾಗಿ ಸೇರಿದ್ದು, ಇದರಲ್ಲಿ ಯಾವುದೇ ಒತ್ತಾಯ ... ಗಮನಿಸಬೇಕು.

...ಕ್ರೋಶಿಯಾ, ಸ್ಲೋವೇನಿಯಾ, ಬೋಸ್ನಿಯಾಗಳ ಸ್ವಯಂ-ನಿರ್ಧಾರ ಸಾರ್ವಭೌಮತೆ ಬಗ್ಗೆ ಮಾತ ...ರೋಪಿನ ದೇಶಗಳು ಅವುಗಳ ಮೇಲೆ ಆಕ್ರಮಣ ಮಾಡಿ ಸ್ವಾತಂತ್ರ್ಯ ಹರಣ ಮಾಡಿದ್ದವು. ಬ್ರಿಟನ್, ... ದೇಶಗಳು ಇದನ್ನು ನೋಡಿಯೂ ಸುಮ್ಮನಿದ್ದವು ಎಂದು ಚರಿತ್ರೆಯ ನೆನಪು ಮಾಡಿಕೊಳ್ಳುವುದು

...ೋಸ್ಲಾವಿಯಾ, ಹಾ! ಯುಗೋಸ್ಲಾವಿಯಾ, ಜಗತ್ತಿನ ಜನತೆಯ ಕಣ್ಣೆದುರು ಕರುಳು ಬಿರಿ- ...ಚಿತ್ರ ಮೂಡುತ್ತದೆ ಅಲ್ಲಿಯ ಜನರ ರೋಧನ, ಕಿವಿಗಳಲ್ಲಿ ಮೊರೆಯುತ್ತಿದೆ. ಒಂದು ದೇಶ- ...ದಂತೆ ಮೂರನೇ ಜಗತ್ತಿನ ದೇಶಗಳ ನಾಯಕ ಮಣಿಯಾಗಿ ಶ್ರೀಮಂತ ಸಾಮ್ರಾಜ್ಯಶಾಹಿ ...ಗೆ ಬೇನೆಯಾಗಿದ್ದ ಯುಗೋಸ್ಲಾವಿಯಾದ ದುಸ್ಥಿತಿ ಇಂದು ಜಗತ್ತಿನ ಕೇಂದ್ರ ಬಿಂದುವಾ- ...? ಈ ದುಸ್ಥಿತಿಗೆ ಕಾರಣರಾರು? ಎಂಬ ಪ್ರಶ್ನೆಯನ್ನು ಜಗತ್ತಿನೆಲ್ಲಾ ಜನತೆ ಕೇಳಬೇಕಾಗಿದೆ. ...ತಿ ಜಗತ್ತಿನ ಬೇರಾವ ದೇಶಕ್ಕೂ ಒದಗುವುದು ಬೇಡ ಎಂದು ಹಾರೈಸಬೇಕಾಗಿದೆ ಎಚ್ಚರಿಕೆ ...ಬೇಕಾಗಿದೆ.

ಭಾರತ ಅಂತಹುದೇ ಯಾದವೀ ಕಲಹದ ಅಂಚಿನಲ್ಲಿರುವಾಗ ನಮಗೆ ಈ ಪ್ರಶ್ನೆ ಮತ್ತಷ್ಟು ...

...ತನದ ಪ್ರಶ್ನೆ ಗಣರಾಜ್ಯಗಳ ನಡುವೆ ...ಾದಕ್ಕೆಡೆಗೊಟ್ಟಿತು. ಈ ವಿವಾದವನ್ನು ...ಹರಿಸುವ ಮುತ್ಸದಿತನದ ನಾಯಕತ್ವ ...ದ್ರ ಸರ್ಕಾರದಲ್ಲಿರಲಿಲ್ಲ. ಇದು ಕ್ರಮೇಣ ...ೇಕತಾವಾದಕ್ಕೆಡೆಗೊಟ್ಟಿತು. ಆರ್ಥಿಕ ...ಗಿ ಪ್ರಬಲವಾದ ಕ್ರೋಶಿಯಾ, ಸ್ಲೋವೇ ...ಯಾಗಳು ಸ್ವಾತಂತ್ರ್ಯದ ಪ್ರಶ್ನೆ ಮೊದಲು ...ದ್ದು ಎಂಬುದು ಇಲ್ಲಿ ನೆನಪಿಸಿಕೊಳ್ಳಬ ...ದು. ಹೀಗೆ ಆರ್ಥಿಕ ಸುಧಾರಣೆಗಳ ಅಂಗ ...ಗಿ ಒಡೆತನದ ಬದಲಾವಣೆಗಳ ಸಮಸ್ಯೆಗೆ ...ೂನು ಬದ್ಧ ಪರಿಹಾರ ಕಂಡುಹಿಡಿಯು ... ವಿಫಲವಾದದ್ದು ಮುಖ್ಯ ಕಾರಣವಾ ...ತು.

...ಸಮಾಜವಾದಿ ಪ್ರಯೋಗ ಮುರಿಯುವ ಯತ್ನ

...ಯುರೋಪಿನ ದೇಶವೊಂದು ಸಮಾ ...ವಾದಿ ಪ್ರಯೋಗವನ್ನು ಮುಂದುವರೆಸುತ್ತಿ ...ದು ಪಶ್ಚಿಮ ಯುರೋಪಿನ ಸಾಮ್ರಾಜ್ಯ ... ದೇಶಗಳಿಗೆ ಅಪಥ್ಯವಾಗಿತ್ತು. ಆದ್ದ ... ಯುಗೋಸ್ಲಾವಿಯಾದ ಸಮಸ್ಯೆಗಳನ್ನು ...ೇಶದ ಸಾರ್ವಭೌಮತೆಯ ಚೌಕಟ್ಟಿನೊ ...ಪರಿಹರಿಸಲು ಅಂತರ್ರಾಷ್ಟ್ರೀಯ ಬೆಂಬಲ ದೊರಕಲಿಲ್ಲ. ಮಾತ್ರವಲ್ಲ ಯುಗೋಸ್ಲಾವಿಯಾದ ಯಾದವಿಕಲಹದ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡಿದವು. ಶಾಂತಿಪಾಲನೆ, ಸಮಸ್ಯೆ ಪರಿಹರಿಸುವ ಹೆಸರಿನಲ್ಲಿ ಹಸ್ತಕ್ಷೇಪ ನೆಡಸಿ ಸಮಸ್ಯೆಯನ್ನು ಇನ್ನೂ ಜಟಿಲಗೊಳಿಸಿದವು.

ಕ್ರೋಶಿಯಾ, ಸ್ಲೋವೆನ್ನಿಯರ ಪ್ರತ್ಯೇಕತೆಗೆ ಕುಮ್ಮಕ್ಕು ಕೊಡುವಲ್ಲಿ ಜರ್ಮನಿಯ ಪಾತ್ರದ ಬಗ್ಗೆ ಈಗಾಗಲೇ ಹೇಳಿದೆ. ಇಸ್ಲಾಮಿಕ್ ದೇಶಗಳು ಇದೇ ರೀತಿ ಕುಮ್ಮಕ್ಕು ಕೊಡುತ್ತಿವೆ.

ಹಲವು ಮುಸ್ಲಿಂ ಮೂಲಭೂತವಾದಿ ಗುಂಪುಗಳು ಬೋಸ್ನಿಯನ್, ಮುಸ್ಲಿಮ್ ಗೆರಿಲ್ಲಾಗಳಿಗೆ ಬೆಂಬಲಿಸಲು ಹಾಗೂ ಅವರಿಗೆ ತರಬೇತಿ ನೀಡಲು ಈಗಾಗಲೇ ಬೋಸ್ನಿಯಾ ತಲುಪಿದ್ದಾರೆ. ಸೌದಿ ಅರೇಬಿಯಾದ ರಾಜ ಮುಸ್ಲಿಂ ಗೆರಿಲ್ಲಾಗಳಿಗೆ ಒಂದು ಕೋಟಿ ಡಾಲರು ಹಾಗೂ 100 ಲಾರಿ ಶಸ್ತ್ರಾಸ್ತ್ರಗಳನ್ನು ತಲುಪಿಸಿದ್ದಾನೆ ಎಂದು ವರದಿಯಾಗಿದೆ. ಇದೇರೀತಿ ರಶ್ಯನ್ ಬಾಡಿಗೆ ಸೈನಿಕರು ಸರ್ಬಿಯನ್‌ರ ಪರವಾಗಿ ಹೋರಾಡುತ್ತಿದ್ದಾರಂತೆ. ಹಿಂದೆ ಬ್ರಿಟನ್ ಹಾಗೂ ಫ್ರೆಂಚ್ ಬಾಡಿಗೆ ಸೈನಿಕರು ಕ್ರೋಶಿಯಾದಲ್ಲಿ ಹೋರಾಟದಲ್ಲಿ ಭಾಗವಹಿಸಿದ್ದರು ಎಂದು ವರದಿಯಾಗಿತ್ತು.

ಶಾಂತಿ ಪ್ರಯತ್ನಗಳಿಗೆ ಸಾಮ್ರಾಜ್ಯಶಾಹಿ ಅಡ್ಡಗಾಲು

ಶಾಂತಿ ಸ್ಥಾಪನೆಗೆ ಪ್ರಯತ್ನಗಳೇ ನಡೆಯಲಿಲ್ಲವೆಂದಲ್ಲ. ಯುಗೋಸ್ಲಾವಿಯಾದ ಗಣರಾಜ್ಯಗಳ ರಾಜಕೀಯ ನಾಯಕತ್ವದಲ್ಲೂ ಐಕ್ಯ ದೇಶದ ಚೌಕಟ್ಟಿನೊಳಗೆ ಸಮಸ್ಯೆ ಪರಿಹರಿಯುವ ಮನಸ್ಸು ಇರಲಿಲ್ಲವೆಂದೂ ಹೇಳಲು ಸಾಧ್ಯವಿಲ್ಲ. ಆದರೆ ಇಂತಹ ಪ್ರತಿಯೊಂದು ಪ್ರಯತ್ನಕ್ಕೆ ಪಾಶ್ಚಿಮಾತ್ಯ ದೇಶಗಳ ಅರೆಮನಸ್ಸು, ಕೆಲವೊಮ್ಮೆ ನೇರವಾಗಿ ಅಡ್ಡಗಾಲು ಹಾಕುವುದು ಕಂಡುಬಂತು. ವಿಶ್ವಸಂಸ್ಥೆ ಈಗ ಸಾಮ್ರಾಜ್ಯಶಾಹಿ ದೇಶಗಳ ಕೈಗೊಂಬೆಯಾಗಿರುವುದರಿಂದ ಅದರ ಶಾಂತಿ ಪ್ರಯತ್ನಗಳಲ್ಲೂ ಅದೇ ಕಂಡುಬಂತು.

1991 ರಲ್ಲೇ ಯುರೋಪಿಯನ್ ಸಮುದಾಯದ ಪ್ರತಿನಿಧಿಗಳು ಗಣರಾಜ್ಯಗಳ ನಡುವೆ ಶಾಂತಿ ಮಾತುಕತೆ ನಡೆಸಲು ಪ್ರಯತ್ನಿಸಿದವು. ಇದೇ ಸಮಯದಲ್ಲಿ ಅಲಿಪ್ತ

ಪುಟ 8ನೋಡಿ

...ಾಜ್ಯಗಳು

...ಾಗಿದೆ. ಸ್ಲೋವೇನಿಯಾದ ತಲಾ ...ಡೀ ದೇಶದ ತಲಾ ಆದಾಯಕ್ಕಿಂತ ... ಹಿಂದಿನಿಂದಲೂ 36 ಸಾವಿರ ಸಶಸ್ತ್ರ ...ಾರ್ಡ್ ಎಂಬ ಹೆಸರಿನಲ್ಲಿ ಸೈನ್ಯವಿದೆ. ...ಬ್‌ಲ್ಜಾನಾ.

...ಯಾ: ಜನಸಂಖ್ಯೆ 45 ಲಕ್ಷ ... ಸ್ಲಾವ್ ಜನಾಂಗದ ಮುಸ್ಲಿ ...ಾ 31 ಸರ್ಬಿಯನ್ನರು ಶೇಕಡಾ 18 ...ಯಾರೂ ಬಹು ಸಂಖ್ಯಾತರಿಲ್ಲದ ಈ ...ಯಾದವೀಕಲಹ ಅತ್ಯಂತ ಭೀಕರವಾ ...ನಿ ಸರಯೆವೋ.


...ನೆಗ್ರೋ: ಜನಸಂಖ್ಯೆ 6.5 ಲಕ್ಷ, ದಕ್ಷಿ... ರಾಜ್ಯ, ರಾಜಧಾನಿ ಟಿಟೋಗ್ರಾಡ್. ...ವಿಯಾದಿಂದ ಆರ್ಥಿಕ ಲಾಭ ಪಡೆ ...ಯನ್ ಅಧಿಪತ್ಯದ ಬಗ್ಗೆ ಸಂಶಯ.

...ಡೋನಿಯಾ: 15 ಲಕ್ಷ ಜನಸಂಖ್ಯೆ ...ಾವ್‌ಯ. ಪ್ರಮುಖ ಅಲ್ಪಸಂಖ್ಯಾತರು ...ರು. (ಶೇಕಡಾ 22) ಯುಗೋಸ್ಲಾ... ...ಆರ್ಥಿಕವಾಗಿ ಲಾಭ ಪಡೆದಿದ್ದರೂ ...ಅಧಿಪತ್ಯದ ಬಗ್ಗೆ ಸಂಶಯ.

ಡಂಕೆಲ್ ಉರುಳಿಗೆ ಭಾರತದ ಕೊರಳು ನೀಡುತ್ತಿರುವ ಸರ್ಕಾರ

ಸರ್ಕಾರದ ಡಂಕೆಲ್ ಗುಲಾಮಗಿರಿಗೆ ಭಾರತವನ್ನು ತಳ್ಳುವ ನಿರ್ಧಾರವನ್ನು ಮಾಡಿದಂತಿದೆ. ಬೀಜಗಳ ಪೇಟೆಂಟ್ ಪ್ರಸ್ತಾಪವೊಂದನ್ನು ಬಿಟ್ಟು ಉಳಿದವುಗಳನ್ನು ಒಪ್ಪಿಕೊಳ್ಳುವುದರಲ್ಲಿ ಭಾರತಕ್ಕೆ ಗಂಡಾಂತರಗಳೇನೂ ಇಲ್ಲ ಎಂದು ಸರ್ಕಾರ ಘಂಟಾಘೋಷವಾಗಿ ಹೇಳಿದೆ. ಅಂದರೆ ಬೀಜದ ಪ್ರಸ್ತಾಪವೊಂದನ್ನುಳಿದು ಉಳಿದ ಪ್ರಸ್ತಾಪಗಳನ್ನೂ ಒಪ್ಪಿ ಒಪ್ಪಂದಗಳಿಗೆ ಸಹಿ ಹಾಕುವ ತಯಾರಿಯನ್ನು ನಡೆಸಿರಬೇಕು.

ಔಷಧಿ, ಉದ್ಯಮಗಳು, ಬ್ಯಾಂಕಿಂಗ್ ಇನ್ಶೂರನ್ಸ್ ಇತ್ಯಾದಿ ಸೇವೆಗಳನ್ನೆಲ್ಲ ತಟ್ಟಲಿರುವ ಈ ಭಯಂಕರ ಪ್ರಸ್ತಾಪಗಳು ಭಾರತಕ್ಕೆ ಬರೀ ಕತ್ತಲೆಯನ್ನು ತರಲಿವೆ. ಭಾರತದ ಸ್ವಾತಂತ್ರ್ಯವನ್ನೇ ಹರಣ ಮಾಡಲಿರುವ ಈ ಪ್ರಸ್ತಾಪಗಳು ನಮ್ಮನ್ನು ಶತ ಶತಮಾನಗಳಷ್ಟು ಹಿಂದಕ್ಕೆ ಕರೆದೊಯ್ಯಲಿದೆ. ಇದೇ ನರಸಿಂಹರಾಯರ ಸರ್ಕಾರದ ಉದ್ದೇಶವಲ್ಲವೇ?



ನರಸಿಂಹರಾವ್ ಸರಕಾರದ 24ನೇ ತಿಂಗಳಲ್ಲಿ

ರೂಪಾಯಿಯ ಪೂರ್ಣ ಪರಿವರ್ತನೆ! ತಪ್ಪೊಪ್ಪಿಗೆ?

ರೂಪಾಯಿಯ ಪೂರ್ಣ ಪರಿವರ್ತನೆಯನ್ನು ಒಳ್ಳೆಯ ಕ್ರಮವೆಂದು ಸರ್ಕಾರ ಸಮರ್ಥಿಸಿಕೊಂಡಿತು. ಆದರೆ ಈಗ ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಸಿ. ರಂಗರಾಜನ್ ಅವರು 'ಬಂಡವಾಳ ಖಾತೆಯಲ್ಲಿ ರೂಪಾಯಿಯ ಪೂರ್ಣ ಪರಿವರ್ತನೆಯ ಕ್ರಮ ಸದ್ಯಕ್ಕಿಲ್ಲ' ಎಂದಿದ್ದಾರೆ. ಇವಕ್ಕೆ ಅವರು ನೀಡಿರುವ ಕಾರಣಗಳು ವ್ಯಾಪಾರ ಬಾಕಿಯ ಪರಿಸ್ಥಿತಿ ಅಂದರೆ ವಿದೇಶೀ ವಿನಿಮಯದ ಪರಿಸ್ಥಿತಿ ಸುಧಾರಿಸಿಲ್ಲ. ಈ ಪರಿಸ್ಥಿತಿ ಸುಧಾರಿಸಿದ ಮೇಲೆ ಸರ್ಕಾರ ಬಂಡವಾಳ ಖಾತೆಗೂ ಈ ಪರಿವರ್ತನೆಯನ್ನು ಅನ್ವಯಿಸಬಹುದು.

ಆದರೆ ಈಗಿನ ವ್ಯಾಪಾರ ಖಾತೆಯ ಪೂರ್ಣ ಪರಿವರ್ತನೆಯಿಂದಾಗಿ ನಮ್ಮ ವಿದೇಶೀ ವಿನಿಮಯ ಪರಿಸ್ಥಿತಿ ಸುಧಾರಿಸುತ್ತದೆಯೇ!

ರಂಗರಾಜನ್ ಅರ್ಥಮಂತ್ರಿಗಳ ಈ ಕ್ರಮಕ್ಕಾಗಿ ತಪ್ಪೊಪ್ಪಿಕೊಳ್ಳುತ್ತಿದ್ದಾರೆಯೇ?

ಹೊಗಳಿ ಹೊನ್ನ ಶೂಲಕ್ಕೇರಿಸುವವರು

ಐ.ಎಂ.ಎಫ್. ನಂತಹ ಸಂಸ್ಥೆಗಳು ಜಗತ್ತಿನ ಜನರ ಕಣ್ಣಿಗೆ ಮಣ್ಣೆರಚಲು ಎಂತಹ ಸರ್ಕಸ್ಸುಗಳನ್ನು ಮಾಡುತ್ತಾರೆ ಎಂಬುದಕ್ಕೆ ಇದು ಒಂದು ನಿದರ್ಶನ. ಕಳೆದವಾರ ಐ.ಎಂ.ಎಫ್. ವಿಶ್ವ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಂದು ವರದಿ ಹೊರತಂದಿತು. ಅದರಲ್ಲಿ ಭಾರತ ಜಗತ್ತಿನ ಆರನೇ ಅತಿ ದೊಡ್ಡ ಆರ್ಥಿಕ ಎಂದಿತು. 'ಭಾರತದ ಬಡತನ ನಿರುದ್ಯೋಗಗಳ ಬಗೆಗೆ 'ಬಲ್ಲವರಿಗೆಲ್ಲ ಇದು ಆಶ್ಚರ್ಯದ ಸಂಗತಿಯಾಯಿತು. ಐ.ಎಂ.ಎಫ್. ಒಂದೇ ಒಂದು ಬೌದ್ಧಿಕ ಕಸರತ್ತನ್ನು ಮಾಡಿದೆ. ಜಾಗತಿಕ ಮಾರುಕಟ್ಟೆಯಲ್ಲಿ ರೂಪಾಯಿಯ ಬೆಲೆಯ ಮೇಲೆ ಆರ್ಥಿಕವನ್ನು ಅಳೆಯುವ ಬದಲು ಅದು ರೂಪಾಯಿಯ ಆಂತರಿಕ ಖರೀದಿ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡಿದೆ. ಜಾಗತಿಕ ಮಾರುಕಟ್ಟೆಯ ಪ್ರಕಾರ ಭಾರತದ ತಲಾ ಉತ್ಪನ್ನ 330 ಡಾಲರುಗಳಷ್ಟು, ಆದರೆ ಆಂತರಿಕ ಖರೀದಿ ಸಾಮರ್ಥ್ಯದ ಪ್ರಕಾರ ಅದು ತಲಾ 1150 ಡಾಲರುಗಳಿಗೇರುತ್ತದೆ."

ಹೇಗಿದೆ ಐ.ಎಂ.ಎಫ್. ಭಾರತೀಯರನ್ನು ಶ್ರೀಮಂತಗೊಳಿಸುವ ವೈಖರಿ?

ಭಾರತದ ತಲೆಯ ಮೇಲೆ ತೂಗುತ್ತಿರುವ ಕತ್ತಿ

ಇದು ಅಮೇರಿಕದ ವಿಶೇಷ 301 ಎಂಬ ಕತ್ತಿ. ಮೂರನೇ ಜಗತ್ತಿನ ದೇಶಗಳ ಮೇಲೆ ವಿಶೇಷವಾಗಿ ಅಮೇರಿಕ ಬಳಸುತ್ತಿರುವ ಈ ಕತ್ತಿ ಸದ್ಯಕ್ಕೆ ಒಂದು ಕಡೆಗೆ ಸರಿದಿದೆ. ಆದರೆ ಯಾವಾಗ ತಲೆ ಮೇಲೆ ಬರುವುದೋ ಗೊತ್ತಿಲ್ಲ. ವ್ಯಾಪಾರ ನಿರ್ಬಂಧಗಳ ವಿರುದ್ಧವಾಗಿ ಅಮೇರಿಕ ಬಳಸುವ ಈ ನಿಯಮ ಬಳಸಿದಾಗ ಭಾರತ ಅಮೇರಿಕಕ್ಕೆ ಮಾಡುವ ರಫ್ತನ್ನು ನಿರ್ಬಂಧಗೊಳಿಸುತ್ತದೆ.

ಭಾರತದ ಕೈ ತಿರುಚಲು ಈ ಕ್ರಮವನ್ನು ಬಳಸುತ್ತಿರುವ ಅಮೇರಿಕ ಭಾರತದ ಉದಾರೀಕರಣದಿಂದಲೂ ತೃಪ್ತಿಪಟ್ಟಿಂತಿಲ್ಲ. ಡಂಕೆಲ್ ಪ್ರಸ್ತಾವಗಳಿಗಿಂತ ಕೆಟ್ಟದಾಗಿರುವ ಈ ನಿಯಮ ಭಾರತದ ಆರ್ಥಿಕವನ್ನು ಹಾಳುಗೆಡವಬಲ್ಲದು. ಡಂಕೆಲ್ ಮುಂದೆ ದೊಗ್ಗು ಸಲಾಮು ಹೊಡೆಯುತ್ತಿರುವ ನರಸಿಂಹರಾಯರ ಸರ್ಕಾರ ಈ ವಿಷಯದಲ್ಲಿ ತಲೆ ಭಾಗದಂತಹ ಸಾರ್ವಜನಿಕ ಅಭಿಪ್ರಾಯ ರೂಢಿಸಬೇಕಾಗಿದೆ.

ಹಗರಣದಲ್ಲಿ ಏರಿದ ಹರ್ಷದ್‌ನ ಪಾಲು

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಇತ್ತೀಚಿನ ವರದಿಯಲ್ಲಿ ಶೇರು ಹಗರಣದ ಅಂಕಿ ಸಂಖ್ಯೆಗಳನ್ನು ಪರಿಷ್ಕರಿಸಿದೆ. ಹಗರಣದ ಒಟ್ಟು ಮೊತ್ತದಲ್ಲಿ ಬದಲಾವಣೆಯಿಲ್ಲದಿದ್ದರೂ ಹರ್ಷದ್‌ಮೆಹ್ತನ 154 ಹೆಚ್ಚಿನ ವ್ಯವಹಾರಗಳು ಬೆಳಕಿಗೆ ಬಂದಿವೆ. ಈ ವ್ಯವಹಾರಗಳ ಮೊತ್ತ 1,749 ಕೋಟಿ ರೂಪಾಯಿಗಳು. ಪರಿಷ್ಕರಿಸಿದ ಅಂಕೆ ಸಂಖ್ಯೆಗಳ ಪ್ರಕಾರ ವಿವಿಧ ದಲಾಲರುಗಳ ವ್ಯವಹಾರಗಳ ಸಂಖ್ಯೆ ಮತ್ತು ಮೊತ್ತ ಕೆಳಗಿನಂತಿದೆ.

ಹಳೆಯ ಅಂಕಿ ಸಂಖ್ಯೆಗಳ ಪ್ರಕಾರ ಹರ್ಷದ್ ಮೆಹ್ತನ ವ್ಯವಹಾರಗಳ ಸಂಖ್ಯೆ 2,607 ಆಗಿದ್ದು ಮೊತ್ತ 68,839.24 ಕೋಟಿರೂಪಾಯಿಗಳಾಗಿದ್ದವು.

ಶೇರು ಹಗರಣ

ದಲಾಲನ ಹೆಸರು	ವ್ಯವಹಾರಗಳ ಸಂಖ್ಯೆ	ಒಳಗೊಂಡ ಮೊತ್ತ
ಭೂಪೇನ್ ಚಂಪಕ್‌ಲಾಲ್	3240	ರೂ 69,667 ಕೋಟಿ
ಹಿತೇನ್ ದಲಾಲ್	4,688	ರೂ.92,464 ಕೋಟಿ
ಹರ್ಷದ್ ಮೆಹ್ತ	2,761	ರೂ. 70,588 ಕೋಟಿ,

ಹರ್ಷದ್ ಮೆಹ್ತನ ಪತ್ರ ಗೊಂದಲಗಳ ಸುಳಿ

ಹರ್ಷದ್ ಮೆಹ್ತನ ವಕೀಲರು ಜಂಟಿ ಸಂಸದೀಯ ಸಮಿತಿಗೆ ಒಂದು ಪತ್ರ ಬರೆದು ತಮ್ಮ ಕಕ್ಷಿದಾರ 85 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಿಂದ ತೆಗೆದದ್ದರ ವಿವರ ಮತ್ತು ಅದನ್ನು ಹಂಚಿದ ವಿವರ ನೀಡಲು ಸಿದ್ಧನಿರುವುದಾಗಿ ತಿಳಿಸಿದ್ದರು. ಅದಕ್ಕೆ ಪ್ರತಿಯಾಗಿ ಮೆಹ್ತ ತನಗೆ ಆಗಬಹುದಾದ ರಾಜಕೀಯ ಕಿರುಕುಳದಿಂದ ರಕ್ಷಣೆ ನೀಡಬೇಕೆಂದು ಕೇಳಿದ್ದ. ಆದರೆ ಇದು ಸಂಸದೀಯ ಸಮಿತಿ ಮತ್ತು ಸಿಬಿಐನ ಅಧಿಕಾರ ವ್ಯಾಪ್ತಿಯ ಹೊರಗಿದೆ ಎಂಬುದು ಸಂಸದೀಯ ಸಮಿತಿಯ ಅಭಿಪ್ರಾಯ.

ಈಗ ಇನ್ನೊಂದು ವರದಿ ಬಂದಿದ್ದು ಮೆಹ್ತನ ವಕೀಲರು ಮೆಹ್ತನನ್ನು ಕೇಳದೆ ಇಂತಹ ಪತ್ರ ಬರೆದಿದ್ದಾರೆ ಎಂದಿದೆ.

ಯಾವುದು ಸತ್ಯ? ತೆರೆಯ ಮರೆಯಲ್ಲಿ ಏನೇನು ನಡೆಯುತ್ತಿದೆ?

ಪ.ಬಂಗಾಳದ ಜೀವನಾಡಿ.........

ಪುಟ 2ರಿಂದ

ಮೋರಿ ಕಟ್ಟಿದರೆ ನಮ್ಮ ಗಾಡಿಗಳು ಬೀಳುವುದು ತಪ್ಪುತ್ತಿತ್ತು ಎಂದು. ಹೀಗೆಯೇ ಅನೇಕ ಬಾರಿ ಆದರೆ ಅವರ ಮಾತನ್ನು ಕೇಳುವವರು ಯಾರೂ ಇರುವುದಿಲ್ಲ.

ಈ ಕಲ್ಲು ಅಲ್ಲಿಗೆ ಬಂದು ಬೀಳುವುದು ಏಕೆಂದರೆ ಬಿಡಿಓ ರವರ ಆಜ್ಞೆ, ಅವರಿಗೆ ಡಿಸಿ ಅಥವಾ ಜಿಲ್ಲಾ ಪರಿಷತ್ ಸೆಕ್ರಟರಿಯವರ ಆಜ್ಞೆ. ಹೀಗೆ ಇನ್ನೂ ಏಣಿ ಹತ್ತುತ್ತಾ ಸಾಗುತ್ತದೆ. ದೂರದ ದೆಹಲಿಯಲ್ಲಿ ಬೆಂಗಳೂರಿನಲ್ಲಿ ನಮ್ಮ ತಿಮ್ಮೇನಹಳ್ಳಿಗೆ ಬೇಕಾದ್ದೇನು ಎಂಬುದು ನಿರ್ಧಾರವಾಗುತ್ತದೆ. ಅದು ಹಳ್ಳಿಗರಿಗೆ ಬೇಕಾಗಿರಲಿ ಬೇಡವಾಗಿರಲಿ. ಹೀಗಾಗಿ ಅನೇಕ ಕಟ್ಟಡಗಳು ಹಾಳು ಸುರಿಯುತ್ತಿರುತ್ತವೆ, ಅನೇಕ ಯೋಜನೆಗಳು ಕಾರ್ಯರೂಪಕ್ಕೆ ತರಲಾಗದೆ ಖಾಸಲಾಗಿರಿಸಿದ ಹಣ ವ್ಯರ್ಥವಾಗುತ್ತದೆ. ಅಥವಾ ಯಾರದೋ ಜೇಬು ಸೇರುತ್ತದೆ.

ಪ.ಬಂಗಾಳದಲ್ಲಿ ಇಂತಹವು ಕಾಣಸಿಗುವುದೇ ಇಲ್ಲ ಎಂಬಷ್ಟು ಕಡಿಮೆ ಏಕೆ? ಅಲ್ಲಿಯ ಯೋಜನೆ ದಿಲ್ಲಿಯ ಅಧಿಕಾರಿಗಳಿಂದ ರೂಪುಗೊಳ್ಳುವುದಿಲ್ಲ ಹಳ್ಳಿಗಳ ಜನರು ಪಂಚಾಯಿತಿಗಳು ರೂಪಿಸುತ್ತವೆ. ಪಂಚಾಯತ್ ಸಮಿತಿಯ ಅಧ್ಯಕ್ಷರ ಮುಂದಾಳುತ್ವದಲ್ಲಿ ಬ್ಲಾಕ್‌ಮಟ್ಟದಲ್ಲಿಯೂ, ಜಿಲ್ಲಾ ಪರಿಷತ್‌ನ ಅಧ್ಯಕ್ಷರ ನೇತೃತ್ವದಲ್ಲಿ ಜಿಲ್ಲಾ ಮಟ್ಟದಲ್ಲಿಯೂ ಯೋಜನಾ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಸಂಪನ್ಮೂಲಗಳನ್ನು ಇಲಾಖಾವಾರು ಹರಡಿ ಬ್ಲಾಕ್ ಹಾಗೂ ಜಿಲ್ಲಾ ಅಭಿವೃದ್ಧಿ ಸಮಿತಿಗಳಿಗೆ ತಿಳಿಸಲಾಗುವುದು. ಬ್ಲಾಕ್ ಮಟ್ಟದ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಸಂಯೋಜನೆ, ಜಿಲ್ಲಾ ಮಟ್ಟದ ಯೋಜನೆಗಳನ್ನು ರಾಜ್ಯ ಮಟ್ಟದಲ್ಲಿ ಸಂಯೋಜಿಸಲಾಗುತ್ತಿದೆ. ಹೀಗೆ ಕೆಳಮಟ್ಟದಿಂದ ಯೋಜನೆಗಳನ್ನು ರೂಪಿಸುವುದು, ಕಾರ್ಯಗತಗೊಳಿಸುವುದು ಜನರ ಸಕ್ರಿಯ ಭಾಗವಹಿಸುವಿಕೆಯಿಂದ ನಡೆಯುತ್ತಿದೆ. ಪಂಚಾಯತ್‌ಗಳಿಗೆ ತೆರಿಗೆ ವಸೂಲಿ ಜವಾಬ್ದಾರಿಯನ್ನು ನೀಡಲಾಗಿದೆ.

ಪಂಚಾಯತ್‌ಗಳು ಉದ್ಯೋಗಾವಕಾಶ ಕೊಡುವಲ್ಲಿ, ಸಂಪನ್ಮೂಲ ಸೃಷ್ಟಿಸುವುದರಲ್ಲಿ, ಕೃಷಿ ಉತ್ಪಾದನೆ ಮಾಡುವುದರಲ್ಲಿ, ಸಾಮಾಜಿಕ ಅರಣ್ಯ ರಚಿಸುವುದರಲ್ಲಿ ಮೇವು, ವ್ಯವಸಾಯ ಮಾಡುವುದರಲ್ಲಿ ಗಣನೀಯ ಪಾತ್ರ ವಹಿಸುತ್ತಿವೆ. ಸಾಕ್ಷರತಾ ಆಂದೋಳನವೂ ಪಂಚಾಯತ್ ಪ್ರತಿನಿಧಿಗಳ ನೇತೃತ್ವದಲ್ಲಿ ನಡೆಯುತ್ತಿದೆ. ಸಹಜವಾಗಿಯೇ, ಸಾಕ್ಷರತಾ ಆಂದೋಳನವು ಪಂಚಾಯತಗಳ ಕಾರ್ಯನಿರ್ವಹಣೆಯಲ್ಲಿ ಇನ್ನಷ್ಟು ದಕ್ಷತೆ ಹೆಚ್ಚಿಸಲು ಪ್ರಯೋಜನವಾಗಿದೆ.

ಸಂಗ್ರಹ : ಪೀಪಲ್ಸ್ ಡೆಮಾಕ್ರಸಿ



ತಮಿಳ್ನಾಡು : ಪಕ್ಷಕ್ಕೆ ಯುಸಿಪಿಐ ಕಾರ್ಯಕರ್ತರು

-- ವಿಶ್ವ

ತಮಿಳುನಾಡಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜನಸಮೂಹದಲ್ಲಿ ಜನಪ್ರಿಯಗೊಂಡು ಬಲಗೊಳ್ಳುತ್ತಿರುವ ದಿಸೆಯಲ್ಲಿ ಒಂದು ಹೊಸ ವಿದ್ಯಮಾನ ಕಂಡು ಬಂದಿದೆ. ಅದುವೇ ಇನ್ನೊಂದು ಎಡಪಕ್ಷದ ಸಾವಿರಾರು ಕಾರ್ಯಕರ್ತರು ಪಕ್ಷವನ್ನು ಸೇರಿರುವುದು.

ಯುನೈಟೆಡ್ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಯುಸಿಪಿಐ)ದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹೆನ್ರಿ ಥಾಮಸ್ ನಾಯಕತ್ವದಲ್ಲಿ ನೂರಾರು ಮಂದಿ ಸದಸ್ಯರು ಆ ಪಕ್ಷವನ್ನು ತೊರೆದು ಸಿಪಿಐ(ಎಂ) ಪಕ್ಷವನ್ನು ಸೇರಿದರು. ನಗಾಯ್-ಕೈದ್ ಎ ಮಿಲ್ಲತ್ ಜಿಲ್ಲೆಯ ಕೊಟ್ಟೂರು, ನೀಡಮಂಗಲಂ ಮತ್ತು ತಲೈಗ್ನಯಿರು ಪಂಚಾಯತ್‌ಗಳಲ್ಲಿ ಈ ವಿದ್ಯಮಾನ ನಡೆದಿದೆ.

ಹೆನ್ರಿ ಥಾಮಸ್ ಅಲ್ಲದೆ ಯುಸಿಪಿಐ ರಾಜ್ಯ ಕಾರ್ಯದರ್ಶಿ ಮಂಡಳಿಯ ಇನ್ನೊಬ್ಬ ಸದಸ್ಯ ಕೆ.ರಾಮಚಂದ್ರನ್ ಜಿಲ್ಲಾ ಮಂಡಳಿ ಸದಸ್ಯರುಗಳಾದ ಪಿ.ಸ್ಟಾಲಿನ್, ಪಿ. ಪಿಳಯನ್, ರಾಜಕರುಣಾಕರನ್, ಕಲಿಯ ಮೂರ್ತಿ, ವಡಿವೇಲು, ತಂಬುಸ್ವಾಮಿ ಇವರುಗಳು ಸಿಪಿಐ(ಎಂ) ನಾಯಕರನ್ನು ಇತ್ತೀಚೆಗೆ ಭೇಟಿ ಮಾಡಿ ಪಕ್ಷ ತೊರೆದು ಸಿಪಿಐ(ಎಂ) ಅನ್ನು ಸೇರುವ ನಿರ್ಧಾರವನ್ನು ವ್ಯಕ್ತಪಡಿಸಿದರು.

ಮಾರ್ಕ್ಸ್‌ವಾದಿ ವಿರೋಧಿ ಧೋರಣೆಗಳು : ಯುಸಿಪಿಐ ಸದಸ್ಯರು ಸಿಪಿಐ(ಎಂ) ಸೇರಿರುವುದು ಯಾವುದೇ ವೈಯುಕ್ತಿಕ ಹಿತಾಸಕ್ತಿಯಿಂದಲ್ಲ. ಪಕ್ಷದ ನಾಯಕರು ಮಾರ್ಕ್ಸ್‌ವಾದ ಹಾಗೂ ಕಾರ್ಮಿಕ ವರ್ಗದ ಸಿದ್ಧಾಂತಗಳಿಗೆ ವಿರೋಧವಾದ ಧೋರಣೆಗಳನ್ನು ತಳೆಯುತ್ತಿರುವುದರಿಂದ ತಾವು ಅದನ್ನು ಬಿಡುತ್ತಿರುವುದಾಗಿ ಈ ನಾಯಕರು ವಿವರಿಸಿದರು. ಪಕ್ಷದ ಜಿಲ್ಲಾ ನಾಯಕತ್ವದ ಸರ್ವಾಧಿಕಾರಿ ಪ್ರವೃತ್ತಿ ಹಾಗೂ ಅವರು ಅನುಸರಿಸುವ ವಿರೋಧಾಭಾಸದ ಸಂಘಟನಾ ನೀತಿಗಳು ಕೂಡಾ ಈ ಕಾರ್ಯಕರ್ತರು ಯುಸಿಪಿಐ ಬಿಡಲು ಕಾರಣವಾದವು.

ಯುಸಿಪಿಐ ತೊರೆದ ಈ ನಾಯಕರು ಹಾಗೂ ಕಾರ್ಯಕರ್ತರು ಸಿಪಿಐ(ಎಂ) ದೇಶದ ಕಾರ್ಮಿಕ ವರ್ಗ ಮತ್ತು ಎಡಶಕ್ತಿಗಳ ನೇತೃತ್ವದ ಪಾತ್ರವನ್ನು ವಹಿಸುತ್ತಿದೆ ಎಂದು ಶ್ಲಾಘಿಸಿದ್ದಾರೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾದ ಸರಕಾರಗಳು ಕಾರ್ಮಿಕ ವರ್ಗ ಹಾಗೂ ಪ್ರಜಾಸತ್ತಾತ್ಮಕ ಬಳ್ಳುಗಳ ರಕ್ಷಣೆ ಮಾಡುತ್ತಿರುವವನ್ನು ಹೊಗಳಿದ್ದಾರೆ.

ಕಾರ್ಲ್ ಮಾರ್ಕ್ಸ್‌ರ 175ನೇ ಜಯಂತಿ ಸಂದರ್ಭದಲ್ಲಿ ಕಲ್ಕತ್ತಾದಲ್ಲಿ ಅಂತರ್ರಾಷ್ಟ್ರೀಯ ವಿಚಾರಗೋಷ್ಠಿಯೊಂದನ್ನು ಏರ್ಪಡಿಸುವ ಮೂಲಕ ವಿವಿಧ ಕಮ್ಯುನಿಸ್ಟ್ ಪಕ್ಷಗಳ ಮಧ್ಯೆ ಸಹಮತವನ್ನು ತರಲು ಸಿಪಿಐ(ಎಂ) ಪ್ರಯತ್ನಿಸಿದ್ದನ್ನು ಕೂಡಾ ಯುಸಿಪಿಐನ ಮಾಜಿ ಕಾರ್ಯಕರ್ತರು ಶ್ಲಾಘಿಸಿದ್ದಾರೆ.

ಈಗ ಸುಮಾರು ಒಂದು ಸಾವಿರ ಮಂದಿ ಯುಸಿಪಿಐ ಕಾರ್ಯಕರ್ತರು ಸಿಪಿಎಂ ಅನ್ನು ಸೇರಿದ್ದು ಪಕ್ಷ ಹಾಗೂ ಅದರ ಸಾಮೂಹಿಕ ಸಂಘಟನೆಗಳ ಇನ್ನೂ ನೂರಾರು ಮಂದಿ ಕಾರ್ಯಕರ್ತರು ಇದೇ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ಕೊಲೆ ಆರೋಪಿಗೆ ವಿಶೇಷ ಭದ್ರತೆ!

ಕೊಲೆ ಪ್ರಕರಣವೊಂದರ ಮೊದಲ ಆರೋಪಿಗೆ ವಿಶೇಷ ಹಾಗೂ ಅಭೂತಪೂರ್ವ ಭದ್ರತಾ ವ್ಯವಸ್ಥೆಗಳನ್ನು ಮಾಡಿರುವ ಸುದ್ದಿಯೊಂದು ಕೇರಳದಿಂದ ಬಂದಿದೆ. ಇಂಥ ವ್ಯವಸ್ಥೆ ಏರ್ಪಾಡಿಗೆ ಮುತುವರ್ಜಿ ವಹಿಸಿದವರು ಸ್ವತಃ ಮುಖ್ಯಮಂತ್ರಿ ಕೆ. ಕರುಣಾಕರನ್. ಕೊಲೆ ಆರೋಪಿ ಯಾರು ಗೊತ್ತೇ - ಕಣ್ಣೂರು ಜಿಲ್ಲಾ ಕಾಂಗ್ರೆ ಅಧ್ಯಕ್ಷರೂ ಆಗಿರುವ ಶಾಸಕ ಸುಧಾಕರನ್. ಸಿಪಿಐ(ಎಂ) ಕಾರ್ಯಕರ್ತ ನಲ್ವಾಡಿ ವಾಸು ಹತ್ಯೆ ಪ್ರಕರಣದಲ್ಲಿ ಸುಧಾಕರನ್ ಮೊದಲ ಆರೋಪಿ ಸ್ಥಾನದಲ್ಲಿದ್ದಾರೆ.

ವೈರ್‌ಲೆಸ್ ಸೌಲಭ್ಯವುಳ್ಳ ಒಂದು ಪೋಲೀಸ್ ಜೀಪ್, ಒಬ್ಬ ಸಬ್‌ಇನ್ಸ್‌ಪೆಕ್ಟರ್ ಮತ್ತು ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಇಬ್ಬರು ಕಾನ್ಸ್‌ಟೇಬಲ್‌ಗಳು - ಇವು ಸುಧಾಕರನ್‌ಗಾಗಿ ಏರ್ಪಡಿಸಿರುವ ಭದ್ರತಾ ವ್ಯವಸ್ಥೆಯ ಅಂಶಗಳು. ಆತ ಕಣ್ಣೂರು ಜಿಲ್ಲೆಯಲ್ಲಿ ಓಡಾಡುವಲ್ಲೆಲ್ಲಾ ಭದ್ರತೆ ಒದಗಿಸುವಂತೆ ಸೂಚನೆ ಕೊಡಲಾಗಿದೆ. ಕೇರಳದಲ್ಲಿ ಸಚಿವರಿಗೆ ಕೂಡಾ ಈ ರೀತಿಯ ಭದ್ರತೆಯನ್ನು ನೀಡಲಾಗುತ್ತಿಲ್ಲ ಎನ್ನುವುದು ಗಮನಾರ್ಹ ಅಂಶವಾಗಿದೆ. ಕಾಂಗ್ರೆ ಶಾಸಕನಿಗೆ ಏರ್ಪಡಿಸಿರುವ ಈ ಭದ್ರತಾ ವ್ಯವಸ್ಥೆಯಿಂದಾಗಿ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ 12 ಲಕ್ಷ ರೂ. ವೆಚ್ಚವಾಗಲಿದೆ. ಹಣದ ಕೊರತೆಯಿಂದಾಗಿ ಟ್ರೆಜರಿಗಳನ್ನು ಹಲವಾರು ದಿನಗಟ್ಟಲೆ ಮುಚ್ಚಿಡುವ ಒಂದು ಸರಕಾರ ಈ ರೀತಿ ಮಾಡುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಸುಧಾಕರನ್ ಮತ್ತು ಆತನ ಅಂಗರಕ್ಷಕರು ವಾಸುವನ್ನು ಗುಂಡಿಟ್ಟುಕೊಂದು ಹಾಕಿದ್ದರು. ಆದರೆ ಮುಖ್ಯಮಂತ್ರಿ ಕರುಣಾಕರನ್ ತನ್ನ ದೆಂಬಲಿಗರನ್ನು ಸಂತೋಷ ಪಡಸಲಿಕ್ಕಾಗಿ ಹಸ್ತಕ್ಷೇಪ ನಡೆಸಿ ರಕ್ಷಿಸುತ್ತಿರುವುದರಿಂದ ಪೋಲೀಸರು ನಿಷ್ಕ್ರಿಯರಾಗಿದ್ದಾರೆ.

ಕಾಂಗ್ರೆ ಪುಂಡರಿಂದ ಬಾಂಬ್ ದಾಳಿ

ಕಣ್ಣೂರು ಜಿಲ್ಲೆಯಲ್ಲಿ ಕಾಂಗ್ರೆಸ್(ಐ) ಕಾರ್ಯಕರ್ತರು ಇತ್ತೀಚೆಗೆ ಜಿಲ್ಲಾ ಮಂಡಳಿ ಅಧ್ಯಕ್ಷ ಟಿ.ಕೆ.ಬಾಲನ್ ಅವರ ಮನೆಯ ಮೇಲೆ ನಾಡಬಾಂಬ್‌ಗಳಿಂದ ದಾಳಿ ಮಾಡಿದರು. ಈ ಆಕ್ರಮಣದಲ್ಲಿ ಬಾಲನ್‌ರ ಪತ್ನಿ ಹಾಗೂ ಮಗ ಗಂಭೀರವಾಗಿ ಗಾಯಗೊಂಡರು.

ಸಿಪಿಐ(ಎಂ) ಪ್ರದೇಶ ಸಮಿತಿ ಕಾರ್ಯದರ್ಶಿ ಬಾಲಕೃಷ್ಣನ್ ಪಟ್ಟಣ ಸಹಕಾರಿ ಸಂಘದ ಅಧ್ಯಕ್ಷ ಟಿ.ಎಂ.ಜನಾರ್ದನನ್ ಅವರ ಮನೆಗಳು ಹಾಗೂ ತಂಬಾಕು ಕಾರ್ಮಿಕರ ಸಂಘದ ಕಚೇರಿ ಮೇಲೂ ಬಾಂಬ್ ದಾಳಿ ನಡೆಯಿತು. ಸ್ಫೋಟಗಳಿಂದಾಗಿ ಕಟ್ಟಡಗಳ ಬಾಗಿಲುಗಳು ಮತ್ತು ಕಿಟಕಿಗಳು ಜಖಂಗೊಂಡಿವೆ. ಪೋಲೀಸರು ಅನಂತರ ಈ ಸ್ಥಳಗಳಿಂದ ಬಳಸದಿದ್ದ ಅನೇಕ ಬಾಂಬ್‌ಗಳನ್ನು ವಶಪಡಿಸಿಕೊಂಡರು.

ಬಾಲನ್‌ರ ಮಗನ ಕಣ್ಣು ಜಖಂಗೊಂಡಿದ್ದು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇದಕ್ಕೆ ಮುನ್ನ ಕಣ್ಣೂರು ಜಿಲ್ಲಾ ಕಾಂಗ್ರೆ ಅಧ್ಯಕ್ಷ ಹಾಗೂ ಶಾಸಕ ಸುಧಾಕರನ್(ನಲ್ವಾಡಿ ವಾಸು ಹತ್ಯೆ ಪ್ರಕರಣದ ಪ್ರಮುಖ ಆರೋಪಿ) ಅವರ ಕಾರು ಸ್ಫೋಟದಲ್ಲಿ ಜಖಂಗೊಂಡಿತ್ತು. ನಾಡಬಾಂಬ್‌ಗಳನ್ನು ಒಯ್ಯುತ್ತಿದ್ದಾಗ ಅವು ಆಕಸ್ಮಿಕವಾಗಿ ಸ್ಫೋಟಿಸಿದಾಗ ಈ ಘಟನೆ ನಡೆಯಿತು. ಆದರೆ ಕಾರಿನಲ್ಲಿ ಬಾಂಬ್ ಒಯ್ಯಲಾಗುತ್ತಿತ್ತೆಂಬ ವಿಷಯವನ್ನು ಮುಚ್ಚಿ ಹಾಕಲಿಕ್ಕಾಗಿ ಇದು ಸಿಪಿಐ(ಎಂ)ನವರು ದಾಳಿ ಮಾಡಿದ್ದರಿಂದ ಆದ ದುರಂತ ಎಂದು ಕಾಂಗ್ರೆಸವರು ದೊಡ್ಡೆಯಿಟ್ಟರು. ಇದಕ್ಕೆ ಪ್ರತೀಕಾರವಾಗಿ ಮೇಲೆ ಹೇಳಿದ ಮನೆಗಳ ಮೇಲೆ ದಾಳಿ ಮಾಡಲಾಯಿತು ಎಂದು ಸುಧಾಕರನ್ ಹೇಳಿದ್ದಾನೆ!

ಕೊಲೆಗಡುಕ ಸುಧಾಕರನ್‌ಗೆ ರಕ್ಷಣೆ ನೀಡುತ್ತಿರುವ ಮುಖ್ಯಮಂತ್ರಿಯ ಕ್ರಮವನ್ನು ಹಾಗೂ ಪೋಲೀಸರ ನಿಷ್ಕ್ರಿಯತೆಯನ್ನು ರಾಜ್ಯ ವಿಧಾನಸಭೆಯ ಪ್ರತಿಪಕ್ಷ ನಾಯಕ ವಿ.ಎಸ್.ಅಚ್ಯುತಾನಂದನ್ ಖಂಡಿಸಿದ್ದಾರೆ. ಹಂತಕರಿಗೇ ರಕ್ಷಣೆ ಹಾಗೂ ಪೋಲೀಸ್ ನಿಷ್ಕ್ರಿಯತೆಯೇ ಇಂತ ಧಾಳಿಗಳಿಗೆ ಪ್ರಮುಖ ಪ್ರೇರಣೆಯಾಗಿವೆ ಎಂದು ಅವರು ವಿಶ್ಲೇಷಿಸಿದ್ದಾರೆ.

ದೈಹಿಕ ಆಕ್ರಮಣ ಹಾಗೂ ನಾಶ ಸಿಪಿಐ(ಎಂ) ನೀತಿಯಲ್ಲಿ ಸಿಪಿಐ(ಎಂ)ನಂಥ ಪಕ್ಷದಲ್ಲಿ ಅಂಥ ಶಕ್ತಿಗಳಿಗೆ ಅವಕಾಶವಿಲ್ಲ. ನಮಗೆ ಜನರ ಪೂರ್ಣ ವಿಶ್ವಾಸವಿದೆ. ಹಾಗಾಗಿ ಇಂಥ ಶಕ್ತಿಗಳನ್ನು ನಡೆಸದೇಕಾಗಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ನಿಗೂಢ ಸಾವುಗಳ ತನಿಖೆಗೆ ಆಗ್ರಹ

ಇತ್ತೀಚೆಗೆ ನಾಲ್ವರು ಮಹಿಳೆಯರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟ ನಾಲ್ಕು ಪ್ರಕರಣಗಳ ಬಗ್ಗೆ ಅಪರಾಧ ವಿಭಾಗದಿಂದ ತನಿಖೆ ನಡೆಸುವಂತೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಎರ್ನಾಕುಳಂ ಘಟಕ ಕೇರಳ ಸರಕಾರವನ್ನು ಒತ್ತಾಯಪಡಿಸಿದೆ.

ಮೇ 21ರಂದು ಘಟಕ ಡಿಐಜಿ ಕಚೇರಿವರೆಗೆ ಮೆರವಣಿಗೆ ನಡೆಸಿ ಈ ದೇಡಿಕೆಯುಳ್ಳ ಒಂದು ಮನವಿ ಪತ್ರವನ್ನು ಅರ್ಪಿಸಿತು. ಸಂಸತ್ ಸದಸ್ಯೆ ಹಾಗೂ ಎಐಡಿಡಬ್ಲ್ಯುಎ ಅಧ್ಯಕ್ಷೆ ಸುಶೀಲಾ ಗೋಪಾಲನ್ ಮೆರವಣಿಗಾರರನ್ನು ಉದ್ದೇಶಿಸಿ ಮಾತನಾಡಿದರು.

ವಿದ್ಯುತ್ ಹೊಸ ನೀತಿ ವಿರೋಧಿಸಿ ರೈತರ ಪ್ರತಿಭಟನೆ

ಮೇ 24 ರಂದು ಕರ್ನಾಟಕ ಪ್ರಾಂತ ರೈತ ಸಂಘ ಬಿಜಾಪುರ ಸಮಿತಿಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ರೈತರ ಪಂಪ್‌ಸೆಟ್ಟಿಗೆ ವಿದ್ಯುತ್ [..]ಂದು ಯುನಿಟಿಗೆ 50 ಪೈಸೆ ಮಾಡಿ ಮೀಟರ ಗ[..]ಳವಡಿಸಲು ಸೂಚನೆಯನ್ನು ಕೈಬಿಟ್ಟು ಮೊದ[..] ನೀತಿ ಮುಂದುವರಿಸಬೇಕೆಂದು ಒತ್ತಾಯಿಸಿ ರೈತರು ಮಹಿಳೆಯರ ಮೆರವಣಿಗೆ ನಡೆಯಿತು. ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ರೈತರು ತೆಗೆದುಕೊಳ್ಳುವ ರಸ ಗೊಬ್ಬರ ಹಾಗೂ ಸಾರ್ವಜನಿಕ ಆಹಾರ ಧಾನ್ಯಗಳ ವಿತ[..] ಸಬ್ಸಿಡಿ ರದ್ದು ಮಾಡಿದ್ದರಿಂದ ಬೆಲೆಗಳ ಏರಿ[..]ಂದ ರೈತರ ಹಾಗೂ ಸಾರ್ವಜನಿಕರ ಮೇಲೆ [..]ಣಾಮ ಬೀರಿ ಡಂಕೆಲ್ ಪ್ರಸ್ತಾವವನ್ನು ತಿರ[..]ಬೇಕೆಂದು ಒತ್ತಾಯಿಸಲಾಯಿತು.

ಕಾಂ. ಬಸವಂತ ಕುಲ್ಲೊಳ್ಳಿ ಪ್ರಾಂತ ರೈತ ಸಂಘ ಜಿಲ್ಲಾ ಉಪಾಧ್ಯಕ್ಷರು ಮಳಸಿದ್ದ, ನಾಯಿಕೊಡಿ, ವಿಜಯಗೌಡ ಪಾಟೀಲ, ಡಿ.ಬಿ. ಬಿರಾದಾರ, ನೀಲಪ್ಪ, ಕುಂಬಾರ ಸೋಮಾಲು ರಾಠೋಡ ಇನ್ನಿತರ ಕಾರ್ಯಕರ್ತರು ಭಾಗವಹಿಸಿದ್ದರು. ಭೀಮಶಿ ಕಲಾದಗಿ ಜಿಲ್ಲಾ ಅಧ್ಯಕ್ಷರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಮಂಡಲ ನೌಕರರ ಸಮಸ್ಯೆಗಳ ಬಗ್ಗೆ ಸಚಿವರ ಜತೆ ಚರ್ಚೆ

ಕರ್ನಾಟಕ ರಾಜ್ಯದ ಮಂಡಲ ಪಂಚಾಯತಿ ನೌಕರರ ಸಮಸ್ಯೆಗಳಾದ ನೌಕರಿ ಭದ್ರತೆ, [..]ವಾಣ ವೇತನ, ಮೆಟ್ರಿಕ್ ಪಾಸಾದವರಿಗೆ [..]ದರ್ಶಿಯಾಗಿ ಬಡ್ತಿ ಹಾಗೆಯೇ ಸದ್ಯ ನೌಕರಿಯಲ್ಲಿರುವ ಮೆಟ್ರಿಕ್ ಪಾಸಾದ 3800 ಜನರಿಗೆ ಕಾರ್ಯದರ್ಶಿಯಾಗಿ ನೇಮಕ ಮೊದ[..]ದ ವಿಷಯಗಳ ಕುರಿತು 31.5.93ರಂದು ಪಂಚಾಯತ್ ರಾಜ್ ಮಂತ್ರಿ ಎಂ.ಪೈ.ಘೋರ್ಪಡೆಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಚರ್ಚಿಸಲಾಯಿತು. ಕಂದಾಯ ಖಾತೆಯವರನ್ನು ಮಂಡಲ ಪಂಚಾಯತಿ ಕಾರ್ಯದರ್ಶಿಗಳನ್ನಾಗಿ ನೇಮಿಸುವ ಬದಲು ಈಗಾಗಲೇ 7-8 ವರ್ಷಗಳಿಂದ ಮಂಡಲ ಪಂಚಾಯತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನುಭವಸ್ಥ ಮತ್ತು ಮೆಟ್ರಿಕ್ ಪಾಸಾದವರನ್ನೇ ಕಾರ್ಯದರ್ಶಿಯಾಗಿ ನೇಮಿಸ[..]ಕೆಂಬ ಮನವಿಯನ್ನು ಸಹಾನುಭೂತಿಯಿಂದ [..]ಗಣಿಸುವ ಆಶ್ವಾಸನೆಯನ್ನು ಮಂತ್ರಿಯವರು [..]ದ್ದಾರೆ. ಜಿಲ್ಲೆಗಳಿಂದ [illegible] ಮಾಹಿತಿ ಬಾರದಿರುವುದರಿಂದ ಇತರ ಬೇಡಿಕೆಗಳ ಕುರಿತು ನಿರ್ಣಯ ಕೈಗೊಳ್ಳಲು ತಡವಾಗುತ್ತಿದೆಯೆಂದೂ ಎಂ.ಪೈ.ಘೋರ್ಪಡೆ ಹೇಳಿದರು. ನೌಕರರಿಗೆ ನ್ಯಾಯ ದೊರಕಿಸಲು ಸರ್ವ ಪ್ರಯತ್ನ ಮಾಡುವ ಆಶ್ವಾಸನೆ ನೀಡಿದರು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಉಪಾಧ್ಯಾಯ ತಿಳಿಸಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಸಂಘಟನೆ ವಿಸ್ತರಣೆಗೆ ಕರೆ

ಹುಬ್ಬಳ್ಳಿ : ದಕ್ಷಿಣ ಕನ್ನಡ ಜಿಲ್ಲೆಯ ಮಾದರಿಯಲ್ಲಿ ಧಾರವಾಡ ಜಿಲ್ಲೆಯಾದ್ಯಂತ ಗ್ರಾಮಾಂತರದಲ್ಲಿಯೂ ಬೀಡಿ ಕಾರ್ಮಿಕರ ಸಂಘಟನೆಯನ್ನು ವಿಸ್ತರಿಸಿ ಬಲಪಡಿಸಬೇಕೆಂದು ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ನೂತನ ಅಧ್ಯಕ್ಷರಾದ ವಿ.ಜೆ.ಕೆ. ನಾಯರ್ ಕರೆ ನೀಡಿದ್ದಾರೆ.

ಅವರು ಮೇ 26 ರಂದು ಹುಬ್ಬಳ್ಳಿಯಲ್ಲಿ ಬೀಡಿ ಕಾರ್ಮಿಕರ ಜಿಲ್ಲಾ ಮಟ್ಟದ 2 ನೇ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತಿದ್ದರು.

ಒಬ್ಬ ಮಾಲಿಕನ ಅಡಿಯಲ್ಲಿ ಮಾತ್ರ ಕೆಲಸ ಮಾಡುವುದು ಸಾಧ್ಯವಾಗದೇಕೆಂದು ಹೇಳಿದ ಕಾಮ್ರೆಡ್ ವಿ.ಜೆ.ಕೆ. ಅವರು ಬೀಡಿ ಕಾರ್ಮಿಕರ ಒಬ್ಬರಿಗಿಂತ ಹೆಚ್ಚು ಮಾಲೀಕರ ಅಡಿಯಲ್ಲಿ ಕೆಲಸ ಮಾಡುವುದರಿಂದ ಕಾನೂನು ಬದ್ಧ ಸೌಲಭ್ಯಗಳಿಗಾಗಿ ನಡೆಸುವ ಹೋರಾಟ ಯಶಸ್ವಿಯಾಗುವುದಿಲ್ಲ ಎಂದು ವಿವರಿಸಿದರು.

ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ನೂತನ ಪ್ರಧಾನ ಕಾರ್ಯದರ್ಶಿ ಕಾಂ. ಕೆ.ಶಂಕರ್, ಉಪಾಧ್ಯಕ್ಷರಾದ ಕಾಂ. ಮಹಮ್ಮದ್ ದಸ್ತಗೀರ್ ಅವರು ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹುಬ್ಬಳ್ಳಿ, ಧಾರಾವಾಡ, ರಾಣೇಬೆನ್ನೂರ್, ಶಿರಹಟ್ಟಿ, ಗದಗ ಮತ್ತು ಶಿಗ್ಗಾಂವ್ ತಾಲ್ಲೂಕುಗಳಿಂದ ಆಗಮಿಸಿದ್ದ ಪ್ರತಿನಿಧಿಗಳು ಕಾಮ್ರೆಡ್ ಎಂ.ಬಿ. ಕಟ್ಟಿ ಅವರು ಮಂಡಿಸಿದ ವರದಿಯ ಮೇಲೆ ಚರ್ಚೆ ಮಾಡಿದರು. ಅಸಂಘಟಿತ ವಲಯದ ಕಾರ್ಮಿಕರ ಅಖಿಲ ಭಾರತ ಚಳುವಳಿಯ ಅಂಗವಾಗಿ ಹತ್ತು ಸಾವಿರ ಸಹಿ ಸಂಗ್ರಹ, ತಾಲೂಕು ಮಟ್ಟದಲ್ಲಿ ಪ್ರದರ್ಶನ, ಜಿಲ್ಲಾ ಕೇಂದ್ರದಲ್ಲಿ ಸಾಮೂಹಿಕ ಧರಣಿ ಮತ್ತು ಜುಲೈ 14 ರ ಮುಷ್ಕರವನ್ನು ಯಶಸ್ವಿಗೊಳಿಸಲು ಸಮ್ಮೇಳನ ತೀರ್ಮಾನ ಮಾಡಿತು.

ಧಾರವಾಡ ಜಿಲ್ಲಾ ಬೀಡಿ ಕಾರ್ಮಿಕರ ಸಂಘಕ್ಕೆ ಈ ಕೆಳಗಿನಂತೆ ಪದಾಧಿಕಾರಿಗಳನ್ನು ಸಮ್ಮೇಳನ ಆಯ್ಕೆ ಮಾಡಿತು.

ಅಧ್ಯಕ್ಷರು ಕಾಂ. ಎಂ. ಬಿ. ಕಟ್ಟಿ, ಉಪಾಧ್ಯಕ್ಷರು ಕಾಂ. ಹುರಾಬಿ ಹುಬ್ಬಳ್ಳಿ, ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಎಚ್. ಮುಲ್ಲಾ, ಸಂಘಟನಾ ಕಾರ್ಯದರ್ಶಿ ಕಾಂ. ನಿತ್ಯಾನಂದ ಸ್ವಾಮಿ, ಖಜಾಂಚಿ ಕಾಂ. ಡಿ. ಜೆ. ಗೋಂದಕರ್.

ಸಮ್ಮೇಳನದ ಅಂಗವಾಗಿ ಹಳೇ ಹುಬ್ಬಳ್ಳಿಯಲ್ಲಿ ಏರ್ಪಡಿಸಲಾಗಿದ್ದ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಬೀಡಿ ಕಾರ್ಮಿಕರು ಮತ್ತು ಇತರ ಕೈಗಾರಿಕಾ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಬೆಲೆಸೂಚ್ಯಂಕ ಆಹಾರವರ್ಷ ಬದಲಾವಣೆಗೆ ಪ್ರತಿಭಟನೆ

ಹರಿಹರ: ಯಾವುದೇ ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಚರ್ಚೆ ಮಾಡದೆ ರಾಜ್ಯ ಸರ್ಕಾರ ಏಕಾಏಕಿಯಾಗಿ ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಾಂಕ ಆಧಾರಿತ ವರ್ಷ 1960=100 ಕೈ ಬಿಟ್ಟು 1987-88=100 ಅನ್ನು ಅಳವಡಿಸಿಕೊಂಡಿರುವುದನ್ನು ಪ್ರತಿಭಟಿಸಿ ಹರಿಹರದಲ್ಲಿ ಸಿ.ಐ.ಟಿ.ಯು ಎ.ಐ.ಟಿ.ಯು.ಸಿ. ಮತ್ತು ಬಿ.ಎಮ್.ಎಸ್. ಕೇಂದ್ರ ಕಾರ್ಮಿಕಗಳಿಗೆ ಸೇರಿದ ಮೇ 27 ರಂದು ಪ್ರತಿಭಟನಾ ಮೆರವಣಿಗೆ ನಡೆಸಿದರು. ಹಾಗೂ ತಹಶಿಲ್ದಾರರ ಕಛೇರಿ ಎದುರು ಮತ ಪ್ರದರ್ಶನ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

1960=100 ಆಧಾರಿತ ಸರಣಿಯಲ್ಲಿ ಇರುವ ದೋಷಗಳನ್ನೇ ಸರಿಪಡಿಸಿದೆ ಅಖಿಲ ಭಾರತ ಸರಣಿಯಲ್ಲಿ 1982=100ಆಧಾರಿತ ಸರಣಿಯನ್ನು ಜಾರಿಗೊಳಿಸಲಾಗಿದ್ದು ಮಾತ್ರವಲ್ಲ ಈಗ ರಾಜ್ಯ ಸರಣಿಗೆ 1987-88 ಆಧಾರಿತ ವರ್ಷವಾಗಿ ತೆಗೆದುಕೊಂಡಿರುವುದರಿಂದ ರಾಜ್ಯದ ಕೈಗಾರಿಕಾ ಕಾರ್ಮಿರಿಗೆ ಮಾತ್ರವಲ್ಲ ಅಸಂಘಟಿತ ವಲಯದ ಲಕ್ಷಾಂತರ ಕಾರ್ಮಿಕರಿಗೆ ತುಟ್ಟಿಭತ್ಯೆ ವಿಷಯದಲ್ಲಿ ಭಾರೀ ಅನ್ಯಾಯವಾಗಲಿದೆ. ಇಲ್ಲಿಯವರಿಗೆ ಜಾರಿಯಲ್ಲಿದ್ದ ಹರಿಹರ ಕೇಂದ್ರವನ್ನು ರದ್ದು ಮಾಡಿರುವುದರಿಂದ ಉತ್ತರ ಕರ್ನಾಟಕದ ಬಹುತೇಕ ಕೈಗಾರಿಕೆಗಳ ಕಾರ್ಮಿಕರಿಗೆ ತುಟ್ಟಿಭತ್ಯೆ ಲೆಕ್ಕಾಚಾರದ ಬಗ್ಗೆ ತೀವ್ರಗೊಂದಲ ತಲೆದೋರಲಿದ್ದು ಮಾಲೀಕ ವರ್ಗಕ್ಕೆ ಇದು ಅನುಕೂಲವಾಗಲಿದೆ. ಹರಿಹರ ಕೇಂದ್ರವನ್ನು ಅವಲಂಬಿಸಿದ್ದ ಕೈಗಾರಿಕಾ ಕಾರ್ಮಿಕರಿಗೆ ಬೇರೆ ಯಾವುದೇ ಕೇಂದ್ರವನ್ನು ಅನ್ವಯಿಸಿದರೂ ತುಟ್ಟಿ ಭತ್ಯೆಯ ವಿಷಯದಲ್ಲಿ ಮೋಸವಾಗಲಿದೆ. ಆದ್ದರಿಂದ 1960=100 ಆಧಾರಿತ ವರ್ಷ ಸರಣಿಯನ್ನೇ ಮುಂದುವರಿಸಬೇಕು, ಹರಿಹರ ಕೇಂದ್ರವನ್ನು ಮೊದಲಿನಂತೆ ಮುಂದುವರಿಸಬೇಕು ಎಂದು ಸರ್ಕಾರಕ್ಕೆ ಸಲ್ಲಿಸಲಾದ ಮನವಿಯಲ್ಲಿ ಒತ್ತಾಯಿಸಲಾಗಿದ್ದು ಈ ಬಗ್ಗೆ ಸರ್ಕಾರ ಕಿವಿಗೊಡದೆ ಹೋದರೆ ಉತ್ತರ ಕರ್ನಾಟಕಾದ್ಯಂತ ತೀವ್ರ ಚಳುವಳಿ ನಡೆಸಲಾಗುವುದು ಎಂದು ಎಚ್ಚರಿಸಲಾಗಿದೆ.

ಮೆರವಣಿಗೆಯ ಕೊನೆಯಲ್ಲಿ ನಿತ್ಯಾನಂದ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ವಿವಿಧ ಕಾರ್ಮಿಕ ಸಂಘಗಳ ಮುಖಂಡರು ಮಾತನಾಡಿ ಮೊಯ್ಲಿ ಸರ್ಕಾರದ ಈ ಬೇಜವಾಬ್ದಾರಿ ಕ್ರಮವನ್ನು ಖಂಡಿಸಿದರು.

ಗಡಿ ವಿದ್ಯಾರ್ಥಿಗಳಿಗೂ ಶೇ. 15 ಅಂಕದ ಲಾಭ ಸಿಗಲಿ

ಬೆಂಗಳೂರು: ಈ ವರ್ಷ ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಶೇ. 15 ಅಂಕ ಸೇರಿಸಬೇಕೆಂದು ಸರಕಾರ ನಿರ್ಣಯಿಸಿದೆ. ಆದರೆ ಈ ಸೌಲಭ್ಯವನ್ನು ಗಡಿ ಪ್ರದೇಶದ ವಿದ್ಯಾರ್ಥಿಗಳಿಗೂ ಅನ್ವಯಿಸಿರುವುದಿಲ್ಲ.

ಮಹಾರಾಷ್ಟ್ರದ ಗಡಿ ಪ್ರದೇಶವಾದ ಜತ್ತೆ ತಾಲೂಕಿನಲ್ಲಿ 8 ಕನ್ನಡ ಹೈಸ್ಕೂಲುಗಳಿವೆ. ಅಲ್ಲಿ ಮೆಟ್ರಿಕ್ ಪಾಸಾದ ವಿದ್ಯಾರ್ಥಿಗಳು ಬಿಜಾಪುರಕ್ಕೆ ಬಂದು ಅಲ್ಲಿ ಸಿಪಿಎಚ್, ಟಿಸಿಎಚ್ ಪರೀಕ್ಷೆ ಪಾಸಾಗಿರುತ್ತಾರೆ. ಅವರಿಗೆ ಶೇ. 15 ಅಂಕಗಳನ್ನು ಸೇರಿಸದಿರುವುದರಿಂದ ನೇಮಕಾತಿಯಲ್ಲಿ ಅವರಿಗೆ ಅನ್ಯಾಯವಾಗುತ್ತಿದೆ. ಗಡಿ ಜಿಲ್ಲೆಯಲ್ಲಿ ಕನ್ನಡ ಅಭ್ಯಾಸ ಸಿಗದಂತಾಗಿದೆ. ಗಡಿ ಪ್ರದೇಶದಲ್ಲಿ ಕನ್ನಡಕ್ಕೆ ಹೆಚ್ಚು ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಜತ್ತೆ ಮೊದಲಾದ ಗಡಿ ಪ್ರದೇಶದಲ್ಲಿ ಮೆಟ್ರಿಕ್ ಪಾಸಾಗಿ ಶಿಕ್ಷಕರ ಹುದ್ದೆಗೆ ಅಭ್ಯರ್ಥಿಗಳಾಗಿರುವವರಿಗೆ ಶೇ. 15 ಅಂಕಗಳ ಲಾಭ ಸಿಗುವಂತೆ ಮೊಯಿಲಿಯವರನ್ನು ಮನವಿ ಮೂಲಕ ವಿನಂತಿಸಿಕೊಂಡಿದ್ದಾರೆ.

ವಿ.ವಿ. ಚುನಾವಣೆ ರದ್ದತಿ ನಿಲುವಿಗೆ ವಿರೋಧ

ಬೆಂಗಳೂರು: ವಿಶ್ವವಿದ್ಯಾಲಯಗಳ ವಿವಿಧ ಅಂಗಗಳಿಗೆ ನಡೆಯುವ ಚುನಾವಣೆಯನ್ನು ರದ್ದು ಪಡಿಸಿ ಅದರ ಬದಲಿಗೆ ಬೇಕಾದರೆ ಆಯಾ ಅಂಗಗಳಿಗೆ ನಾಮಕರಣಗಳನ್ನು ಮಾಡಬಹುದೆಂಬ ನಿಲುವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಬೆಂಗಳೂರು ವಿಶ್ವವಿದ್ಯಾಲಯ ಸಮನ್ವಯ ಸಮಿತಿ ತೀವ್ರವಾಗಿ ವಿರೋಧಿಸಿದೆ. ಮತ್ತು ಸ್ವಂತ ಹಣದಲ್ಲೇ ಶಿಕ್ಷಣವನ್ನು ಪಡೆಯಬೇಕೆಂಬ ನೀತಿಗನುಸಾರವಾಗಿ ವಿಶ್ವವಿದ್ಯಾಲಯಗಳಿಗೆ ಆರ್ಥಿಕ ಸ್ವಯಂ ಅಧಿಕಾರವನ್ನು ಕೊಡಬೇಕೆನ್ನುವ ಸಲಹೆಯನ್ನು ಸಂಪೂರ್ಣವಾಗಿ ವಿರೋಧಿಸಿದೆ.

ವಿಶ್ವವಿದ್ಯಾಲಯಗಳ ವಿವಿಧ ಅಂಗಗಳಿಗೆ ನಡೆಯುವ ಚುನಾವಣೆಗಳಿಂದ ಶೈಕ್ಷಣಿಕ ವಾತಾವರಣ ಕಲುಷಿತಗೊಂಡಿದೆ ಎಂಬ ಕಾರಣದಿಂದ ವಿ.ವಿಗಳನ್ನು ಅರಾಜಕರಣ ಮಾಡುವ ತೀರ್ಮಾನಕ್ಕೆ ಯು.ಜಿ.ಸಿ. ಸಂಘಟಿಸಿದ್ದ ಪ್ರೋಗ್ರಾಮ್ ಆಫ್ ಆಕ್ಷನ್ ನಲ್ಲಿ ವಿ.ವಿಗಳ ಕುಲಪತಿಗಳು ಅಭಿಪ್ರಾಯಕ್ಕೆ ಬಂದಿರುವುದು ಅತ್ಯಂತ ದುರಂತಮಯ ಸಂಗತಿಯಾಗಿದೆ.

ಆರೋಗ್ಯಕರ ಶೈಕ್ಷಣಿಕ ವಾತಾರವಣವನ್ನು, ಚುನಾವಣಾ ಪ್ರಕ್ರಿಯೆಯನ್ನು ನಾಶಪಡಿಸುರುವುದರಿಂದ ಸಾಧಿಸಬಹುದೆನ್ನುವ ಯೋ[..]ನೆಗಳು ನಿಜವಾಗಿಯೂ ಭಾರತದ[..] ಪ್ರಜಾತಂತ್ರದಲ್ಲಿ ಅಪಾಯಕಾರಿಯಾದಂಥ ಬೆಳವಣಿಗೆಯಾಗಿದೆ. ಭಾರತೀಯ ಸಂವಿಧಾನ ಮೂಲಭೂತ ಹಕ್ಕನ್ನು ಕಸಿದುಕೊಳ್ಳುವ ಇಂತಹ ತೀರ್ಮಾನಗಳು ವಿ.ವಿಗಳ ಆರೋಗ್ಯ ಕಾಪಾಡುವುದಕ್ಕಿಂತ ನಾಶಪಡಿಸುವುದೇ ಹೆಚ್ಚು.

ಯಾವುದೇ ಶೈಕ್ಷಣಿಕ ವಾತಾವರಣದಿಂದ ರಾಜಕೀಯ ಚಟುವಟಿಕೆಯನ್ನು ಸಂಪೂರ್ಣವಾಗಿ ಹೊರಗಿಡುತ್ತೇವೆ ಎನ್ನುವುದು ಹಾಸ್ಯಸ್ಪದ ತಿಳುವಳಿಕೆಯಾಗಿದೆ. ಚುನಾವಣೆಗಳ ಬದಲಿಗೆ ನಾಮಕರಣದಿಂದ ಬರುವ ವ್ಯಕ್ತಿಗಳು ರಾಜಕೀಯ ರಹಿತರಾಗಿರುತ್ತಾರೆನ್ನುವ ಕುಲಪತಿಗಳ ನಂಬಿಕೆ ಅಥವಾ ಯೋಚನೆ ಕಳಪೆಮಟ್ಟದ್ದಾಗಿದೆ. ಶೈಕ್ಷಣಿಕ ವಾತಾವರಣದಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳು ಹೊರಗಿನ ಸಮಾಜದ ಚಟುವಟಿಕೆಗಳ ಪ್ರತಿಬಿಂಬವಷ್ಟೇ. ಇವರ ಯೋಚನೆಯ ಪ್ರಕಾರ ವಿ.ವಿ.ಯ ಅಂಗಗಳಿಗೆ ಚುನಾವಣೆಗಳನ್ನು ರದ್ದುಪಡಿಸುವುದೆಂದರೆ ದೇಶದ ಸಾರ್ವಜನಿಕ ಚುನಾವಣೆಯನ್ನು ಒಟ್ಟಾರೆ ಸಂಸದೀಯ ಪ್ರಜಾತಂತ್ರವನ್ನು ನಾಶಪಡಿಸಬೇಕೆನ್ನುವ ಕ್ರಮವಾಗುತ್ತದೆ ಅಷ್ಟೆ.

ನಮ್ಮ ದೇಶದ ಸ್ವಾವಲಂಬನೆಯನ್ನು ನಾಶಪಡಿಸುವ ಅಂಶಗಳು ಹೊಂದಿರುವ ಐ.ಎಂ.ಎಫ್. ಷರತ್ತಿನ ಪ್ರೇರಕವಾದ ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸಲಿಕ್ಕಾಗಿ ಇಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ತಮಗೆ ಬೇಕಾದ "ಜೀ ಹುಜೂರ್"ಗಳನ್ನು ನಾಮಕರಣದ ಮೂಲಕ ಆಯ್ಕೆಮಾಡಿಕೊಳ್ಳಬೇಕೆನ್ನುವುದು ಈ ನೀತಿಯ ಹಿಂದಿನ ಕುತಂತ್ರ ಮತ್ತು "ರಾಜಕೀಯ ಏಜೆಂಟ್" ಆಗಿರುವ ಹಲವಾರು ಕುಲಪತಿಗಳ ರಾಜಕೀಯ. ವಿ.ವಿಗಳು ಸ್ವಯಂ ಹಣಕಾಸು ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಂಪೂರ್ಣ ಅವಕಾಶ ಇರಬೇಕನ್ನುವ ಅಭಿಪ್ರಾಯ ಮತ್ತೂಷ್ಟು ಭಯಂಕರವಾಗಿದೆ. ಈ ನೀತಿಗಳನ್ನು ಜಾರಿಗೊಳಿಸಹೊರಟರೆ ವಿಪರೀತ ಪರಿಸ್ಥಿತಿಯನ್ನು ಎದುರಿಸಬೇಕಾದೀತೆಂದು ಸಮನ್ವಯ ಸಮಿತಿಯ ಪರವಾಗಿ ಕೆ. ಪ್ರಕಾಶ್ ಎಚ್ಚರಿಕೆ ನೀಡಿದ್ದಾರೆ.

ಪಾಕೀಸ್ತಾನದ ಅಧ್ಯಕ್ಷರ ಸರ್ವಾಧಿಕಾರಿ ಆಳ್ವಿಕೆಗೆ ಪೆಟ್ಟು

ನವಾಜ್‌ಷರೀಫ್‌ರ ಸರಕಾರ ಮತ್ತೆ ಆಡಳಿತಕ್ಕೆ

ಕಳೆದ ವಾರದ ಪಾಕಿಸ್ತಾನದ ಸುಪ್ರಿಂ ಕೋರ್ಟ್ ಅಧ್ಯಕ್ಷರ ಕಾರ್ಯಾಚರಣೆ ಬಗ್ಗೆ ನೀಡಿದ ಚಾರಿತ್ರಿಕ ತೀರ್ಪು, ಪ್ರಜಾಪ್ರಭುತ್ವಕ್ಕೆ ಹೊಸ ಜೀವ ಕೊಡುತ್ತದೆ ಎನ್ನುವಾಗಲೇ ಪ್ರಾಂತ್ಯಗಳ ಅಸೆಂಬ್ಲಿ ವಿಸರ್ಜನೆ ಹಾಗೂ ಆತಂಕಕಾರಿ ರಾಜಕೀಯ ಬೆಳವಣಿಗೆಗಳು ಪಾಕಿಸ್ತಾನವನ್ನು ಹೊಸ ರಾಜಕೀಯ ಬಿಕ್ಕಟ್ಟಿಗೆ ನೂಕಿವೆ.

ಪಾಕಿಸ್ತಾನದ ಸುಪ್ರಿಂ ಕೋರ್ಟ್ 10-1 ಬಹುಮತದಿಂದ ನೀಡಿದ ತೀರ್ಪು ಬಹಳ ಆಶ್ಚರ್ಯಕಾರಿ ಬೆಳವಣಿಗೆಯಾಗಿತ್ತು. ಅಧ್ಯಕ್ಷರು ಸರ್ಕಾರ ವಜಾಮಾಡಿದ್ದು ಹಾಗೂ ರಾಷ್ಟ್ರೀಯ ಅಸೆಂಬ್ಲಿ ವಿಸರ್ಜಿಸಿದ್ದು ಸಂವಿಧಾನದ ವಿರುದ್ಧ ಎಂಬ ತೀರ್ಪು ಅಧ್ಯಕ್ಷರ ಮಿತಿ ಇಲ್ಲದ ಸರ್ವಾಧಿಕಾರಿ ಅಧಿಕಾರಗಳ ವಿರುದ್ಧ ಮೂಡುತ್ತಿದ್ದ ಜನಾಭಿಪ್ರಾಯಕ್ಕೆ ಕಾನೂನು ರೂಪ ಒದಗಿಸಿತು ನವಾಜ್ ಶರಿಫ್ ಸರ್ಕಾರದ ವಜಾ ವಿರುದ್ಧ ಸಲ್ಲಿಸಿದ್ದ ಅರ್ಜಿ ಬಗ್ಗೆ ಸುಪ್ರಿಂ ಕೋರ್ಟ್ ತೀರ್ಪು ನೀಡುತ್ತಿತ್ತು. ಅಧಿಕಾರ ನಡೆಸುತ್ತಿದ್ದ ಹಂಗಾಮಿ ಸರ್ಕಾರ ಕಾನೂನು ಬಾಹಿರ ಹಾಗೂ ಅದು ತೆಗೆದುಕೊಂಡ ಪ್ರಮುಖ ನಿರ್ಧಾರಗಳು ಸಿಂಧುವಲ್ಲ ಎಂದೂ ಕೋರ್ಟ್ ತೀರ್ಪು ಇತ್ತಿತು.

ಆಮೇಲೆ ಸಭೆ ಸೇರಿದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ನವಾಜ್ ಶರಿಫ್ ಸರ್ಕಾರ ವಿಶ್ವಾಸ ಮತಗಳಿಸಿತು. 217 ಸದಸ್ಯರ ಅಸೆಂಬ್ಲಿಯಲ್ಲಿ 202 ಈಗ ಇರುವ ಸದಸ್ಯರ ಸಂಖ್ಯೆ ಅದರಲ್ಲಿ 123 ಮತಗಳು ಸರ್ಕಾರದಲ್ಲಿ ವಿಶ್ವಾಸದ ಮತದ ಪರವಾಗಿ ಬಿದ್ದವು. ಹೆಚ್ಚಿನ ವಿರೋಧ ಪಕ್ಷಗಳು ಮತದಾನದಲ್ಲಿ ಭಾಗವಹಿಸಲಿಲ್ಲ.

ಸುಪ್ರಿಂ ಕೋರ್ಟ್ ತೀರ್ಪು ಹಾಗೂ ಆಮೇಲಿನ ಬೆಳವಣಿಗೆಗಳು ಬೆನಾಜಿರ್ ಭುಟ್ಟೋರನ್ನು ರಾಜಕೀಯ ಇಕ್ಕಟ್ಟಿಗೆ ಸಿಕ್ಕಿಸಿದೆ. ಅಧ್ಯಕ್ಷರ ಕಾರ್ಯಾಚರಣೆಯನ್ನು ಬೆಂಬಲಿಸುವ ಮೂಲಕ ಹಾಗೂ ಹಂಗಾಮಿ ಸರ್ಕಾರದಲ್ಲಿ ಭಾಗವಹಿಸುವ ಮೂಲಕ ಈ ವರೆಗೆ ಬೆಳಸಿಕೊಂಡಿದ್ದ ರಾಜಕೀಯ ಗೌರವ ಕಳೆದುಕೊಂಡಿದ್ದಾರೆ. 1988 ರಲ್ಲಿ ಜುನೆಜೊ ಸರ್ಕಾರ ಹಾಗೂ 1990 ರಲ್ಲಿ ತಮ್ಮನ್ನು ವಜಾ ಮಾಡಿದಾಗ ಸುಪ್ರಿಂ ಕೋರ್ಟ್ ಎಲ್ಲಿ ಹೋಗಿತ್ತು ಎಂದು ಅವರು ಪ್ರಶ್ನಿಸಿದ್ದಾರೆ.

ಆಮೇಲೆ ಆದ ತೀವ್ರ ರಾಜಕೀಯ ಬೆಳವಣಿಗೆಗಳಲ್ಲಿ ಪಂಜಾಬ್ ಹಾಗೂ ವಾಯುವ್ಯ ಗಡಿ ಪ್ರಾಂತ್ಯದ ಅಸೆಂಬ್ಲಿಗಳನ್ನು ವಿಸರ್ಜಿಸಲಾಗಿದೆ. ಪಂಜಾಬ್‌ನಲ್ಲಿ ನವಾಜ್ ಶರಿಫ್ ಸರ್ಕಾರದ ವಜಾ ನಂತರ, ಆಗಿನ ಶರೀಫ್ ಪರ ಪಂಜಾಬಿನ ಮುಖ್ಯಮಂತ್ರಿ ವಿಶ್ವಾಸ ಮತ ಸೋತಿದ್ದು, ಮನ್ಸೂರ್ ಅಹಮದ್ ಮುಖ್ಯಮಂತ್ರಿಗಳಾಗಿದ್ದರು. ಈ ಬದಲಾವಣೆಗೆ ಅಧ್ಯಕ್ಷ ಗುಲಾಂ ಇಶಾಕ್ ಖಾನ್ ದುಡ್ಡಿನ ಹಾಗೂ ಬಲ ಪ್ರಯೋಗ ಬಳಸಿದ್ದರಂತೆ. ನವಾಜ್ ಶರೀಫ್ ಸರ್ಕಾರ ಪುನಃ ಸ್ಥಾಪನೆ ನಂತರ ಅಂತಹುದೇ ಬಲಪ್ರಯೋಗದಿಂದ ವಾಟೂ ಸರ್ಕಾರವನ್ನು ಉರುಳಿಸುವ ಪ್ರಯತ್ನ ನಡೆದಿತ್ತು. ಅವಿಶ್ವಾಸ ಮತದ ನೋಟಿಸು ಕೊಡಲಾಗಿತ್ತು. ಇದನ್ನು ಗಮನಿಸಿದ ಮುಖ್ಯಮಂತ್ರಿ ಅಸೆಂಬ್ಲಿ ವಿಸರ್ಜಿಸುವಂತೆ ಗವರ್ನರ್‌ಗೆ ಶಿಫಾರಾಸು ಮಾಡಿದ್ದರು. ಅಧ್ಯಕ್ಷರ-ಪರ ಪಂಜಾಬಿನ ಗವರ್ನರ್ ತತ್‌ಕ್ಷಣ ಅಸೆಂಬ್ಲಿ ವಿಸರ್ಜನೆ ಮಾಡುವ ಆಜ್ಞೆ ಹೊರಡಿಸಿದ್ದಾರೆ. ಅಲ್ಲದೆ ಅವಿಶ್ವಾದ ನಿರ್ಣಯದ ನೋಟಿಸು ಗವರ್ನರ್ ಆಜ್ಞೆ ನಂತರ ನೀಡಲಾಗಿದೆ ಎಂದು ತಮ್ಮನ್ನು ಸಮರ್ಥಿಸಿಕೊಂಡಿದ್ದಾರೆ. ಅವಿಸ್ವಾದ ನಿರ್ಣಯದ ನೋಟಿಸು, ಗವರ್ನರ್ ಆಜ್ಞೆ ಮೊದಲು ನೀಡಲಾಗಿತ್ತು ಎಂದು ಸಾಧಿಸಲು ಅಸೆಂಬ್ಲಿ ಸೆಕ್ರೆಟರಿಯವರನ್ನು ಶರಿಫ್ ಬೆಂಬಲಿಗರು ಅಪಹರಿಸಿದ್ದಾರೆ ಎಂದು ಆಪಾದಿಸಿದ್ದಾರೆ. ಹೀಗೆ ಪಾಕಿಸ್ತಾನದ ರಾಜಕೀಯ ಪುನಃ ಪಾತಾಳಮುಟ್ಟಿದೆ.

ಈ ನಡುವೆ ಪ್ರಧಾನ ಮಂತ್ರಿ ನವಾಜ್‌ಶರಿಫ್ ಅಧ್ಯಕ್ಷರ ಸರ್ವಾಧಿಕಾರಿ ಪ್ರವೃತ್ತಿ ಮೊಟಕುಗೊಳಿಸುವ ಹಾಗೂ ದೇಶದ ರಾಜಕೀಯವನ್ನು ಸರಿದಾರಿಗೆ ತರುವ ಕೆಲಸದಲ್ಲಿ ವಿರೋಧಿ ಪಕ್ಷಗಳ ಸಹಕಾರ ಕೋರಿದ್ದಾರೆ. ಬೆನ್‌ಜಿರ್ ಭುಟ್ಟೋ ಸರ್ಕಾರ ಬೆದರಿಕೆ, ಭಯೋತ್ಪಾದನೆಯ ರಾಜಕೀಯ ನಡೆಸುತ್ತಿದೆ ಅದು ನಿಲ್ಲಿಸುವವರೆಗೆ ಅವರೊಂದಿಗೆ ಸಹಕರಿಸುವುದಿಲ್ಲ. ಅಸೆಂಬ್ಲಿ ವಿಸರ್ಜಿಸಿ ಚುನಾವಣೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಪೋಲೆಂಡಿನಲ್ಲಿ ಸಾರ್ವತ್ರಿಕ ಮುಷ್ಕರದ ಬೆದರಿಕೆ

ಪೋಲೆಂಡ್‌ನ ಪ್ರಥಮ ಮಹಿಳಾ ಪ್ರಧಾನಮಂತ್ರಿ ಹನ್ನ ಸುಚೋಕ ಅವರ ವಿರುದ್ಧ ಅವಿಶ್ವಾಸ ಮತವನ್ನು ಪಾರ್ಲಿಮೆಂಟು ಅಂಗೀಕರಿಸಿದ ಮೇಲೆ, ರಾಜೀನಾಮೆ ನೀಡಿದ್ದಾರೆ. ಅವರ ಸರ್ಕಾರದ ವಿರುದ್ಧ ಮಂಡಿಸಲಾದ ಅವಿಶ್ವಾಸ ಮತ ಒಂದು ಮತದಿಂದ ಮಂಜೂರಾಯಿತು. ಆರ್ಥಿಕ ಸುಧಾರಣೆಯ ಹೆಸರಲ್ಲಿ ಬಂಡವಾಳಶಾಹಿ ಕಟ್ಟುತ್ತಿರುವ ಸರ್ಕಾರ ವೇತನ ನೀತಿ ಹಾಗೂ ಜನರ ಮೇಲೆ ಹೊರೆ ಹೊರಿಸುವ ಬಜೆಟ್ ನೀತಿಗಳ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಲಾಯಿತು.

ಸರಕಾರದ ವಿರುದ್ಧ ಅವಿಶ್ವಾಸ ಮತವನ್ನು ಸಾಲಿಡಾರಿಟಿ ಪಕ್ಷ ತಂದಿತ್ತು. ಮಾಜಿ ಕಮ್ಯುನಿಸ್ಟ್ ಪಕ್ಷ ಸಹ ಅವಿಶ್ವಾಸ ಮತಕ್ಕೆ ಬೆಂಬಲ ನೀಡಿತ್ತು.

ಅಧ್ಯಕ್ಷ ವಲೇಸಾ ಪಾರ್ಲಿಮೆಂಟ್ ವಿಸರ್ಜಿಸುವ ನಿರ್ಣಯ ಕೈಗೊಂಡಿದ್ದಾರೆ. ಪೋಲೆಂಡ್‌ನ ಸಂವಿಧಾನದ ಪ್ರಕಾರ ಇನ್ನು ನಾಲ್ಕು ತಿಂಗಳವರೆಗೆ ಮರು ಚುನಾವಣೆ ನಡೆಯಬೇಕಾಗಿದೆ. ಅಲ್ಲಿವರೆಗೆ ಪ್ರಸಕ್ತ ಸರ್ಕಾರ ಹಂಗಾಮಿ ಸರ್ಕಾರ ನಡೆಸುವಂತೆ ಕೇಳಿಕೊಂಡಿದ್ದಾರೆ.

ಪ್ರಸಕ್ತ ಸರ್ಕಾರ ಮುಂದುವರೆದರೆ ಹಾಗೂ ವೇತನ ಮಾತುಕತೆ ಸಾಲಿಡಾರಿಟಿ ಟ್ರೇಡ್ ಯೂನಿಯನ್ ಜತೆ ನಡೆಸದಿದ್ದರೆ, ಸಾರ್ವತ್ರಿಕ ಮುಷ್ಕರ ನಡೆಸುವುದಾಗಿ ಬೆದರಿಕೆ ಹಾಕಲಾಗಿದೆ. ಸಾಲಿಡಾರಿಟಿ ಪಕ್ಷವೇ ಸಮಾಜವಾದಿ ಪದ್ಧತಿಯಿಂದ ಮಾರುಕಟ್ಟೆ ಆರ್ಥಿಕಕ್ಕೆ ಬದಲಾಯಿಸುವ ಪ್ರಕ್ರಿಯೆ ಆರಂಭಿಸಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಜನರ ಮೇಲೆ ಅತ್ಯಂತ ತೀಕ್ಷ್ಣ ಕಷ್ಟ ಪರಂಪರೆಗಳನ್ನು ಸುಧಾರಣೆಗಳು ಒಡ್ಡಿವೆ.

ವೇತನ ಸ್ಥಗಿತ ನೀತಿಯನ್ನು ಸಾಲಿಡಾರಿಟಿ ಟ್ರೇಡ್ ಯೂನಿಯನ್‌ಗಳು ವಿರೋಧಿಸುತ್ತಿವೆ. ಅಲ್ಪ ಸಂಖ್ಯಾತ ಸಮ್ಮಿಶ್ರ ಸರ್ಕಾರದ ನೀತಿಗಳು ಐ.ಎಂ.ಎಫ್. ಸಾಲ ತೆಗೆದುಕೊಳ್ಳುವ ಸಲುವಾಗಿ ಒಪ್ಪಿಕೊಂಡ ಶರತ್ತುಗಳನ್ನು ಜಾರಿಗೆ ತರುವ ಪ್ರಯತ್ನ ಎಂದೂ ಇಲ್ಲಿ ನೆನಪಿಸಿಕೊಳ್ಳಬಹುದು.

ಮಾಫಿಯಾ ಸರ್ಕಾರದಿಂದ ರಶ್ಯನ್ ಕಮ್ಯುನಿಸ್ಟ್ ನಾಯಕನ ಅಪಹರಣ

ರಶ್ಯನ್ ಕಮ್ಯುನಿಸ್ಟ್ ನಾಯಕ ವಿಕ್ಟರ್ ಅನ್‌ಪಿಲಾವ್ ಅವರನ್ನು ಗೂಂಡಾಗಳು ಅಪಹರಣ ಮಾಡಿ ಥಳಿಸಿದ್ದಾರೆ ಎಂದು ವರದಿಯಾಗಿದೆ. ಈ ಮೂಲಕ ಬೋರಿಸ್ ಯೆಲ್ಟ್‌ಸಿನ್ನರ ಮಾಫಿಯಾ ಸರ್ಕಾರ ಅದು ತನ್ನ ಅಧಿಕಾರ ಉಳಿಸಿಕೊಳ್ಳಲು ಭಯೋತ್ಪಾದಕತೆ ಪ್ರದರ್ಶನಕ್ಕೂ ಹಿಂಜರಿಯುವುದಿಲ್ಲ ಯಾವ ಮಟ್ಟಕ್ಕೂ ಇಳಿಯಲು ಹೇಸುವುದಿಲ್ಲ ಎಂದು ತೋರಿಸಿಕೊಂಡಿದೆ.

ಮೇ 8 ರಂದು ವಿಕ್ಟರ್ ಅವರ ಮೇಲೆ ಅವರಮನೆಯ ಹೊರಗೆ ಎರಡು ಕಾರುಗಳಲ್ಲಿ ತುಂಬಿ ಬಂದ ಗೂಂಡಾಗಳು ದಾಳಿ ಮಾಡಿದರು. ಆಮೇಲೆ ಅವರನ್ನು ಕಾರಿಗೆ ದಬ್ಬಿ ಕಣ್ಣಿಗೆ ಬಟ್ಟೆ ಕಟ್ಟಿ ನಿರ್ಜನ ಪ್ರದೇಶಕ್ಕೆ ಒಯ್ಯಲಾಯಿತು. ಅಲ್ಲಿ ಅವರನ್ನು ಕಟ್ಟಿ ಹಾಕಿ ಥಳಿಸಲಾಯಿತು. ಸುಮಾರು 24 ಗಂಟೆ ಕಾಲ ಪದೇಪದೇ ಥಳಿಸುವ ಈ ಕಾರ್ಯಚರಣೆ ಮುಂದುವರೆಯಿತು. ಆಮೇಲೆ ಅವರನ್ನು ಪ್ರಜ್ಞೆ ತಪ್ಪಿದ ಅವಸ್ಥೆಯಲ್ಲಿ ಮಾಸ್ಕೋ ಹೊರಗಿರುವ ಕಾಡಿನ ಬಳಿ ಎಸೆಯಲಾಗಿತ್ತು. ಹಲವಾರು ಮೂಳೆ ಮುರಿದು ತೀವ್ರ ಆಂತರಿಕ ಏಟು ಬಿದ್ದಿರುವ ಅವರನ್ನು ಆಸ್ಪತ್ರೆಯಲ್ಲಿ ಸೇರಿಸಲಾಗಿದ್ದು ಅವರ ಸ್ಥಿತಿ ಆತಂಕಕಾರಿಯಾಗಿದೆ.

ಅಪಹರಣ ಹಾಗೂ ದಾಳಿ ಬಗ್ಗೆ ರಶ್ಯನ್ ಪತ್ರಿಕೆಗಳು ಏನೂ ನಡೆದಿಲ್ಲದಂತೆ ಸಂಕ್ಷಿಪ್ತವಾಗಿ ವರದಿ ಮಾಡಿದೆ. ಸಾಮ್ರಾಜ್ಯಶಾಹಿ ಸುದ್ದಿ ಸಂಸ್ಥೆಗಳು ಈ ಬಗ್ಗೆ ಪೂರ್ಣ ಮೌನವಾಗಿವೆ.

ಅವರ ಮೇಲೆ ಆಕ್ರಮಣ ನಡೆದಾಗ, ಅವರು ರಶ್ಯನ್ ಸರ್ಕಾರ ಪ್ರಾಸಿಕ್ಯೂಟರ್ ಆಫೀಸಿನಿಂದ ಹಿಂದಿರುಗುತ್ತಿದ್ದರು. ಮೇ ದಿನ ಗಲಭೆಯಲ್ಲಿ ಅವರ ಪಾತ್ರದ ಬಗ್ಗೆ ಅವರನ್ನು ವಿಚಾರಣೆಗೆ ಕರೆಯಲಾಗಿತ್ತು. ಈ ದಾಳಿಯಿಂದಾಗಿ ಅವರು ಮರುದಿನ ಎರಡನೆಯ ಮಹಾಯುದ್ಧದಲ್ಲಿ ನಾಜಿ ಮೇಲೆ ಸೋವಿಯೆಟ್ ವಿಜಯೋತ್ಸವದ ವಾರ್ಷಿಕದಲ್ಲಿ ಭಾಗವಹಿಸಲಾಗಲಿಲ್ಲ.

ವಿಕ್ಟರ್ ಆನ್‌ಪಿಲಾವ್ ಕಿರಿಯ ಯುವಕ ಕಮ್ಯುನಿಸ್ಟ್ ನಾಯಕರಲೊಬ್ಬರಾಗಿದ್ದು ಅವರು ಸಿಪಿಐ(ಎಂ)ನ ಸೈದ್ಧಾಂತಿಕ ವಿಷಯಗಳ ಬಗೆಗಿನ ನಿರ್ಣಯವನ್ನು ಅವರು ತುಂಬಾ ಮೆಚ್ಚಿಕೊಂಡವರು. ಅವರು ಸಿಪಿಐ(ಎಂ) ಕಲ್ಕತ್ತಾ ಸಂಘಟಿಸಿದ್ದ ಅಂತರಾಷ್ಟ್ರೀಯ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರಬೇಕಾಗಿತ್ತು. ಆದರೆ ಮೇ ದಿನದ ಘಟನೆಗಳ ನಂತರ ರಾಜಕೀಯ ಸನ್ನಿವೇಶದಿಂದಾಗಿ ಅವರು ಬರಲಾಗದಿದ್ದರೂ, ಪ್ರಬಂಧವನ್ನು ಕಳಿಸಿದ್ದರು. ಈ ಅಪಹರಣ, ದಾಳಿ ಯೆಲ್ಟ್‌ಸಿನ್ ಸರ್ಕಾರದ ಕಮ್ಯುನಿಸ್ಟ್‌ವಿರೋಧಿ ನೀತಿಗೆ ಹಿಡಿದ ಕನ್ನಡಿ.

ಲೋಕ ಸಂಚಾರ

- ಪಾಕಿಸ್ತಾನದಲ್ಲಿ ಇತ್ತೀಚೆಗೆ ನವಾಜ್‌ಷರೀಫ್ ಸರ್ಕಾರ ವಜಾ ಮಾಡಿದ ಹಾಗೂ ರಾಷ್ಟ್ರೀಯ ಅಸೆಂಬ್ಲಿ ವಿಸರ್ಜಿಸಿದ ಅಧ್ಯಕ್ಷರ ಆಜ್ಞೆ ಸಂವಿಧಾನ ವಿರುದ್ಧ ಎಂಬ ಚಾರಿತ್ರಿಕ ಸುಪ್ರಿಂ ಕೋರ್ಟ್ ತೀರ್ಪು ನವಾಜ್ ಶರಿಫ್ ಸರ್ಕಾರ ಪುನಃ ಸ್ಥಾಪನೆ. ಪಂಜಾಬ್ ವಾಯುವ್ಯ ಗಡಿಪ್ರಾಂತ್ಯ ಅಸೆಂಬ್ಲಿ ವಿಸರ್ಜನೆ. ಹೊಸ ರಾಜಕೀಯ ಬಿಕ್ಕಟ್ಟು
- ಪೋಲೆಂಡ್‌ನಲ್ಲಿ ವಿಶ್ವಾಸಮತದಲ್ಲಿ ಸೋತು ಸರ್ಕಾರದ ರಾಜೀನಾಮೆ. ಅಧ್ಯಕ್ಷ ಲೆಕ್ ವಲೇಸಾದಿಂದ ಪಾರ್ಲಿಮೆಂಟು ವಿಸರ್ಜನೆ. ಸಾಲಿಡಾರಿಟಿ ಟ್ರೇಡ್ ಯೂನಿಯನ್‌ನಿಂದ ಸಾರ್ವತ್ರಿಕ ಮುಷ್ಕರ ಬೆದರಿಕೆ.
- ಕಾಂಬೋಡಿಯಾದಲ್ಲಿ ಚುನಾವಣೆಗಳು ನಡೆದಿವೆ. ಶೇಕಡಾ 90 ಮತದಾನವಾಗಿದೆ. ಆಳುತ್ತಿರುವ ಕಾಂಬೋಡೀಯನ್ ಪೀಪಲ್ ಪಾರ್ಟಿ ಹಾಗೂ ರಾಜಕುಮಾರ ಸಿಹನೂಕ್‌ರ ಪಕ್ಷಗಳ ನಡುವೆ ತೀವ್ರ ಹಣಾಹಣಿ ಸ್ಪರ್ಧೆ ಇದೆ ಎನ್ನಲಾಗಿದೆ.
- ದಕ್ಷಿಣಾ ಆಫ್ರಿಕಾದಲ್ಲಿ ವರ್ಣಭೇದ-ವಿರೋಧಿ ಪಿ.ಎ.ಸಿ. ನಾಯಕರ ಬಂಧನ. ಮಾತುಕತೆಗಳಿಗೆ ಪುನಃ ಅಡ್ಡಿ.

ಕಾಂಗ್ರೆಸ್ ತನ್ನೆಲ್ಲಾವನ್ನೂ ಕಳೆದುಕೊಳ್ಳುತ್ತಿದೆ

ಪುಟ 1ರಿಂದ

ಸಾಧ್ಯವಿಲ್ಲ. ಬಿಜೆಪಿ, ವಲಸೆಗಾರರಲ್ಲಿ ಹಿಂದೂಗಳನ್ನು ಇಟ್ಟುಕೊಳ್ಳಬೇಕು, ಮುಸ್ಲಿಮರನ್ನು ದಬ್ಬಬೇಕೆಂದು ಬಯಸುತ್ತದೆ. ನಾವು ಅದನ್ನು ಮಾಡಲು ಸಾಧ್ಯವಿಲ್ಲ" ಎಂದರು. ಬಿಜೆಪಿಯ ಅಪಪ್ರಚಾರವನ್ನು ಎದುರಿಸಲು ಜನಗಳ ನಡುವೆ ಸಿಪಿಐ(ಎಂ) ನಿರಂತರವಾಗಿ ಕೆಲಸ ಮಾಡುತ್ತಿದೆ. ಆದ್ದರಿಂದಲೇ ಕಾಂಗ್ರೆಸ್(ಐ) ಪ್ರಭಾವದ ರಾಜ್ಯಗಳಲ್ಲಾದಂತೆ ಪಶ್ಚಿಮ ಬಂಗಾಳದಲ್ಲಿ ಅದಕ್ಕೆ ಹೆಚ್ಚೇನೂ ಮುನ್ನಡೆ ಸಾಧಿಸಲಾಗಿಲ್ಲ ಎಂದರು.

ಈಗ ಮಧ್ಯಂತರ ಚುನಾವಣೆಗಳನ್ನು ಸಿಪಿಐ(ಎಂ) ನಿರೀಕ್ಷಿಸುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸುರ್ಜೀತ್ "ನರಸಿಂಹರಾವ್ ಸರಕಾರ ಹಿಡಿದಿರುವ ದಾರಿ ನೋಡಿದರೆ- ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸಿಕೊಳ್ಳುವುದರಲ್ಲಾಗಲೀ, ಆರ್ಥಿಕ ನೀತಿಗಳಲ್ಲಾಗಲೀ, ಭ್ರಷ್ಟಾಚಾರದಲ್ಲಾಗಲಿ ಅದು ಬಹಳ ದಿನ ಉಳಿಯುವಂತೆ ಕಾಣುವುದಿಲ್ಲ" ಎಂದರು. "ದೇಶದೆಡೆ ಕಾಂಗ್ರೆಸ್(ಐ) ನಿಂದ ಜನ ದೂರ ಸರಿಯುತ್ತಿದ್ದಾರೆ ಎಂದು ಉಪಚುನಾವಣೆಗಳು ತೋರಿಸಿವೆ, ಕಾಂಗ್ರೆಸ್ಸಿಗರು ಹೆಚ್ಚೆಚ್ಚು ಹತಾಶರಾಗುತ್ತಿದ್ದಾರೆ" ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೋಮುವಾದದ ವಿರುದ್ಧ ಹೋರಾಟ ನಡೆಸುವ ಬದಲು ಕಾಂಗ್ರೆಸ್(ಐ) ಸೋಮಯಜ್ಞವನ್ನು ನಡೆಸುವುದರಲ್ಲೇ ಹೆಚ್ಚು ಆಸಕ್ತಿ ತೋರುತ್ತಿದೆ. ಬಿಜೆಪಿಗಿಂತ ಹೆಚ್ಚು ಸಾಧುಗಳು ತಮ್ಮ ಬಳಿ ಇದ್ದಾರೆ ಎಂದು ತೋರಿಸ ಬಯಸುತ್ತಾರೆ. ಇದು ಅವರು ಕೋಮುವಾದವನ್ನು ಎದುರಿಸುವ ರೀತಿ ಎಂದು ಸುರ್ಜೀತ್ ವ್ಯಂಗವಾಡಿದರು.

ಕಾಂಗ್ರೆಸ್(ಐ)ನ ಮುಖಂಡತ್ವದಲ್ಲಿ ಬದಲಾವಣೆಯಾಗಬೇಕೆಂದು ಸಿಪಿಐ(ಎಂ) ಬಯಸುತ್ತದೆಯೇ ಎಂದು ಕೇಳಿದಾಗ "ನಮಗೆ ಅದರ ಧೋರಣೆಗಳ ಬಗ್ಗೆಯಷ್ಟೇ ಆಸಕ್ತಿ" ... ಆದರೆ ಕಾಂಗ್ರೆಸ್ಸಿಗರು ಯೋಚಿಸಬೇಕು- ಅವರು ಕಾಂಗ್ರೆಸ್ಸಿಗರಾಗಿ ಉಳಿಯಬೇಕಾದರೆ ಅದು ಬಿಜೆಪಿ ಬಾಪ್ಪಟದಡಿ ಸಾಧ್ಯವಿಲ್ಲ" ಎಂದರು.

ಉತ್ತರ ಪ್ರದೇಶದಲ್ಲಿನ ಸನ್ನಿವೇಶದ ಬಗ್ಗೆ ಹೇಳುತ್ತಾ ಅವರು "ನಮಗೆ ಭರವಸೆಯಿದೆ- ನಮ್ಮ ಮುಖ್ಯ ಉದ್ದೇಶ ಬಿಜೆಪಿಯನ್ನು ಸೋಲಿಸುವುದು. ಕಾಂಗ್ರೆಸ್ (ಐ) ಅದನ್ನು ಮಾಡಲಾರದು. ಅದು ಯು.ಪಿ.ಯಲ್ಲಿ ಒಂದು ಶಕ್ತಿಯಾಗಿಯೇ ಉಳಿದಿಲ್ಲ ಎಂದರೂ ತಪ್ಪಾಗಲಾರದು. ಕಾಂಗ್ರೆಯೇತರ ಜಾತ್ಯತೀತ ಶಕ್ತಿಗಳು ಒಂದಾದರೆ ಅಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವಿಲ್ಲ" ಎಂದರು. ಎಡಪಕ್ಷಗಳು ವಿಭಿನ್ನ ಜಾತ್ಯತೀತ ಶಕ್ತಿಗಳನ್ನು ಒಟ್ಟಿಗೆ ತರಲು ಪ್ರಯತ್ನಿಸುತ್ತಿದೆ. ಇದರಲ್ಲಿ ನಾವು ಯಶಸ್ವಿಯಾಗುವುದು ಖಂಡಿತ ಎಂದು ಸುರ್ಜೀತ್ ಭರವಸೆ ವ್ಯಕ್ತಪಡಿಸಿದರು.

ಕಾಂಗ್ರೆ, ಬಿಜೆಪಿಗಳು ಉತ್ತರ ನೀಡಲಿ

ಇದಕ್ಕೆ ಮೊದಲು ಸಿಪಿಐ(ಎಂ) ಕೇಂದ್ರ ಸಮಿತಿ ನೀಡಿದ ಒಂದು ಪತ್ರಿಕಾ ಹೇಳಿಕೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹಾಗೂ ಕಾಂಗ್ರೆ ಗಮನಾರ್ಹ ವಿಭಾಗಗಳ ನಡುವೆ ವ್ಯಾಪಕ ಮೈತ್ರಿ ಇಡೀ ದೇಶಕ್ಕೆ ಆತಂಕಕಾರಿಯಾದ ಸಂಗತಿ ಎಂದು ವರ್ಣಿಸಿತ್ತು. ಬಿಜೆಪಿ-ಕಾಂಗ್ರೆಸ್(ಐ) ಮೈತ್ರಿ ಈಗ ಗುಟ್ಟಾಗಿಯೇನೂ ಉಳಿದಿಲ್ಲ. ಸೀಟು ಹೊಂದಾಣಿಕೆಗಳು, ಮತದಾರರಿಗೆ ಜಂಟಿ ಅಪೀಲುಗಳು, ಜಂಟಿ ಸ್ಯಾಂಪಲ್ ಮತಪತ್ರಗಳು, ಜಂಟಿ ಪ್ರಚಾರ ಇವನ್ನೆಲ್ಲಾ ಬಹಿರಂಗ ಪಡಿಸಿವೆ. ಬರ್ದ್ವಾನ್, ಬಾಂಕುರಾ, ಮಿಡ್ನಾಪುರ್, ಜಿಲ್ಲೆಗಳಲ್ಲಿ ಇದು ಎದ್ದು ಕಂಡಿದೆ. ಉದಾಹರಣೆ ಬರ್ದ್ವಾನ್‌ನ 5047 ಗ್ರಾಮ ಪಂಚಾಯತ್ ಸ್ಥಾನಗಳಲ್ಲಿ 1125 ಸ್ಥಾನಗಳಲ್ಲಿ ಕಾಂಗ್ರೆಸ(ಐ)ಗೆ ಬಿಜೆಪಿಯ ಸಕ್ರಿಯ ಬೆಂಬಲ ದೊರೆತಿದ್ದರೆ 898 ಸ್ಥಾನಗಳಲ್ಲಿ ಬಿಜೆಪಿಗೆ ಕಾಂಗ್ರೆನ ಬೆಂಬಲ ದೊರೆತಿದೆ. ಕೇತುಗ್ರಾಮ ಎಂಬ ಹಳ್ಳಿಯಲ್ಲಿ ಶೇ. 90 ಹೊಂದಾಣಿಕೆ ಕಂಡುಬಂದಿದೆ. ರೈನಾ ಬ್ಲಾಕಿನ ಪಹಲಾನ್ ಪುರ ಗ್ರಾಮ ಪಂಚಾಯತಿಗಳಲ್ಲಿ ಕಾಂಗ್ರೆ ಒಂದೂ ಸ್ಥಾನಕ್ಕೆ ಸ್ಪರ್ಧಿಸಿಲ್ಲ. ಎಲ್ಲಾ ಸ್ಥಾನಗಳಲ್ಲಿ ಬಿಜೆಪಿಗೆ ಬೆಂಬಲ ನೀಡಿದೆ. ಪ್ರತಿ ಈ ಬ್ಲಾಕಿನ ಎಂಟು ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ಕಾಂಗ್ರೆಗೆ ಬಿಜೆಪಿ ಬೆಂಬಲ ಸಿಕ್ಕಿತು. ಮೇಮಾರಿ ಬ್ಲಾಕಿನ ಎಲ್ಲಾ 30 ಪಂಚಾಯತ್ ಸಮಿತಿ ಸ್ಥಾನಗಳಲ್ಲಿ ಕಾಂಗ್ರೆಸ್(ಐ) ಬಿಜೆಪಿ ನಡುವೆ ಸಂಪೂರ್ಣ ಹೊಂದಾಣಿಕೆಯಿತ್ತು. ಮಿಡ್ನಾಪುರ ಜಿಲ್ಲೆಯಲ್ಲಿ ಶೇ. 81 ಹೊಂದಾಣಿಕೆಯಿತ್ತು. ಪುರಾಲಿಯಾ ಜಿಲ್ಲೆಯಲ್ಲಿ ಶೇ. 29 ಹೊಂದಾಣಿಕೆಯಿತ್ತು ಎಂದು ಈ ಹೊಂದಾಣಿಕೆಯ ಹಲವು ಉದಾಹರಣೆಗಳನ್ನು ನೀಡಿದೆ.

ಕಳೆದ ಹಲವು ತಿಂಗಳಿಂದ ಕಾಂಗ್ರೆಸ್(ಐ) ಕೇಂದ್ರ ಮುಖಂಡತ್ವ ಕೋಮುವಾದೀ ಶಕ್ತಿಗಳ ಸವಾಲನ್ನು ಎದುರಿಸುವಲ್ಲಿ ಸತತವಾಗಿ ಹಿಂಜರಿಕೆ ತೋರುತ್ತಾ ಬಂದಿದೆ. ಈ ಹಿಂಜರಿಕೆಯ ಲಾಭ ಪಡೆದ ಪಶ್ಚಿಮಬಂಗಾಳದ ಕಾಂಗ್ರೆನ ಕೆಲ ವಿಭಾಗಗಳು ಸಂಕುಚಿತ ಲಾಭಕ್ಕಾಗಿ ಬಿಜೆಪಿಯೊಂದಿಗೆ ಕೈ ಮಿಲಾಯಿಸಿವೆ. ಪಶ್ಚಿಮಬಂಗಾಳದ ಕಾಂಗ್ರೆ ಜನಗಳ ವರ್ತನೆಗೆ ಕಾಂಗ್ರೆನ ಕೇಂದ್ರ ಮುಖಂಡತ್ವ ಉತ್ತರ ನೀಡಬೇಕಾಗಿದೆ. ಇನ್ನೂ ಬಿಜೆಪಿ ತಂತ್ರವಂತೂ ಅದರ ನಿಜರೂಪವನ್ನು ಬಯಲಿಗೆಳೆದಿದೆ. ತಾನು ಕಾಂಗ್ರೆಗೆ ಪರ್ಯಾಯ ನೀಡುತ್ತೇನೆ ಎಂಬ ಅದರ ಘೋಷಣೆಗಳೆಲ್ಲಾ ಟೊಳ್ಳು ಅಬ್ಬರ, ಕೆಲವು ಸೀಟುಗಳು ಸಿಗುವುದಾದರೆ ಯಾವುದೇ ಹೀನ ರಾಜಿ ಮಾಡಿಕೊಳ್ಳಲೂ, ಅತ್ಯಂತ ಸಮಯಸಾಧಕ ಕೂಟ ರಚಿಸಿಕೊಳ್ಳಲು ಅದು ಕೂಡಾ ತಯಾರು ಎಂದು ತೋರಿಸಿಕೊಂಡಿದೆ ಎಂದು ಕೇಂದ್ರ ಸಮಿತಿ ಹೇಳಿಕೆ ಬಲವಾಗಿ ಟೀಕಿಸಿದೆ.

ಹತಾಶ ಕಾಂಗ್ರೆ ಮತ್ತು ಮಿತ್ರ ಪಕ್ಷಗಳಿಂದ ಚುನಾವಣಾ ನಂತರದ ಹಿಂಸಾಚಾರ

ಪಶ್ಚಿಮ ಬಂಗಾಳದ ಪಂಚಾಯತಿ ಮತ್ತು ಮುನಿಸಿಪಲ್ ಚುನಾವಣೆಗಳಲ್ಲಿ ಸಿಪಿಐ(ಎಂ) ಹಾಗೂ ಎಡರಂಗದ ಭಾರೀ ವಿಜಯದಿಂದ ಹತಾಶರಾದ ಕಾಂಗ್ರೆಸ್(ಐ) ತನ್ನ ಚುನಾವಣಾ ಮಿತ್ರರಾದ ಬಿಜೆಪಿ ಹಾಗೂ ಝಾರ್ಖಂಡ್ ಪಕ್ಷಗಳ ನೆರವಿನಿಂದ ರಾಜ್ಯಾದ್ಯಂತ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಪೂರ್ವ ನಿಯೋಜಿತ, ಸುಸಂಘಟಿತ ಹಲ್ಲೆಗಳನ್ನು ಹರಿಯಬಿಟ್ಟಿದ್ದಾರೆ ಎಂದು ಐ.ಎಸ್.ಎಸ್. ವರದಿ ಮಾಡಿದೆ. ಎಡಪಕ್ಷಗಳ ವಿಜಯದ ಸುದ್ದಿಗಳ ಹಿಂದೆಯೇ ಇಂತಹ ಹಲ್ಲೆಗಳ ಸುದ್ದಿ ಬರಲಾರಂಭಿಸಿವೆ.

ಮಿಡ್ನಾಪುರ ಜಿಲ್ಲೆಯಲ್ಲಿ, ಮುಖ್ಯವಾಗಿ ಝಾರ್‌ಗ್ರಾಮದಲ್ಲಿ ಝಾರ್ಖಂಡ್ ಪಕ್ಷ ಕಾಂಗ್ರೆ-ಬಿಜೆಪಿಯ ಬೆಂಬಲ ಪಡೆದು ಮೇಲೂ ಸಂಪೂರ್ಣ ಪರಾಭವ ಅನುಭವಸಿರುವುದರಿಂದ ಹತಾಶರಾಗಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಮುಗಿಬೀಳಲಾರಂಭಿಸಿದರು. ಕಾಂಗ್ರೆಸ್(ಐ) ಹಾಗೂ ಬಿಜೆಪಿ ಪೂರ್ಣವಾಗಿ ಮಣ್ಣುಮುಕ್ಕಿದ ಬರ್ದ್ವಾನ್ ಜಿಲ್ಲೆಯಲ್ಲಿ ಸಿಪಿಐ(ಎಂ) ವಿಜಯೋತ್ಸವ ರ್‍ಯಾಲಿಗಳ ಮೇಲೆ ಈ ಪಕ್ಷಗಳ ಕಾರ್ಯಕರ್ತರು ಧಾಳಿ ನಡೆಸಿದರು. ಪಕ್ಷದ ಕಛೇರಿಗಳಿಗೆ ಬೆಂಕಿಯಿಟ್ಟರು.

ಬರ್ದ್ವಾನ್ ಜಿಲ್ಲೆಯ ಕರಾಂದಾ ಗ್ರಾಮದಲ್ಲಿ ಎಲ್ಲಾ ಮೂರು ಸ್ಥಾನಗಳಲ್ಲಿ ಭಾರೀ ಅಂತರದಿಂದ ಸೋತ ಐ.ಪಿ.ಎಫ್. ಹಲ್ಲೆಗೆ ಕುಮ್ಮಕ್ಕು ನೀಡಿತು. ಇದನ್ನು ಕೇಳಿದ ಗ್ರಾಮಸ್ಥರು ಪ್ರತಿಭಟಿಸಿದರು. ಇದರಿಂದಾದ ಘರ್ಷಣೆಯಲ್ಲಿ ನಾಲ್ಕು ಸಾವುಗಳು ಸಂಭವಿಸಿದವು. ಆದರೆ ಈಗ ಜನಗಳ ಉಚ್ಚಮಟ್ಟದ ಪ್ರಜ್ಞೆ ಹಾಗೂ ಆಡಳಿತದ ಮಧ್ಯಪ್ರವೇಶದಿಂದ ಪರಿಸ್ಥಿತಿ ಸಂಪೂರ್ಣವಾಗಿ ಹತೋಟಿಯಲ್ಲಿದೆ.

ಎಲ್ಲಾ ಜಿಲ್ಲಾ ಪರಿಷತ್ತುಗಳಲ್ಲಿ ಎಡರಂಗದ ವಿಜಯ

ಸಿಪಿಐ(ಎಂ) ಹಾಗೂ ಇತರ ಎಡರಂಗದ ಪಕ್ಷಗಳು ಪಶ್ಚಿಮಬಂಗಾಳದ ಎಲ್ಲಾ 16 ಜಿಲ್ಲಾ ಪರಿಷತ್ತುಗಳಲ್ಲಿ, 90 ಶೇ. ಬ್ಲಾಕ್ ಮಟ್ಟದ ಪಂಚಾಯತ್ ಸಮಿತಿಗಳಲ್ಲಿ ಹಾಗೂ 80 ಶೇ. ಗ್ರಾಮ ಪಂಚಾಯತ್‌ಗಳಲ್ಲಿ ಬಹುಮತಗಳಿಸಿದ್ದಾರೆ. 11 ಜಿಲ್ಲೆಗಳಲ್ಲಿ ಎಡರಂಗಕ್ಕೆ 1988 ರ ಅದ್ಭುತ ಸಾಧನೆಯ ಪುನರಾವರ್ತನೆಯಾಗಿದೆ. 5 ಜಿಲ್ಲೆಗಳಲ್ಲಿ ಗ್ರಾಮ ಮಟ್ಟದಲ್ಲಿ ಕಾಂಗ್ರೆಸ್(ಐ) ತುಸು ಹೆಚ್ಚು ಸ್ಥಾನ ಪಡೆದಿದೆ.

ಪಿ.ಯು.ಸಿ. ಶುಲ್ಕ ಏರಿಕೆ ಪ್ರತಿಭಟನೆಗೆ ಎಸ್.ಎಫ್.ಐ. ಕರೆ

ಪಿ.ಯು.ಸಿ. ಶುಲ್ಕವನ್ನು ಶೇ. 200ರಷ್ಟು ಸರಕಾರ ಏರಿಸಿರುವುದನ್ನು ತಕ್ಷಣ ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿ ರಾಜ್ಯದಾದ್ಯಂತ ಜೂನ್ 11ರಂದು ಪ್ರತಿಭಟಿಸಲು ಎಸ್.ಎಫ್.ಐ. ರಾಜ್ಯಸಮಿತಿ ಎಲ್ಲಾ ಘಟಕಗಳಿಗೆ ಕರೆನೀಡಿದೆ.

KRNM/BGS-405 MAG(2) PRB DECR 319-78/79

ಹಿಂದಿ ಹೇರಿಕೆ ವಿರುದ್ಧ ಜೂನ್ 11ರಂದು ವಿದ್ಯಾರ್ಥಿ ಮುಷ್ಕರ

ಸುಪ್ರಿಂ ಕೋರ್ಟ್ ತೀರ್ಪಿನ ಜಾರಿಗಾಗಿ, ಹಿಂದಿ ಹೇರಿಕೆಯ ವಿರುದ್ಧ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಮಟ್ಟದಲ್ಲಿಯ ಡೊನೇಷನ್ ಹಾವಳಿ, ಆಂಗ್ಲ ಭಾಷಾ ಮಾಧ್ಯಮಗಳ ಶಾಲೆಗಳಿಗೆ ಅನುಮತಿ ಮತ್ತಿತರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ ಜೂನ್ 11 ರಂದು ರಾಜ್ಯಾದ್ಯಂತ ಪ್ರತಿಭಟನಾ ದಿನಾಚರಣೆಯನ್ನು ಸಂಘಟಿಸಿ, ಮುಖ್ಯಮಂತ್ರಿಗಳಿಗೆ ತಂತಿ ಸಂದೇಶ ಕಳಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯ ಸಮಿತಿ ನಿರ್ಧರಿಸಿದೆ. ಅಂದು ಪ್ರತಿಭಟನಾ ಪ್ರದರ್ಶನ, ಮೆರವಣಿಗೆ ಹಾಗೂ ಧರಣಿ ಮುಂತಾದ ಹೋರಾಟವನ್ನು ಹಮ್ಮಿಕೊಳ್ಳಲಾಗಿದ್ದು, ವಿದ್ಯಾರ್ಥಿ ಪೋಷಕರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಎಸ್.ಎಫ್.ಐ. ವಿನಂತಿಸಿದೆ.

ಶಿಕ್ಷಣದ ವ್ಯಾಪಾರೀಕರಣಕ್ಕೆ ಕಡಿವಾಣ ಹಾಕಿರುವ ನ್ಯಾಯಾಲಯದ ತೀರ್ಪನ್ನು ಸರ್ಕಾರ ಚಾಚು ತಪ್ಪದೆ ಜಾರಿಗೆ ತರಬೇಕು. ಖಾಸಗೀ ಶಿಕ್ಷಣ ಸಂಸ್ಥೆಗಳ ಮಾಲೀಕರ ಲಾಬಿಗೆ ಮಣಿಯದೆ ಅಗತ್ಯಬಿದ್ದಲ್ಲಿ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಂಡು ನಡೆಸಬೇಕು. ಇದರಲ್ಲಿ ಯಾವುದೇ ಚೌಕಾಶಿಯನ್ನು ವಿದ್ಯಾರ್ಥಿ ಸಮುದಾಯ ಒಪ್ಪುವುದಿಲ್ಲ. ಜೊತೆಗೆ ಬರೀ ಇಂಜನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ವ್ಯಾಪಾರದಲ್ಲಿ ತೊಡಗಿರುವುದರಿಂದ ಮಧ್ಯಮದ ವರ್ಗದವರು ಸಹ ಈ ಶಾಲಾ ಕಾಲೇಜುಗಳ ಹತ್ತಿರ ಸುಳಿಯಲಾರದ ಸ್ಥಿತಿ ಉದ್ಭವವಾಗಿದೆ. ಈ ಲೂಟಿಯನ್ನು ನಿಲ್ಲಿಸಲು ಸುಪ್ರಿಂ ಕೋರ್ಟ್ ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕು ಎನ್ನುವ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರ ದೃಢ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಸ್ಎಫ್.ಐ. ರಾಜ್ಯ ಸಮಿತಿ ಒತ್ತಾಯಿಸಿದೆ.

ವೀರಪ್ಪಮೊಯಿಲಿಯವರ ಸರ್ಕಾರಕ್ಕೆ ಶಿಕ್ಷಣದ ಬಗ್ಗೆ ಕನಿಷ್ಠ ವೈಜ್ಞಾನಿಕ ತಿಳುವಳಿಕೆ ಇದ್ದರೆ ಕೂಡಲೇ ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಿರುವ ಮತ್ತು ಆಂಗ್ಲ ಭಾಷಾ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವ ತೀರ್ಮಾನಗಳನ್ನು ವಾಪಸ್ಸು ಪಡೆಯಬೇಕೆಂದು ಅದು ಆಗ್ರಹಿಸಿದೆ.

ಜೂನ್ 10 ರಂದು ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಧರಣಿ ಸತ್ಯಾಗ್ರಹ

ಕೊಂಕಣ ರೈಲ್ವೆಯ ಉಡುಪಿ-ಮಂಗಳೂರು ವಿಭಾಗವಲ್ಲಿ ಉದ್ಯೋಗದಲ್ಲಿ ಈಗಾಗಲೇ ಹೆಚ್ಚಿನ ಸ್ಥಾನಗಳಿಗೆ ಹೊರ ರಾಜ್ಯದವರಿಗೆ ನೇಮಕಾತಿ ಆಗಿದ್ದು, ಉಳಿದ ಕೆಲವೇ ಸ್ಥಾನಗಳಿಗೆ ಸಂತ್ರಸ್ತರಲ್ಲಿ ಅಗತ್ಯವಿರುವವರಿಗೆ ಮಾತ್ರ ನಿಯಮಾವಳಿಗಳ ಆಧಾರದಲ್ಲಿ ಆಯ್ಕೆ ಮಾಡಲಾಗುವುದು ಎಂದು ಕೊಂಕಣ ರೈಲ್ವೆ ಮುಖ್ಯ ಇಂಜಿನಿಯರ್‌ರವರು ನೀಡಿದ ಹೇಳಿಕೆಯನ್ನು ದಿನಾಂಕ 23ನೇ ಮೇ 1993 ರಂದು ನಡೆದ ಕೊಂಕಣ ರೈಲ್ವೆ ಸಂತ್ರಸ್ತ ಉದ್ಯೋಗಾರ್ಥಿಗಳ ಹೋರಾಟ ಸಮಿತಿಯ ಸಭೆಯಲ್ಲಿ ಚರ್ಚಿಸಿ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಯಿತು.

ಇದೇ ಅಧಿಕಾರಿಗಳು ಅರ್ಜಿದಾರರ ಹಾಗೂ ಈ ಇಲಾಖೆಗೆ ನೇಮಕಾತಿ ಆದವರ ವಿವರಗಳನ್ನು ನೀಡುವುದಾಗಿ ಒಪ್ಪಿಕೊಂಡಿದ್ದರೂ ಇನ್ನೂ ನೀಡಿಲ್ಲ. ಕೊಂಕಣ ರೈಲ್ವೆಯ ಉಡುಪಿ-ಮಂಗಳೂರು ವಿಭಾಗದಲ್ಲಿ ಸಂತ್ರಸ್ತ ಉದ್ಯೋಗಾರ್ಥಿಗಳಿಗೆ ಕಡ್ಡಾಯವಾಗಿ ಕೆಲಸ ಕೊಡಲೇಬೇಕು ಎಂದು ಒತ್ತಾಯಿಸುವುದಕ್ಕಾಗಿ ದಿನಾಂಕ 10 ನೇ ಮೇ 1993 ರಂದು ಉಡುಪಿ ಕಡಿಯಾಳಿಯ ಮುಖ್ಯ ಇಂಜಿನಿಯರ್‌ವರ ಕಛೇರಿಯ ಮುಂದೆ ಸಂತ್ರಸ್ತ ಉದ್ಯೋಗಾರ್ಥಿಗಳ ಧರಣಿ ಸತ್ಯಾಗ್ರಹವನ್ನು ನಡೆಸಲು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಹೋರಾಟ ಸಮಿತಿಯ ಅಧ್ಯಕ್ಷ ಶ್ರೀ ಪಿ. ವಿಶ್ವನಾಥ ರೈಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸಂತ್ರಸ್ತರನೇಕರು ಮಾತನಾಡಿದರು. ಶ್ರೀ ಪಿ. ವಿಶ್ವನಾಥ ರೈಯವರು ಹೋರಾಟದ ಅಗತ್ಯವನ್ನು ವಿವರಿಸಿ, ಈ ಹೋರಾಟಕ್ಕೆ ಉಡುಪಿಯ ಎಲ್ಲಾ ನಾಗರೀಕ ಬಾಂಧವರು ಸಹಕಾರ ನೀಡಬೇಕೆಂದು ವಿನಂತಿಸಿದರು.

ಆರಂಭದಲ್ಲಿ ಉಪಾಧ್ಯಕ್ಷ ಶ್ರೀ ಕೆ. ಪ್ರಭಾಕರ ನಾಯಕ್ ಸ್ವಾಗತಿಸಿ, ಕೊನೆಗೆ ಕಾರ್ಯದರ್ಶಿ ಶ್ರೀ ಪಿ. ವಿಶ್ವನಾಥ ವಂದಿಸಿದರು.

ಕೌಜಲಗಿ ತಾಂಡಾ ಮತ್ತು ಲಿಡಕರ ಕಾಲನಿ ಕೂಲಿಕಾರರು ಮತ್ತು ರೈತರ ರಸ್ತಾ ರೋಕೋ

ವಿಜಾಪುರ : ದಿನಾಂಕ 12ನೇ ಮೇ 1993 ರಂದು ನೀರು ಮತ್ತು ರಸ್ತೆಗಾಗಿ ಮುಂಜಾನೆ ಕರ್ನಾಟಕ ಪ್ರಾಂತ ರೈತ ಸಂಘದ ಕೌಜಲಗಿ ತಾಂಡಾ ಘಟಕದ ಕರೆಯ ಮೇರೆಗೆ ರಸ್ತಾ ರೋಕೋ ನಡೆಸಲಾಯಿತು.

ನೀರು ಬರದೆ ಇರುವ ಕಾರಣ ಲಿಡಕರ, ಸ್ವಾತಂತ್ರ್ಯಯೋಧರ ಕಾಲನಿ ಮತ್ತು ಕೌಜಲಗಿ ತಾಂಡಾದ ಜನತೆಗೆ ತೀವ್ರ ತೊಂದರೆಯಾಗಿದ್ದು ನೀರಿಲ್ಲದೆ ಬಳಲುತ್ತಿದ್ದಾರೆ. ಈ ಬಗ್ಗೆ ಅಸಿಸ್ಟೆಂಟ್ ಕಮಿಶನರ್‌ರವರಿಗೆ ಮನವಿ ನೀಡಿದ್ದರೂ ಕೂಡಾ ಯಾವುದೇ ಪರಿಹಾರ ದೊರೆಯದಿದ್ದನ್ನು ಪ್ರತಿಭಟಿಸಿ ಈ ರಸ್ತಾ ರೋಕೋವನ್ನು ಎರಡು ಗಂಟೆ ನಡೆಸಲಾಯಿತು.

ಪೋಲಿಸರ ಮಧ್ಯಪ್ರವೇಶದಿಂದ ನಗರ ಸಭೆಗೆ ಒಂದು ಮನವಿ ಸಲ್ಲಿಸಲಾಯಿತು. ಅದರಂತೆ ದಿನಾಲೂ ಎಲ್ಲಾ ಕಡೆ ಒಂದರಂತೆ ಟ್ಯಾಂಕರನ್ನು ಕಳಿಸುವ ಭರವಸೆಯನ್ನು ಅಧ್ಯಕ್ಷರು ನೀಡಿದ ನಂತರ ಕಾರ್ಯಕ್ರಮ ಮುಕ್ತಾಯವಾಯಿತು. ನಂತರ ಮುಖಂಡರು ಜಿಲ್ಲಾಧಿಕಾರಿಗಳ ಜತೆ ಚರ್ಚೆ ನಡೆಸಿದರು. ಚರ್ಚೆಯಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಭೀಮಶಿ ಕಲಾದಗಿ ಭಾಗವಹಿಸಿದ್ದರು. ರಸ್ತಾ ರೋಕೋದ ನೇತೃತ್ವವನ್ನು ಪ್ರಾಂತ ರೈತ ಸಂಘದ ತಾಲೂಕು ಮುಖಂಡರಾದ ಸೋಮಲು ಈಶ್ವರ ರಾಠೋಡ ವಹಿಸಿದ್ದರು.

ತೀಕ್ಕಧಿರ್‌ಗೆ ಮೂವತ್ತು ವರ್ಷಗಳು

ತೀಕ್ಕಧಿರ್ ಉತ್ಸವ

ತಮಿಳುನಾಡಿನ ದುಡಿಯುವ ಜನರ ದನಿಯಾಗಿರುವ ದೈನಿಕ ತೀಕ್ಕಧಿರ್ ಮೂವತ್ತು ವರ್ಷ ಪೂರ್ಣಗೊಳಿಸಿದೆ. ರಾಜಕೀಯ ಮುಖಂಡರು, ಸಾಹಿತಿಗಳು, ಪತ್ರಕರ್ತರುಗಳು, ಸಿನಿಮಾ ಕಲಾವಿದರು ತೀಕ್ಕಧಿರ್‌ಗೆ ಮೂವತ್ತು ವರ್ಷಗಳು ತುಂಬುವ ಈ ಸಂದರ್ಭದಲ್ಲಿ ನಡೆಯಲಿರುವ ಉತ್ಸವದಲ್ಲಿ ಭಾಗವಹಿಸಿತ್ತಾರೆ. ಜೂನ್ 26 ರಂದು ಮಧುರೈಯಲ್ಲಿ ಒಂದು ಬೃಹತ್ ಉತ್ಸವವು ನಡೆಯಲಿದೆ.

1963ರ ಜೂನ್ ತಿಂಗಳಲ್ಲಿ ತೀಕ್ಕಧಿರ್ ಒಂದು ವಾರಪತ್ರಿಕೆಯಾಗಿ ಪ್ರಾರಂಭವಾಯಿತು. ಈಗ ದಿನಪತ್ರಿಕೆಯಾಗಿ ಪ್ರಕಟವಾಗುತ್ತಿದೆ. ದುಡಿಯುವ ಜನರ ದನಿಯಾಗಿ, ಶೋಷಿತರ ಬಾಯಾಗಿ, ಅದು ಘರ್ಜಿಸುತ್ತಾ ಬಂದಿದೆ. ಶೋಷಿತರ ಹೋರಾಟಗಳನ್ನು ಅದು ಮುನ್ನಡೆಸುತ್ತಾ ಬಂದಿದೆ. ತಮಿಳುನಾಡಿನಲ್ಲಿ ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಹರಡುವುದರಲ್ಲಿ ಅದು ಮುಂಚೂಣಿಯಲ್ಲಿದೆ.

ಈ ಮೂವತ್ತು ವರ್ಷಗಳ ಸಾಧನೆಯನ್ನು ಪ್ರತಿಬಿಂಬಿಸುವ ಒಂದು ಬೃಹತ್ ಉತ್ಸವವನ್ನು ಆಚರಿಸಲು ನಿರ್ಧರಿಸಲಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ, ಎನ್. ಶಂಕರಯ್ಯ ಪಿ.ಆರ್. ಪರಮೇಶ್ವರನ್, ಎಸ್. ವರದರಾಜನ್, ಕೆ. ಮುತ್ತಯ್ಯ ಅಬ್ದುಲ್ ವಾಹಬ್‌ರ ಮುಂತಾದವರು ಪಾಲ್ಗೊಳ್ಳಲಿದ್ದಾರೆ. ಜನತಾದಳದ ಪತಿಯಿಂದ ಶಿವಾ ಜಿಗಣೇಶನ್, ಸಿಪಿಐ ಕಾರ್ಯದರ್ಶಿ ಆರ್. ನಲ್ಲಕಣ್ಣು ಫಾರ್ವಡ್ ಬ್ಲಾಕ್ ಹಾಗೂ ಡಿವಂಕೆ ನಾಯಕರು ಪಾಲ್ಗೊಳ್ಳಲಿದ್ದಾರೆ. ಸಿನಿಮಾ ರಂಗದಿಂದ ಕೋಮಲ್ ಸ್ವಾಮಿನಾಥನ್, ಬಾಲುಮಹೇಂದ್ರ ಚಿತ್ರ-ಸಾಹಿತಿ ವೈರಮುತ್ತು ಮುಂತಾದವರು ಹಾಗೂ ಕುಸ್ತುಕ್ಕುಡಿ ಸ್ವಾಮಿಜಿ ಅಡಿಗಳ್‌ರವರು ಹಾಗೂ ಫ್ರಂಟ್‌ಲೈನ್ ಸಂಪಾದಕ ಎನ್. ರಾಮ್, ದೇಶಾಭಿಮಾನಿ, ಪ್ರಜಾಶಕ್ತಿಯ ಸಂಪಾದಕರುಗಳು ಪಾಲ್ಗೊಳ್ಳಲಿದ್ದಾರೆ.

ಈ ಉತ್ಸವದಲ್ಲಿ ಎಡೆಬಿಡದ ಹಲವು ಕಾರ್ಯಕ್ರಮಗಳು ನಡೆಯಲಿವೆ. ನಾಟಕಗಳು, ಹಾಡುಗಳು, ಜನಪದ, ಗ್ರಾಮೀಣ ನಾಟಕಗಳು, ಮಿಮಿಕ್ರಿ, ಮುಂತಾದ ಹತ್ತು ಹಲವು ಕಾರ್ಯಕ್ರಮಗಳು ನಡೆಯಲಿವೆ.

ರಾಜ್ಯ ಸಮಿತಿಸಭೆನಿರ್ಣಯ ಬಿಜೆಪಿಗೆ ಹೆಚ್ಚು ಮತ- ಕಳವಳಕಾರಿ ಅಂಶ

ಇದೇ ಮೇ 27 ಮತ್ತು 28ರಂದು ಬೆಂ ಳೂರಿನಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸ ತಿಯ ಕಾರ್ಯದರ್ಶಿ ಮಂಡಳಿ ಸಭೆ ಸೇರಿ ರಾಜ್ಯ ರಾಜಕೀಯ ಪರಿಸ್ಥಿತಿ ಹಾಗೂ ಯಲಹ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆ ಕುರಿತು ವಿಶ್ಲೇಷಣೆ ನಡೆಸಿತು. ಯಲಹ ಉಪಚುನಾವಣೆಯಲ್ಲಿ ಜನತಾದಳವು ಸೋತಿ ವುದನ್ನೂ ಬಿಜೆಪಿ ಹೆಚ್ಚು ಮತ ಗಳಿಸಿ ಕಾಂಗ್ರೆ ಉಮೇದುವಾರ ಗೆದ್ದಿರುವುದನ್ನು ಗಂಭೀರವಾ ಪರಿಗಣಿಸಿತು.

ಕಾಂಗ್ರೆ ಸರಕಾರದ ಆರ್ಥಿಕ ನೀತಿಯಿಂದ ಗಿ ಬೆಲೆ ಹೆಚ್ಚಳ, ಭ್ರಷ್ಟಾಚಾರ, ನಿರುದ್ಯೋಗ ಳಿಂದಾಗಿ ಜನತೆ ಅಪಾರ ಸಂಕಷ್ಟಗಳನ್ನೆದುರಿ ತ್ತಿರುವಾಗ ಕಾಂಗ್ರೆ ಜಯಗಳಿಸಿದ್ದು ಆಶ್ಚರ್ಯ ವೆಂದೂ, ಬಿಜೆಪಿಯ ಕೋಮು ಧೋರಣೆಯಿ ದಾಗಿ ಇಡೀ ದೇಶವೇ ತತ್ತರಿಸುತ್ತಿರುವಾಗ ಜನ ಬಿಜೆಪಿಗೆ ಹೆಚ್ಚು ಮತ ನೀಡಿರುವುದು ಅಪಾ ಕಾರಿ ಬೆಳವಣಿಗೆಯೆಂದೂ ಸಿಪಿಐ(ಎಂ) ಅ ಪ್ರಾಯ ವ್ಯಕ್ತಮಾಡಿದೆ.

ಕಾಂಗ್ರೆ ಆರ್ಥಿಕ ನೀತಿಯಿಂದು ಉದ್ಭವಿ ತ್ತಿರುವ ಅತೃಪ್ತಿಯನ್ನು ಆಧಾರವಾಗಿಟ್ಟುಕೊಂ ಬಿಜೆಪಿ ತನ್ನ ಕೋಮುವಾದಿ ರಾಜಕೀಯ ನಡೆಸುತ್ತಿದೆ, ಅದಕ್ಕೆ ಪ್ರೋತ್ಸಾಹ ಸಿಗುತ್ತಲೂ ಇ ಈ ಸಂದರ್ಭದಲ್ಲಿ ಜನತಾದಳದ ಜ ಮತ್ತು ದೇಶದ ಜನರೆ ಎದುರಿಸುತ್ತಿರುವ ಸ ಸ್ಯೆಗಳ ಬಗ್ಗೆ ಆ ಪಕ್ಷವು ತೋರುತ್ತಿರುವ ಅಸಡ್ಡೆ ಇವೆಲ್ಲಾ ಬಿಜೆಪಿಗೆ ಬೆಂಬಲ ಹೆಚ್ಚುತ್ತಿರಲು ಕಾರ ವಾಗಿದೆ. ಆದ ಕಾರಣ ಕಾಂಗ್ರೆ ಮತ್ತು ಬಿಜೆಪಿ ವಿರುದ್ಧ ಹೋರಾಡಲು ಎಡ ಮತ್ತು ಜಾತ್ಯಾತಿ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ತೀರಾ ಅಗತ್ಯವಾ ರುವ ಇಂದಿನ ಪರಿಸ್ಥಿತಿಯಲ್ಲಿ ಜನತಾದಳ ತ ಒಳಜಗಳ ನಿಲ್ಲಿಸಿ ಸಮಾಜವಾದಿ ಜನತಾ ಪ ದೊಡನೆ ಒಂದಾಗಲು ಕೂಡಲೇ ಮುಂದಾಗ ಕೆಂಬುದು ಸಿಪಿಐ(ಎಂ)ನ ಆಶಯ. ಈ ವಿಷಯ ದಲ್ಲಿ ಆ ಎರಡು ಪಕ್ಷಗಳು ತಡಮಾಡದೆ ಕಾರ್ಯ ತತ್ಪರರಾಗಬೇಕೆಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ ಮತ್ತು ಒತ್ತಾಯಪಡಿಸಿದೆ.

ಹಾ! ಯುಗೋಸ್ಲಾವಿಯಾ!

ಪುಟ 5ರಿಂದ

ಚಳುವಳಿಯ ದೇಶಗಳು ಶಾಂತಿ ಮಾತುಕತೆಗೆ ಪ್ರಯತ್ನಿಸಿದವು. ಈ ಪ್ರಯತ್ನಗಳು ಫಲ ಕೊಡುತ್ತಿರುವ ಸೂಚನೆ ಕಂಡು ಬರುತ್ತಿರುವಾಗಲೇ ಕ್ರೋಶಿಯಾ, ಸ್ಲೋವೇನಿಯಾಗಳಿಗೆ ಜರ್ಮನಿ ಅಧಿಕೃತ ಮಾನ್ಯತೆ ನೀಡಿದ್ದು ಅದಕ್ಕೆ ಪೂರ್ಣ ವಿರಾಮ ಹಾಕಿತು. ಬೋಸ್ನಿಯರ ನಿತ್ಯ ಕದನ ನಿಲ್ಲಿಸಲು ನಡೆಸಲಾದ ಇನ್ನೊಂದು ಗಂಭೀರ ಪ್ರಯತ್ನ ವಾನ್ಸ್-ಓವೆನ್ ಯೋಜನೆ. ಇದು ಎಲ್ಲರಿಗೂ ಒಪ್ಪಿಗೆಯಾಗಿತ್ತು. ಆದರೆ ಅಧ್ಯಕ್ಷ ಕ್ಲಿಂಟನ್‌ಗೆ ಇದು ಒಪ್ಪಿಗೆಯಾಗಲಿಲ್ಲವಂತೆ. ಆದ್ದರಿಂದ ಅದು ಬಿದ್ದು ಹೋಗಿದೆ. ಅದರ ಬದಲು ಅಧ್ಯಕ್ಷ ಕ್ಲಿಂಟನ್ ಇರಾಜ್- ಮೂರರಿ ಮಿಲಿಟರಿ ಕಾರ್ಯಾಚರಣೆ ಬಗ್ಗೆ ಮಾತನಾಡುತ್ತಿದ್ದಾರೆ. ಆದರೆ ಅಮೇರಿಕಾದ ಸೇನಾ ಮುಖ್ಯಸ್ಥ ಇದು ಇನೊಂದು 'ವಿಯಾಟ್ನಾಂ' ಆದೀತು ಎಂದು ಎಚ್ಚರಿಸಿದ್ದಾರೆ.

ವಿಶ್ವಸಂಸ್ಥೆ ಹಾಸ್ಯಸ್ಪದ ಪ್ರಯತ್ನಗಳು

ವಿಶ್ವಸಂಸ್ಥೆಯ ಶಾಂತಿ ಪ್ರಯತ್ನಗಳಂತೂ ಪೂರ್ತಿಯಾಗಿ ವಿಫಲವಾಗಿದೆ. ಕ್ರೋಶಿಯಾದಲ್ಲಿ ಹೋರಾಟ ಆರಂಭವಾದಾಗಿನಿಂದ ವಿಶ್ವಸಂಸ್ಥೆ ಹಲವಾರು ನಿರ್ಣಯಗಳನ್ನು ಕೈಗೊಂಡಿದೆ. ಕ್ರೋಶಿಯಾ ಹೋರಾಟ ಆರಂಭವಾದಾಗ ಕಳಿಸಲಾದ ವಿಶ್ವಸಂಸ್ಥೆ ಪಡೆಗಳಿಗೆ ಕದನ ವಿರಾಮ ತರುವುದು ಸಾಧ್ಯವಾಗಲಿಲ್ಲ. ಹೋಗಲಿ, ಹೋರಾಟದಿಂದ ನಿರಾಶ್ರಿತರಾದವರಿಗೆ ಆಹಾರ, ವೈದ್ಯಕೀಯ, ಸಾಮಗ್ರಿ, ಸಾಗಾಣಿಕೆ ಸಹ ಅದರಿಂದ ಸಾಧ್ಯವಾಗಲಿಲ್ಲ, ಕ್ರೋಶಿಯಾ ಹೋರಾಟ ತೀವ್ರಗೊಂಡಾಗ ಸರ್ಬಿಯಾದ ಮೇಲೆ ಆರ್ಥಿಕ ದಿಗ್ಬಂಧನ ಹೇರಲಾಯಿತು. ಅದನ್ನು ಜಾರಿಗೆ ತರುವುದೂ ವಿಶ್ವಸಂಸ್ಥೆ ಪಡೆಗಳಿಗೆ ಸಾಧ್ಯವಾಗಲಿಲ್ಲ. ಬೋಸ್ನಿಯಾದಲ್ಲಿ ಹಲವಾರು ಕಡೆ ಯಾವುದೇ ಯುದ್ಧ ವಿಮಾನ ಹಾರಾಡದಂತೆ ದಿಗ್ಬಂಧನ ವಿಧಿಸಿದೆ ವಿಶ್ವಸಂಸ್ಥೆ. ಆದರೆ ರಾಕೆಟ್‌ಗಳು ಹಾರಾಡುತ್ತಲೇ ಇವೆ. ಬೋಸ್ನಿಯಾದ ಹೋರಾಟದ ತೀವ್ರತೆ, ಗಂಭೀರತೆ ಯಾವುದೇ ರೀತಿಯಲ್ಲಿ ಕಡಿಮೆಯಾಗಿಲ್ಲ. ವಿಶ್ವಸಂಸ್ಥೆ ಪಡೆಗಳಿಗೆ ಬೋಸ್ನಿಯಾದಲ್ಲೂ ನಿರಾಶ್ರಿತರಿಗೆ ಆಹಾರ, ವೈದ್ಯಕೀಯ ಸಾಮಗ್ರಿ ಸಾಗಾಣಿಕೆಯನ್ನು ಮಾಡಲು ಸಾಧ್ಯವಾಗಿಲ್ಲ. ನಿರಾಶ್ರಿತರಿಗೆ ರಕ್ಷಣೆ ಒದಗಿಸುವ ಬದಲು ತಮ್ಮ ರಕ್ಷಣೆಗೆ ಪರದಾಡುವಂತೆ ಆಗಿದೆ. ಹಲವಾರು ಬಾರಿ ವಿಶ್ವಸಂಸ್ಥೆ ಪಡೆಗಳ ಮೇಲೆ ದಾಳಿ ಮಾಡಲಾಗಿದೆ. ಇತ್ತೀಚೆಗೆ ಇನ್ನೂ ಯುದ್ಧ ನಡೆಯುತ್ತಿರುವಾಗಲೇ ಯುದ್ಧ ಅಪರಾಧಿಗಳನ್ನು ಶಿಕ್ಷಿಸುವ ಬಗ್ಗೆ ಭದ್ರತಾ ಸಮಿತಿ ಹಾಸ್ಯಸ್ಪದವಾದ ನಿರ್ಣಯ ಕೈಗೊಂಡಿದೆ.

ವಿಶ್ವಸಂಸ್ಥೆ ಏಕೆ ನಗೆಪಾಟಲಾಗಿದೆ?

ಯುಗೋಸ್ಲಾವಿಯಾದಲ್ಲಿ ಶಾಂತಿ ಕಾಪಾಡುವ, ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನದಲ್ಲಿ ವಿಶ್ವಸಂಸ್ಥೆ ಪೂರ್ಣ ಸೋತಿದೆ ಮಾತ್ರವಲ್ಲ, ಅದರ ಪ್ರಯತ್ನಗಳು ನಗೆ ಪಾಟಲಾಗಿವೆ. ಕದನದಲ್ಲಿ ತೊಡಗಿದ ಎಲ್ಲಾ ಪಕ್ಷಗಳು ವಿಶ್ವಸಂಸ್ಥೆ ಒಂದು ನಿಷ್ಪಕ್ಷಪಾತ ಸಂಸ್ಥೆ ಎಂದು ಅದಕ್ಕೆ ಗೌರವ ತೋರಿಸುವ ರೀತಿಯಲ್ಲಿ ವಿಶ್ವಸಂಸ್ಥೆ ವರ್ತಿಸಬೇಕು. ವಿಶ್ವಸಂಸ್ಥೆ ಮೊದಲಿನಿಂದಲೂ ಸರ್ಬಿಯಾದ ರಾಷ್ಟ್ರೀಯ ಉನ್ಮಾದವೇ ಯುಗೋಸ್ಲಾವಿಯಾದ ಸಮಸ್ಯೆಗಳಿಗೆ ಕಾರಣ ಎಂಬ ಪೂರ್ವಗ್ರಹದಿಂದಲೇ ಎಲ್ಲಾ ನಿರ್ಣಯಗಳನ್ನು ಕೈಗೊಳ್ಳುತ್ತಿದೆ. ಕಾರ್ಯಾಚರಣೆಯ ಯೋಜನೆಗಳನ್ನು ಹಾಕುತ್ತಿದೆ. ಇದು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯ ಧೋರಣೆ ಕೂಡಾ ಎನ್ನುವುದು ಆಕಸ್ಮಿಕವಲ್ಲ, ಈ ಧೋರಣೆಯಿಂದ ಯುಗೋಸ್ಲಾವಿಯಾದ ಐಕ್ಯತೆ, ಸಾರ್ವಭೌಮತೆಯ ಚೌಕಟ್ಟಿನೊಳಗೆ ಸಮಸ್ಯೆ ಪರಿಹರಿಸುವ ಗಂಭೀರ ಪ್ರಯತ್ನಕ್ಕೆ ತೊಡಗಲೇ ಇಲ್ಲ. ಸರ್ಬಿಯಾದ ವಿರುದ್ಧ ತೀವ್ರ ಪಕ್ಷಪಾತದ ಧೋರಣೆಯಿಂದ ವಿಶ್ವಸಂಸ್ಥೆ ಇದ್ದ ಬಿದ್ದ ಗೌರವ, ವಿಶ್ವಾಸಾರ್ಹತೆ ಕಳೆದುಕೊಂಡಿದೆ.

ಕಮ್ಯುನಿಸ್ಟ್ ಪಕ್ಷದ ಪಾತ್ರ

80ರ ದಶಕದವರೆಗೆ ಯುಗೋಸ್ಲಾವಿಯಾದ ಲೀಗ್ ಆಫ್ ಕಮ್ಯುನಿಸ್ಟ್ ಪಕ್ಷ ಯುಗೋಸ್ಲಾವಿಯಾ ಐಕ್ಯತೆ ಕಾಪಾಡುವ ಶಕ್ತಿಯಾಗಿತ್ತು. 80ರ ದಶಕದ ಕೊನೆ ಹೊತ್ತಿಗೆ ಪಕ್ಷ ತನ್ನ ಪಾತ್ರ, ಕೆಲಸದ ಬಗ್ಗೆ ಗಂಭೀರ ಸ್ವ-ವಿಮರ್ಶೆ ಮಾಡಿಕೊಂಡು ಸರಿಪಡಿಸಿಕೊಳ್ಳದೆ -ಬಹು ಪಕ್ಷೀಯ ಚುನಾವಣೆಗೆ ಹೋದದ್ದು ಈ ರಾಜಕೀಯ, ಸಾಮಾಜಿಕ, ಆರ್ಥಿಕ ಅರಾಜಕತೆಗೆ ಕಾರಣವಾಯಿತು ಆರ್ಥಿಕ, ರಾಜಕೀಯ ಸುಧಾರಣೆಗಳನ್ನು ಜಾರಿ ಮಾಡಲು ಶಿಸ್ತುಬದ್ಧ ಆ ಕಣ್ಣೋಟಕ್ಕೆ ಬದ್ಧವಾದ ಪಕ್ಷವೊಂದರ ಅಗತ್ಯ ಇದೆ ಎಂಬುದು ಯುಗೋಸ್ಲಾವಿಯಾದ ಇಂದಿನ ಘಟನೆಗಳು ಸಾರಿ ಹೇಳುತ್ತಿವೆ.

ಯುಗೋಸ್ಲಾವಿಯಾದ ವಿಘಟನೆ, ಅಲ್ಲಿನ ನಿತ್ಯಕದನ, ಜನತೆಯ ವೇದನೆ ಮೂರನೆಜಗತ್ತಿನ ಜನಮಾನಸ ಕಲಕಿವೆ. ಮುಂದೇನು? ಎಂದು ಎಲ್ಲರೂ ಕಾತರದಿಂದ ನೋಡುತ್ತಿದ್ದಾರೆ. ಅಲ್ಲಿನ ಹಿಂಸೆ ಸ್ವರೂಪ ನೋಡಿ, ಅದಕ್ಕೆ ಕುಮ್ಮಕ್ಕು ಕೊಡುತ್ತಿದ್ದ ದೇಶಗಳಲ್ಲಿ ಗಾಬರಿ ಆರಂಭವಾಗಿದೆ. ಯುಗೋಸ್ಲಾವಿಯಾದ ಯಾದವೀಕಲಹ, ಇತರ ಯುರೋಪಿಯನ್ ದೇಶಗಳಿಗೆ ಹರಡುವುದು ಬಹಳ ಅಸಂಭವವಾದ ಮಾತೇನಲ್ಲ ಎಂದು ಎಲ್ಲರಿಗೂ ಗೊತ್ತು. ಆದರೂ ಶಾಂತಿ ಸಂಧಾನದ ಯಾವ ಆಶಾಕಿರಣಗಳು ಕಾಣುತ್ತಿಲ್ಲ. ಯುಗೋಸ್ಲಾವಿಯಾ ಸಮಸ್ಯೆ ಯಾವ ರೀತಿ ಪರಿಹಾರವಾಗುತ್ತದೆ ಎಂಬುದು ಮುಂದಿನ ಜಗತ್ತಿನ ವಿದ್ಯಮಾನಗಳಿಗೆ ಮುನ್ಸೂಚಿಯಾಗಲಿದೆ.

ಹೀಗೂ ಉಂಟೇ, ನಮ್ಮ ದೇಶದಲ್ಲಿ

ಪುಟ 1 ರಿಂದ

ಕಡಿತ, ಸಚಿವರ ಕುಟುಂಬಕ್ಕೆ ಪ್ರವಾಸ ಭತ್ಯೆ ಅವಕಾಶಕ್ಕೆ ಕತ್ತರಿ ಇವು ಮಸೂದೆಗಳಲ್ಲಿ ಅಡಕವಾಗಿರುವ ಅಂಶಗಳು. ಶಾಸಕರ ಪಿಂಚಣಿ ಮೊತ್ತವನ್ನು 2500 ರೂ.ನಿಂದ 1000ಕ್ಕೆ ಇಳಿಸುವ ಹಾಗೂ ಮಾಜಿ ಶಾಸಕನ ಹಾಗೂ ಅವರ ಕುಟುಂಬಕ್ಕೆ ವೈದ್ಯಕೀಯ ಸೌಲಭ್ಯ ಒದಗಿಸುವ ನಿಯಮವನ್ನು ರದ್ದುಪಡಿಸುವ ಅಂಶಗಳೂ ಅಡಕವಾಗಿವೆ.

ಸಂಸತ್ ಸದಸ್ಯರ ವೇತನ ಮೊದಲಾದ ಸೌಲಭ್ಯಗಳನ್ನು ಏರಿಸುವ ಸಂಬಂಧದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ಲೋಕಸಭೆ ಅಧಿವೇಶದಲ್ಲಿ ಒಂದು ಮಸೂದೆ ಮಂಡನೆಯಾಯಿತು. ಅದಕ್ಕೆ ಆಕ್ಷೇಪಪಡಿಸಿದ್ದು ಒಬ್ಬರೇ ಒಬ್ಬ ಸದಸ್ಯ ಸದನದಲ್ಲಿ ಸಿಪಿಐ(ಎಂ) ನಾಯಕನಾಗಿರುವ ಸೋಮನಾಥ ಚಟರ್ಜಿ ಅವರೇ ಈ ಸದಸ್ಯ

ಜನಸಾಮಾನ್ಯರು ಸಂಕಷ್ಟದ ಬೇಗುದಿಯಲ್ಲಿ ಬೇಯುತ್ತಿರುವಾಗ ಅವರ ಪ್ರತಿನಿಧಿಗಳು ಈ ರೀತಿ ಸೌಲಭ್ಯಗಳನ್ನು ಅನುಭವಿಸುವುದು ಸರಿಯಲ್ಲ. ಅದಕ್ಕೆ ಕಾಲವಿನ್ನೂ ಪಕ್ವವಾಗಿಲ್ಲ ಎಂದು ತಮ್ಮ ಆಕ್ಷೇಪಣೆ ಹೇಳಿಕೆಯಲ್ಲಿ ಚಟರ್ಜಿ ನುಡಿ ದ್ದರು.

ಈ ಹಿಂದೆ ಕೂಡಾ ಎಡಪಕ್ಷಗಳು ಇದ ರೀತಿಯ ನಿಲುವನ್ನು ತಳೆದಿರುವುದು ಇತಿಹಾಸ ಪುಟಗಳಲ್ಲಿ ದಾಖಲಾಗಿದೆ. ಜನರ ಬಗ್ಗೆ ನೈಜ ಕ ಕಳಿ ಹೊಂದಿರುವವರು ಮಾತ್ರವೇ ಈ ಧ ತಳೆಯಲು ಸಾಧ್ಯ. 'ಜನಪ್ರತಿನಿಧಿ' ಯಾ ಮಾತ್ರಕ್ಕೆ ಜನರಿಗಾಗಿ ನಯಾ ಪೈಸೆಯ ಕೆಲ ಮಾಡದಿದ್ದರೂ ಅವರ ಹೆಸರಿನಲ್ಲಿ ಎಲ್ಲಾ ಸೌ ಭ್ಯಗಳನ್ನು ಉಪಭೋಗಿಸುವುದು ಪರಿಪಾಠವಾ ರುವ ಈ ದಿನಗಳಲ್ಲಿ ತ್ರಿಪುರಾದ ಸಿಪಿಐ(ನೇತೃತ್ವದ ಸರಕಾರದ ಕ್ರಮ ಹಾಗೂ ಲೋಕ ಭೆಯಲ್ಲಿ ಆ ಪಕ್ಷದ ಪ್ರತಿನಿಧಿ ಹೊಂದಿದ ನಿಲು ದೇಶಕ್ಕೆ ಮಾದರಿ ಆಗಬಲ್ಲವು

(ಐ.ಎನ್.ಎನ್

ಕಾಂ. ಎಂ.ಕೆ. ಫಂದೆ
ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ
ಸಾರ್ವಜನಿಕ ವಲಯದಲ್ಲಿ
ಕಾರ್ಮಿಕರನ್ನುದ್ದೇಶಿಸಿ
ಮಾತನಾಡಲಿದ್ದಾರೆ
ದಿನಾಂಕ 10 ನೇ ಜೂನ್ 1993
ಸಂಜೆ 5.00 ಗಂಟೆಗೆ
ಎನ್.ಜಿ.ಒ ಹಾಲ್‌ನಲ್ಲಿ
ಕಾಂ. ಎಸ್. ಸೂರ್ಯನಾರಾಯಣ ರಾ
ಸಿ.ಐ.ಟಿ.ಯು
ಅಖಿಲಭಾರತ ಉಪಾಧ್ಯಕ್ಷರು
ಅಧ್ಯಕ್ಷತೆ ವಹಿಸುತ್ತಾರೆ

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ ತಿಮ್ಮಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಪಿ.ರಾಮಚಂದ್ರರಾವ್